ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ



ನಾವು ಗುಲಾಮರಲ್ಲ



ಸಂಪುಟ 10 | ಸಂಚಿಕೆ 24 | ಪುಟ 16 | ಜೂನ್ 12, 2016 | ರೂ. 10/-

web: www.janashakthi.co.in e-mail : js_weekly@yahoo.com

ಅತ್ತ ದರಿ ! ಇತ್ತ ಪುಲಿ !



ಎಡ ಪರ್ಯಾಯದತ್ತ



ಸರಕಾರಿ ನೌಕರರಿಗೆ, ಪೊಲೀಸರಿಗೆ ಮುಷ್ಕರ, ಪ್ರತಿಭಟನೆ ಹಕ್ಕು ಇದೆ



ಗರಿಷ್ಠ ಭಾಷಣ ಕನಿಷ್ಠ ಶಾಸನ



ದಲಿತ ಅಭಿವೃದ್ಧಿ 'ಕಳಪೆ'


ತಿಥಿ : ಹಲವು ಪದರಗಳು



ರೇಷನ್ - ಆಧಾರ್ ಲಿಂಕ್ ಮೋಸ

ಬಿಜೆಪಿ ಸರಕಾರಕ್ಕೆ ಎರಡನೇ ವಾರ್ಷಿಕಾಚರಣೆಯ ಆಡಂಬರ ಬಹುಪಾಲು ಭಾರತೀಯರಿಗೆ ಆರ್ಥಿಕ ವಿಪತ್ತಿನ ನೋವು

–ಸಿಪಿಐ(ಎಂ) ಪೊಲಿಟ್‌ಬ್ಯುರೊ



ಬಿಜೆಪಿ ಸರಕಾರ ಅಧಿಕಾರದಲ್ಲಿ ಎರಡು ವರ್ಷಗಳನ್ನು ಪೂರ್ಯೆಸಿರುವುದನ್ನು ಬಹಳ ಆಡಂಬರದಿಂದ ಆಚರಿಸುತ್ತಿದೆ, ಹಲವು ಸಾಧನೆಗಳ ಬಗ್ಗೆ ಅಬ್ಬರಿಸುತ್ತಿದೆ. ಆದರೆ ಅದರ ಈ ಎರಡು ವರ್ಷಗಳು ಒಂದು ಹೊಸ 'ತ್ರಿಮೂರ್ತಿ'ಯನ್ನು ಕೆತ್ತಲಾಗುತ್ತಿದೆ ಎಂಬುದನ್ನು ದೃಢಪಡಿಸಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವಿಮರ್ಶಿಸಿದೆ.

ಈ ಮೂರು ಮುಖಗಳೆಂದರೆ, ಒಂದು, ಆಕ್ರಮಣಕಾರೀ ಕೋಮುವಾದಿ ಧ್ರುವೀಕರಣದ ಮೂಲಕ ಭಾರತೀಯ ಗಣತಂತ್ರದ ಜಾತ್ಯಾತೀತ ಪ್ರಜಾಪ್ರಭುತ್ವವನ್ನು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸುವ ಅವಿರತ ಪ್ರಯತ್ನ, ಎರಡು, ಹಿಂದಿನ ಯುಪಿಎ ಸರಕಾರಕ್ಕಿಂತ ಹೆಚ್ಚು ಆಕ್ರಮಣಕಾರೀ ರೀತಿಯಲ್ಲಿ ನವ–ಉದಾರವಾದಿ ಧೋರಣೆಗಳ ಅನುಸರಣೆಯ ಮೂಲಕ ಬಹುಪಾಲು ಜನಗಳ ಮೇಲೆ ಅಭೂತಪೂರ್ವ ಹೊರೆಗಳು ಮತ್ತು ಮೂರು, ಸಂಸದೀಯ ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ಬುಡಮೇಲು ಮಾಡುವ, ಪ್ರಜಾಪ್ರಭುತ್ವ ಹಕ್ಕುಗಳನ್ನು, ನಾಗರಿಕ ಸ್ವಾತಂತ್ರ್ಯಗಳನ್ನು ದಮನ ಮಾಡುವ ಸರ್ವಾಧಿಕಾರಶಾಹಿ ಕ್ರಮಗಳು.

ಇತ್ತ ಬಹುಪಾಲು ಭಾರತೀಯ ಜನತೆಯ ಪಾಲಿಗೆ ಬಂದಿರುವುದು ಒಂದು ಆರ್ಥಿಕ ವಿಪತ್ತೇ ಹೊರತು ಹರ್ಷಾಚರಣೆಗೆ ಯಾವ ಕಾರಣವೂ ಇಲ್ಲ ಎಂದು ಪೊಲಿಟ್‌ಬ್ಯುರೊ ಹೇಳಿದೆ. ಈ ಅನಾಹುತಗಳ ಪಟ್ಟಿಯನ್ನೇ ಅದು ಕೊಟ್ಟಿದೆ(ಈ ಬಗ್ಗೆ ಪುಟ 10 ನೋಡಿ),

ಮೇ 29 ಮತ್ತು 30ರಂದು ನವದೆಹಲಿಯಲ್ಲಿ ಸಭೆ ಸೇರಿದ ಪೊಲಿಟ್‌ಬ್ಯುರೊ ದೇಶದಲ್ಲಿನ ಪ್ರಸಕ್ತ ಪರಿಸ್ಥಿತಿಯನ್ನು ವಿಮರ್ಶಿಸಿದ ನಂತರ ನೀಡಿರುವ ಈ ಹೇಳಿಕೆ ಅಭೂತಪೂರ್ವ ಬರಪರಿಸ್ಥಿತಿಯಿಂದ ನರಳುತ್ತಿರುವ ಜನಗಳಿಗೆ ತಕ್ಷಣ ಪರಿಹಾರಗಳನ್ನು ಒದಗಿಸಬೇಕು, ಇದಕ್ಕೆ ಯುದ್ಧೋಪಾದಿಯಲ್ಲಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದೆ. ಸಾವಿರಾರು ಬಡಜನರು ಮತ್ತು ಲಕ್ಷಾಂತರ ಜಾನುವಾರುಗಳು ಈ ಬರಕ್ಕೆ ಬಲಿಯಾಗಿವೆ. ಸುಪ್ರಿಂ ಕೋರ್ಟ್ ಮಧ್ಯಪ್ರವೇಶಿಸಿದರೂ ಕೇಂದ್ರ ಸರಕಾರ ಈ ದಿಕ್ಕಿನಲ್ಲಿ ಮಾಡಿರುವುದು ಬಹಳ ಕಡಿಮೆ ಎಂದು ಸಿಪಿಐ(ಎಂ) ಖೇದ ವ್ಯಕ್ತಪಡಿಸಿದೆ.

ಕೋಮುವಾದಿ ಧ್ರುವೀಕರಣ ತೀವ್ರಗೊಳ್ಳುತ್ತಿದೆ

ಆರೆಸ್ಸೆಸ್–ಬಿಜೆಪಿ 2017ರಲ್ಲಿ ಉತ್ತರಪ್ರದೇಶ ವಿಧಾನಸಭಾ ಚುನಾವಣೆಗಳಿಗೆ ಪೂರ್ವಸಿದ್ಧತೆಯಾಗಿ ಕೊಮುವಾದಿ ಭಾವೋದ್ವೇಗಗಳನ್ನು ಬಡಿದೆಬ್ಬಿಸುವ ಪ್ರಯತ್ನಗಳನ್ನು ಮತ್ತೆ ಆರಂಭಿಸಿದೆ. ಆ ರಾಜ್ಯದ ಹಲವು ಭಾಗಗಳಲ್ಲಿ ಭಜರಂಗ ದಳ ಶಸ್ತ್ರಾಸ್ತ್ರ ತರಬೇತಿ ಶಿಬಿರಗಳನ್ನು ನಡೆಸುತ್ತಿದೆ ಎಂದು ವರದಿಯಾಗಿದೆ.

ಇದು ಕೋಮು ತಿಕ್ಕಾಟಗಳನ್ನು, ಅಶಾಂತಿಯನ್ನು ಉದ್ರೇಕಿಸುವ ಒಂದು ಕಸರತ್ತು ಎಂಬುದು ಸ್ಪಷ್ಟ, ಈ ಮೂಲಕ ಕೊಮು ಧ್ರುವೀಕರಣದ ಚುನಾವಣಾ ಲಾಭ ಪಡೆಯುವ ಹುನ್ನಾರವಿದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ. ಇಂತಹ ಅತ್ಯಂತ ಹೊಲಸು 'ವೋಟ್‌ಬ್ಯಾಂಕ್' ರಾಜಕೀಯ ದೇಶದ ಸಾಮಾಜಿಕ ಹಂದರವನ್ನು ದುರ್ಬಲಗೊಳಿಸುತ್ತದೆ ಎಂದಿರುವ ಪೊಲಿಟ್‌ಬ್ಯುರೊ ಇಂತಹ ಚಟುವಟಿಕೆಗಳನ್ನು ಬಲವಾಗಿ ಖಂಡಿಸುತ್ತ ಕೇಂದ್ರ ಸರಕಾರ ಮತ್ತು ಉತ್ತರಪ್ರದೇಶ ರಾಜ್ಯ ಸರಕಾರ ಇವುಗಳ ವಿರುದ್ಧ ದೇಶದ ಕಾನೂನಿನ ಪ್ರಕಾರ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

ಆಫ್ರಿಕಾ ಮೂಲದ ಜನಗಳ ಮೇಲೆ ಜನಾಂಗವಾದೀ ದಾಳಿಗಳು

ಭಾರತದಲ್ಲಿರುವ ಆಫ್ರಿಕಾ ಮೂಲದ ಜನಗಳ ಸಾವಿಗೆ ಕಾರಣವಾಗುವ ಹಿಂಸಾಚಾರ ಹೆಚ್ಚುತ್ತಿರುವ ವರದಿಗಳು ಪ್ರಕಟವಾಗುತ್ತಿವೆ. ದೇಶದ ರಾಜಧಾನಿಯಲ್ಲೆ ಇಂತಹ ಹಿಂಸಾಚಾರ ನಡೆಯುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದಿರುವ ಪೊಲಿಟ್‌ಬ್ಯುರೊ ಇವು ಭಾರತ ಮತ್ತು ಆಫ್ರಿಕನ್ ದೇಶಗಳ ಶತಮಾನಗಳ ಬಾಂಧವ್ಯಗಳನ್ನು ಬುಡಮೇಲು ಮಾಡುತಿತವೆ, ಈಗಾಗಲೇ ಇದು ರಾಜತಾಂತ್ರಿಕಸ ಸಂಬಂಧಗಳನ್ನು ತಟ್ಟುವ ಆಯಾಮ ಪಡೆದಿದೆ ಎಂದು ಖೇದ ವ್ಯಕ್ತಪಡಿಸಿದೆ.

ಕೇಂದ್ರ ಸರಕಾರ ತಕ್ಷಣ ಮಧ್ಯಪ್ರವೇಶಿಸಿ ತಪ್ಪಿತಸ್ಥರ ಮೇಲೆ, ದ್ವೇಷ ಹರಡುವವರ ಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು, ಭಾರತದ ಪ್ರತಿಷ್ಠೆಗೆ ಇನ್ನಷ್ಟು ಘಾತವಾಗದಂತೆ ತಡೆಯಲು ಇದು ಅಗತ್ಯ ಎಂದು ಅದು ಹೇಳಿದೆ.

ವಿಧಾನಸಭಾ ಚುನಾವಣೆಗಳ ಪರಾಮರ್ಶೆ

ಸಿಪಿಐ(ಎಂ)ನ ಪಶ್ಚಿಮ ಬಂಗಾಲ, ಕೇರಳ, ತಮಿಳುನಾಡು ಮತ್ತು ಅಸ್ಸಾಂ ರಾಜ್ಯಸಮಿತಿಗಳು ಸಭೆ ಸೇರಿ ಈ ಚುನಾವಣೆಗಳಲ್ಲಿ ಸಿಪಿಐ(ಎಂ) ಕಾರ್ಯನಿರ್ವಹಣೆ ಮತ್ತು ಚುನಾವಣೋತ್ತರ ಪರಿಸ್ಥಿತಿಗಳ ಬಗ್ಗೆ ವಿವರವಾದ ವರದಿಗಳನ್ನು ತಯಾರಿಸಲಿವೆ. ಇವುಗಳ ಆಧಾರದಲ್ಲಿ ಜೂನ್ 18ರಿಂದ 20ರ ವರೆಗೆ ಸಭೆ ಸೇರುವ ಪಕ್ಷದ ಕೇಂದ್ರ ಸಮಿತಿ ತಮ್ಮ ಪರಾಮರ್ಶೆ ನಡೆಸುತ್ತದೆ ಎಂದು ಪೊಲಿಟ್‌ಬ್ಯುರೊ ಹೇಳಿಕೆ ತಿಳಿಸಿದೆ.

ಸಿಪಿಐ(ಎಂ)ನ ಚುನಾವಣಾ ಕಾರ್ಯತಂತ್ರಗಳನ್ನು ವಿಮರ್ಶಿಸುತ್ತ ಪಶ್ಚಿಮ ಬಂಗಾಲದಲ್ಲಿನ ಚುನಾವಣಾ ಕಾರ್ಯತಂತ್ರ ಕಾಂಗ್ರೆಸ್‌ಪಕ್ಷದೊಂದಿಗೆ ಮೈತ್ರಿ ಅಥವ ತಿಳುವಳಿಕೆ ಇರುವುದಿಲ್ಲ ಎಂಬ ಪಕ್ಷದ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯ ಆಧಾರದಲ್ಲಿ ಕೇಂದ್ರ ಸಮಿತಿ ಕೈಗೊಂಡ ನಿರ್ಧಾರಕ್ಕೆ ಅನುಗುಣವಾಗಿಲ್ಲ ಎಂದು ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ಫಲಿತಾಂಶಗಳ ನಂತರದ ಹಿಂಸಾಚಾರ

ಚುನಾವಣಾ ಫಲಿತಾಂಶಗಳ ಪ್ರಕಟಣೆಯ ನಂತರ ತೃಣಮೂಲ ಕಾಂಗ್ರೆಸ್ ಪಕ್ಷ ಸಿಪಿಐ(ಎಂ) ಮತ್ತು ಇತರ ಪ್ರತಿಪಕ್ಷಗಳ ಮೇಲೆ ವ್ಯಾಪಕ ಹಿಂಸಾಚಾರವನ್ನು ಹರಿಯಬಿಟ್ಟಿದೆ. ಹಲವು ಸಿಪಿಐ(ಎಂ) ಕಾರ್ಯಕರ್ತರ ಕೊಲೆಯಾಗಿದೆ, 600ಕ್ಕೂ ಹೆಚ್ಚು ಸಿಪಿಐ(ಎಂ) ಮತ್ತು ಸಾಮೂಹಿಕ ಸಂಘಟನೆಗಳ ಕಚೇರಿಗಳನ್ನು ಧ್ವಂಸ ಮಾಡಲಾಗಿದೆ. ಈ ದಾಳಿಗಳು ತೃಣಮೂಲ ಕಾಂಗ್ರೆಸ್ ಸೋತ ಕ್ಷೇತ್ರಗಳಲ್ಲೇ ಹೆಚ್ಚಾಗಿ ನಡೆಯುತ್ತಿವೆ. ತೃಣಮೂಲ ಕಾಂಗ್ರೆಸ್ ವಿರುದ್ಧ ಮತನೀಡಿದವರ ವಿರುದ್ಧ ಭಾರೀ ದಂಡ ಹಾಕಲಾಗುತ್ತಿದೆ.

ಇಂತಹ ಪರಿಸ್ಥಿತಿಗಳಲ್ಲಿ ಜನತೆಯ ಐಕ್ಯತೆಯ ಶಕ್ತಿಯೇ ಸರಿಯಾದ ಉತ್ತರ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ರಾಜ್ಯದಲ್ಲಿ ಪ್ರಜಾಪ್ರಭುತ್ವ ಮತ್ತು ನಾಗರಿಕ ಹಕ್ಕುಗಳ ಕೊಲೆಗಳನ್ನು ಐಕ್ಯತೆಯಿಂದ ಪ್ರತಿರೋಧಿಸಬೇಕು ಎಂದು ಪಶ್ಚಿಮ ಬಂಗಾಲ ಜನತೆಗೆ ಕರೆ ನೀಡಿದೆ.

ಕೇರಳದ ಜನತೆಗೆ ನಮನ

ವಿಧಾನಸಭಾ ಚಉನಾವಣೆಗಳಲ್ಲಿ ಕೇರಳದ ಜನತೆ ಎಲ್‌ಡಿಎಫ್‌ನ ಮೇಲೆ ಭಾರೀ ಪ್ರಮಾಣದಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಕ್ಕಾಗಿ ಅವರಿಗೆ ನಮನಗಳನ್ನು ಸಲ್ಲಿಸಿದೆ. ಜನತೆಗೆ ನೀಡಿದ ವಚನಗಳನ್ನು ಈಡೇರಿಸುವ ನಿರ್ಧಾರದೊಂದಿಗೆ ಎಲ್‌ಡಿಎಫ್ ಅಧಿಕಾರ ವಹಿಸಿಕೊಂಡಿದೆ.

ಚುನಾವಣಾ ಫಲಿತಾಂಶಗಳ ನಂತರ ಆರೆಸ್ಸೆಸ್‌ನವರು ಸಿಪಿಐ(ಎಂ) ಮತ್ತು ಎಲ್‌ಡಿಎಫ್ ಮೇಲೆ ಈಗಾಗಲೇ 41 ದಾಳಿಗಳನ್ನು ನಡೆಸಿದ್ದಾರೆ. ಇಬ್ಬರು ಸಂಗಾತಿಗಳು ಪ್ರಾಣ ಕಳಕೊಂಡಿದ್ದಾರೆ. ಈಗ ಮಂತ್ರಿಯಾಗಿ ಪ್ರತಿಜ್ಞೆ ಸ್ವೀಕರಿಸಿರುವ ಚುನಾಯಿತ ಶಾಸಕರೂ ಸೇರಿದಂತೆ 82 ಸಂಗಾತಿಗಳು ಗಾಯಗೊಂಡಿದ್ದಾರೆ.

ಜನತೆಯ ತೋರ್ಪಿಗೆ ಗೌರವ ಕೊಡಿ, ಇಂತಹ ಮಾರಣಾಂತಿಕ ದಾಳಿಗಳನ್ನು ನಿಲ್ಲಿಸಿ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆರೆಸ್ಸೆಸ್/ಬಿಜೆಪಿಗೆ ಕರೆ ನೀಡಿದೆ.

---

aAiAvEAzAgEEzAA

ಯಾವುದೇ ಚಲನೆಯಿಲ್ಲದವರಿಗೆ
ತಮ್ಮನ್ನು ಸರಪಣಿಯಲ್ಲಿ
ಬಂಧಿಸಿಡಲಾಗಿದೆ ಎಂದು
ಹೇಗೆ ಗೊತ್ತಾಗಬೇಕು?



–ರೋಸಾ ಲಕ್ಸಬರ್ಗ್
(1919ರಲ್ಲಿ ಕೊಲೆಯಾದ
ಖ್ಯಾತ ಜರ್ಮನ್
ಕಮ್ಯುನಿಸ್ಟ್ ನಾಯಕಿ)

ಮೋದಿ ಸರಕಾರದ ಎರಡು ವರ್ಷಗಳಲ್ಲಿ 19ನೇ ಡೀಸೆಲ್ ಬೆಲೆಯೇರಿಕೆ

ಮತ್ತು 16ನೇ ಪೆಟ್ರೋಲ್ ಬೆಲೆಯೇರಿಕೆ

ಸರಕಾರದ ದುಂದುವೆಚ್ಚದ ಆಚರಣೆಗೆ ಜನಗಳು ಹಣ ತೆರಬೇಕು!

–ಪ್ರತಿಭಟಿಸಲು ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ

ಎರಡು ವಾರಗಳಲ್ಲೇ ಎರಡನೇ ಬಾರಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಏರಿಸಲಾಗಿದೆ, ಪೆಟ್ರೋಲಿನ ಮೂಲಬೆಲೆ ಲೀಟರಿಗೆ 2.25ರೂ. ಮತ್ತು ಡೀಸೆಲ್‌ನದ್ದು ರೂ. 2.26 ರಂತೆ ಏರಿದೆ. ಇದು ಮೋದಿ ಸರಕಾರ ಅಧಿಕಾರಕ್ಕೆ ಬಂದ ನಂತರದ 19ನೇ ಡೀಸೆಲ್ ಬೆಲೆಯೇರಿಕೆ ಮತ್ತು 16ನೇ ಪೆಟ್ರೋಲ್ ಬೆಲೆಯೇರಿಕೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ನೆನಪಿಸಿದೆ.

ಬಿಜೆಪಿ ಸರಕಾರ ಅತ್ತ ತನ್ನ ಅಸ್ತಿತ್ವದ ಎರಡು ವರ್ಷಗಳ ವೈಭವೋಪೇತ ಆಚರಣೆ ನಡೆಸುತ್ತಿರುವಾಗಲೆ ಜನತೆಯ ಮೇಲೆ ಈ ಹೊಸ ಹೊರೆಗಳನ್ನು ಹಾಕಲಾಗಿದೆ. ಸರಕಾರದ ಈ ದುಂದುವೆಚ್ಚದ ಹೊರೆಯನ್ನು ಜನಗಳು ಭರಿಸುವಂತೆ ಮಾಡಲಾಗುತ್ತಿದೆ ಎಂದು ಪೊಲಿಟ್‌ಬ್ಯುರೊ ಟೀಕಿಸಿದೆ.

ಕೃಷಿ ಸಂಕಟ ಆಳಗೊಳ್ಳುತ್ತಿರುವಾಗ ಡೀಸೆಲ್ ಬೆಲೆಗಳಲ್ಲಿ ಈ ಭಾರೀ ಏರಿಕೆ ಬಿಕ್ಕಟ್ಟನ್ನು ಉಲ್ಬಣಗೊಳಿಸುತ್ತದೆ. ಕೊಳವೆ ಬಾವಿಗಳಿಂದ ನೀರು ಪಡೆಯಲು ಡೀಸೆಲ್ ಅನಿವಾರ್ಯ. ದೇಶದ ಹಲವು ಭಾಗಗಳಲ್ಲಿ ಬರ ಮತ್ತು ಕುಡಿಯುವ ನೀರಿನ ಕೊರತೆಯಿಂದ ನರಳುತ್ತಿರುವಾಗ ಈ ರೀತಿ ಡೀಸೆಲ್ ಬೆಲೆಗಳನ್ನು ಏರಿಸಿರುವುದು ಜನಗಳ ಬದುಕಿಗೇ ಕಂಟಕ ತರಲಿದೆ ಎಂದು ಅದು ಖೇದ ವ್ಯಕ್ತಪಡಿಸಿದೆ.

ಸರಕಾರ ಈ ಪ್ರತಿ ಏರಿಕೆಯಿಂದಲೂ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಸುಂಕಗಳಿಂದ ಲಾಭಗಳನ್ನು ಗಿಟ್ಟಿಸುತ್ತಿದೆ. ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳ ಮೇಲಿನ ನಿಯಂತ್ರಣಗಳನ್ನು ತೆಗೆದಾಗ ಈ ತೆರಿಗೆಗಳನ್ನು ಸೊನ್ನೆಗೆ ಇಳಿಸಲಾಗುವುದು ಎಂದು ಸರಕಾರ ಹೇಳಿತ್ತು. ತೈಲ ಮಾರಾಟ ಕಂಪನಿಗಳು ಒಂದು ಲೀಟರ್ ಪೆಟ್ರೋಲಿಗೆ 25.31ರೂ. ತೆರುತ್ತಿರುವಾಗ ಜನಗಳು ಅದಕ್ಕೇ 65.60 ರೂ.ತೆರಬೇಕಾಗುತ್ತಿದೆ. ಇವೆರಡರ ನಡುವಿನ ವ್ಯತ್ಯಾಸವನ್ನು ಸರಕಾರ ತನ್ನ ಆದಾಯವಾಗಿ ಗಿಟ್ಟಿಸಿಕೊಳ್ಳುತ್ತಿದೆ.

ಕಳೆದ ಎರಡು ವರ್ಷಗಳಲ್ಲೇ ಸತತವಾಗಿ ಐದು ಬಾರಿ ಈ ತೆರಿಗೆಗಳನ್ನು ಹೆಚ್ಚಿಸಲಾಗಿದೆ. ಇದನ್ನು ಯಾರೂ ಒಪ್ಪಲು ಸಾಧ್ಯವಿಲ್ಲ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಸರಕಾರ ಒಂದೆಡೆಯಲ್ಲಿ ಶ್ರೀಮಂತರಿಗೆ ತೆರಿಗೆ ರಿಯಾಯ್ತಿಗಳನ್ನು ದಯಪಾಲಿಸುತ್ತ, ಇನ್ನೊಂದೆಡೆಯಲ್ಲಿ ಜನಗಳ ಮೇಲೆ ಹೊರೆ ಹಾಕಿ ಹಣ ಸಂಗ್ರಹಿಸುತ್ತಿದೆ ಎಂದು ಟೀಕಿಸಿದೆ.

ಈ ದರ ಏರಿಕೆಗಳನ್ನು ಜನಗಳ ಮೇಲೆ ಅಭೂತಪೂರ್ವ ಹೊರೆಗಳನ್ನು ಹಾಕುವುದನ್ನು ಪ್ರತಿಭಟಿಸಿ, ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ.

ಒಂದೆಡೆ ಡೀಸೆಲ್ ಮೇಲೆ ತೆರಿಗೆ ಏರಿಸಿ ರೈತರ ಮೇಲೆ ಹೊರೆ ಮತ್ತೊಂದೆಡೆ ಕೃಷಿಯ ಹೆಸರಿನಲ್ಲಿ ಜನಗಳ ಮೇಲೆ ಸೆಸ್ ಹೊರೆ

ಎಐಕೆಸ್ ಪ್ರತಿಭಟನೆ

ಪೆಟ್ರೋಲ್ ಮತ್ತು ಡೀಸೆಲ್ ದರಗಳನ್ನು ಮತ್ತೊಮ್ಮೆ ಏರಿಸಿರುವುದನ್ನು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಬಲವಾಗಿ ಖಂಡಿಸಿದೆ. ದೇಶದ ಬಹುಭಾಗ ತೀವ್ರ ಬರಪರಿಸ್ಥಿತಿಯನ್ನು ಎದುರಿಸುತ್ತಿರುವಾಗ ನೀರಾವರಿಗೆ ನೀರು ಪಡೆಯಲು ಡೀಸೆಲ್ ಬಳಸಲೇ ಬೇಕಾದ ರೈತರ ಮೇಲೆ ಹೆಚ್ಚಿನ ಹೊರೆ ಹಾಕಿ ಅವರ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಲಾಗುತ್ತಿದೆ ಎಂದು ಅದು ಟೀಕಿಸಿದೆ.

ಇದೊಂದು ಎರಡು ವರ್ಷಗಳನ್ನು ಪೂರ್ಯೆಸಿರುವ ಸರಕಾರ ಜನತೆಗೆ ನೀಡಿರುವ ಉಡುಗೊರೆ ಎಂದು ಹೀಯಾಳಿಸಿರುವ ಎಐಕೆಎಸ್ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ನಿಯಮಿತವಾಗಿ ಏರಿಸುತ್ತ ಸರಕಾರ ಲಾಭ ಮಾಡಿಕೊಳ್ಳುತ್ತಿರುವ ಈ ವಿಧಾನವನು ಪ್ರತಿಭಟಿಸುವುದಾಗಿ ಹೇಳಿದೆ.

ಒಂದೆಡೆ ಸರಕಾರ ತನ್ನ ಲಾಭ ಹೆಚ್ಚಿಸಿಕೊಳ್ಳಲು ರೈತರೂ ಸೇರಿದಂತೆ ಎಲ್ಲ ಜನಸಾಮಾನ್ಯರ ಮೇಲೆ ಹೊರೆ ಹೆಚ್ಚಿಸುತ್ತಲೇ ಕೃಷಿಗೂ ಸಂಕಟ ಹೆಚ್ಚಿಸುತ್ತಿರುವ ಸರಕಾರ ಇನ್ನೊಂದೆಡೆಯಲ್ಲಿ ಕೃಷಿಗೆ ನೆರವಾಗುವ ಹೆಸರಿನಲ್ಲಿ ಎಲ್ಲ ಸೇವೆಗಳ ಮೇಲೆ 0.5ಶೇ. ಅಧಿಭಾರ (ಸೆಸ್)ನ್ನೂ ಕೂಡ ಜೂನ್ 1ರಿಂದ ಜಾರಿಗೊಳಿಸಿ ಆಮೂಲಕವೂ ಜನಗಳ ಮೇಲಿನ ಹೊರೆಯನ್ನು ಹೆಚ್ಚಿಸಿದೆ ಎಂದು ಎಐಕೆಎಸ್ ಬಲವಾಗಿ ಪ್ರತಿಭಟಿಸಿದೆ.

ಇತರ ಸೋದರ ಸಂಘಟನೆಗಳೊಂದಿಗೆ ಸೇರಿ–ಕೊಂಡು ಈ ಏರಿಕೆಗಳನ್ನು ಪ್ರತಿಭಟಿಸಬೇಕು ಎಂದು ಅದು ತನ್ನ ಘಟಕಗಳಿಗೆ ಕರೆ ನೀಡಿದೆ.

ಸಂಪಾದಕೀಯ

ಅತ್ತ ಬಿಜೆಪಿ ಇತ್ತ ಕಾಂಗ್ರೆಸ್ : ಎಡ ಪರ್ಯಾಯವೇ ದಾರಿ

ಕೇಂದ್ರದಲ್ಲಿ ಬಿಜೆಪಿ ಸರಕಾರ ಎರಡು ವರ್ಷಗಳನ್ನು ಪೂರೈಸಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಮೂರು ವರ್ಷಗಳನ್ನು ಪೂರೈಸಿದೆ. ಇದು ಈ ಎರಡೂ ಸರಕಾರಗಳ ಪಕ್ಷಗಳ ಸಾಧನೆಗಳ ಬೆಲೆ ಕಟ್ಟಲು ಸಕಾಲ. ಕರ್ನಾಟಕದ ಜನತೆ ಕೇಂದ್ರದಲ್ಲಿ ಕಾಂಗ್ರೆಸ್ ನಾಯಕತ್ವದ ಯುಪಿಎ ಸರಕಾರದ ಭ್ರಷ್ಟಾಚಾರ ಮತ್ತು ಜನವಿರೋಧಿ ಆರ್ಥಿಕ ನೀತಿಗಳಿಂದ ಕೂಡಿದ ದುರಾಡಳಿತದಿಂದ ಬೇಸತ್ತು ಬಿಜೆಪಿಗೆ ಮಣೆ ಹಾಕಿತ್ತು. ಅದಕ್ಕಿಂತ ಮೊದಲು ರಾಜ್ಯದಲ್ಲಿ ಬಿಜೆಪಿ ಸರಕಾರದ ಡಿಟ್ಟೊ (ಭ್ರಷ್ಟಾಚಾರ ಮತ್ತು ಜನವಿರೋಧಿ ಆರ್ಥಿಕ ನೀತಿಗಳಿಂದ ಕೂಡಿದ ದುರಾಡಳಿತದಿಂದ) + ಕೋಮುವಾದಿ ಅಟ್ಟಹಾಸಗಳಿಂದ ಬೇಸತ್ತು ಕಾಂಗ್ರೆಸ್ ಸರಕಾರ ತಂದಿತ್ತು. ಬಹುಶಃ ದೇಶದಲ್ಲೇ ಹೀಗೆ ಎರಡೂ ಪಕ್ಷಗಳನ್ನೂ ಟ್ರೈ ಮಾಡಿ ಬೇಗನೇ ರಿಜೆಕ್ಟ್ ಮಾಡಿದ ಇಂತಹ ರಾಜ್ಯ ಕರ್ನಾಟಕ ಮಾತ್ರ ಅಂತ ಕಾಣ್ತದೆ.

ಕೇಂದ್ರದಲ್ಲಿ ಬಿಜೆಪಿ ಸರಕಾರ ತನ್ನ ಆಡಳಿತದ ಎರಡನೇ ವಾರ್ಷಿಕೋತ್ಸವವನ್ನು ಬಹಳ ಅದ್ದೂರಿಯಿಂದ ಆಚರಿಸಿದೆ. ಮೋದಿಯವರ ಚುನಾವಣಾ ಘೋಷಣೆ 'ಅಚ್ಛೆ ದಿನ್ ಆಯೆಂಗೇ' ಸಾವಿರಾರು ಜೋಕುಗಳ ವಸ್ತುವಾಗಿದೆ. 'ಗರಿಷ್ಟ ಆಡಳಿತ ಮತ್ತು ಕನಿಷ್ಟ ಸರಕಾರ' – ಅವರ ಇನ್ನೊಂದು ಘೋಷಣೆ 'ಗರಿಷ್ಟ ಭಾಷಣ ಮತ್ತು ಕನಿಷ್ಟ ಶಾಸನ' ಎಂದು ಬದಲಾಗಿದೆ. ಬಿಜೆಪಿಯ (ಕಪ್ಪು ಹಣ 100 ದಿನಗಳೊಳಗೆ ತಂದು ಪ್ರತಿಯೊಬ್ಬರ ಖಾತೆಯಲ್ಲಿ 15 ಲಕ್ಷ ಜಮಾ ಮಾಡುವ, ಪ್ರತಿ ವರ್ಷ 2 ಕೋಟಿ ಉದ್ಯೋಗ ಸೃಷ್ಟಿಸುವ, ಕೈಗಾರಿಕೆ ಮತ್ತು ಕೃಷಿ ಉತ್ಪಾದನೆಗೆ ಉತ್ತೇಜನ ಕೊಟ್ಟು ಬೆಳವಣಿಗೆ ದರ ಶೇ. 8ಕ್ಕಿಂತ ಮೇಲೇರಿಸುವ, ಭಯೋತ್ಪಾದನೆಯನ್ನು ನಿಲಿಸುವ, ರೈತರಿಗೆ ಶೇ. 50 ಲಾಭ ಬರುವಂತೆ ಬೆಳೆಗಳಿಗೆ ಬೆಂಬಲ ಬೆಲೆ ಕೊಡುವ) ಚುನಾವಣಾ ಆಶ್ವಾಸನೆಗಳು ಹುಸಿಯಾಗಿವೆ. ಆದರೂ ಯುಪಿಎ ಸರಕಾರದ ಹಳೆಯ (ಜನ–ವಿರೋಧಿ ಮತ್ತು ಕೆಲವು ರೇಗಾದಂತಹ ಒಳ್ಳೆಯ ಕಾರ್ಯಕ್ರಮಗಳನ್ನು) ಮದ್ಯವನ್ನು ಹೊಸ ಬಾಟಲಿಗೆ ತುಂಬಿಸಿ ಹೊಸ ಲೇಬಲುಗಳೊಂದಿಗೆ ಮಾರ್ಕೆಟಿಂಗ್ ಮಾಡುವ ಕಸರತ್ತು ಮುಂದುವರೆದಿದೆ. 'ಮೇಕ್ ಇನ್ ಇಂಡಿ–ಯಾ', 'ಸ್ವಚ್ಛ ಭಾರತ್', 'ಬೇಟಿ ಪಡಾವೋ ಬೇಟಿ ಬಚಾವೊ', 'ಜನ ಧನ್', 'ಸ್ಟಾರ್ಟ್ ಅಪ್ ಇಂಡಿಯಾ' ಮುಂತಾದ ಘೋಷಣೆಗಳು ಪುಂಖಾನುಪುಂಖವಾಗಿ ಬರುತ್ತಿವೆ. ಅಷ್ಟೇ ಬೇಗ ಪೊಳ್ಳು ಮತ್ತು ಹುಸಿ ಎಂದು ಸಾಬೀತಾಗುತ್ತಿವೆ. ಇದರಿಂದ ಇನ್ನಷ್ಟು ಹೊಸ ಹುಸಿ ಘೋಷಣೆಗಳನ್ನು ಕೊಡಬೇಕಾಗಿದೆ.

ಬಿಜೆಪಿ ಸರಕಾರ ಇತ್ತೀಚೆಗೆ ಕೊಚ್ಚಿಕೊಂಡ ಕೆಲವು 'ಸಾಧನೆ'ಗಳ ಸತ್ಯಾಸತ್ಯತೆಗಳನ್ನು ನೋಡಿದರೆ ಇದು ತಿಳಿಯುತ್ತದೆ. ಎಲ್.ಪಿ.ಜಿ. ಸಬ್ಸಿಡಿ ಸೋರಿಕೆಯಲ್ಲಿ 2 ವರ್ಷಗಳಲ್ಲಿ 15 ಸಾವಿರ ಕೋಟಿ ಉಳಿಸಿದೆ ಎಂದು ಬಿಜೆಪಿ ಕತೆ. ಉಳಿಸಿದ್ದು ಕೇವಲ 143 ಕೋಟಿ ಎಂಬುದು ಸತ್ಯ. 3 ಕೋಟಿ ಬಡ ಕುಟುಂಬಗಳಿಗೆ ಎಲ್.ಪಿ.ಜಿ. ಕನೆಕ್ಶನ್ ಕೊಡಲಾಗಿದೆ ಎಂಬುದು ಬಿಜೆಪಿ ಕಂತೆ. ಕೇವಲ 60 ಲಕ್ಷ ಕನೆಕ್ಶನ್ ಕೊಡಲಾಯಿತು ಎಂಬುದು ಕಹಿ ಸತ್ಯ. 1.65 ಕೋಟಿ ನಕಲಿ ರೇಶನ್ ಕಾರ್ಡುಗಳನ್ನು ಹುಡುಕಿ ತೆಗೆದು ಹಾಕಲಾಯಿತು ಎಂಬುದು ಅವರ ಕತೆ. ಅವರು 56 ಲಕ್ಷ ರೇಶನ್ ಕಾರ್ಡುಗಳನ್ನು ಮಾತ್ರ ತೆಗೆದು ಹಾಕಿದ್ದು. ಅವುಗಳಲ್ಲಿ ಹಲವು ಅಸಲಿ ಕಾರ್ಡುಗಳೂ ಇದ್ದವು ಎಂಬುದು ವಿಚಿತ್ರ ಆದರೂ ನಿಜ. ಮೊದಲ 100 ದಿನಗಳಲ್ಲಿ 20 ಕೋಟಿ ಜನಧನ್ ಅಕೌಂಟು ತೆರೆಯಲಾಗಿದೆ ಎಂದು ಟಾಂ ಟಾಂ ಮಾಡಲಾಯಿತು. ಆದರೆ ಆಗಿದ್ದು 8.76 ಕೋಟಿ ಮಾತ್ರ. ಭಾರತ ಜಗತ್ತಿನಲ್ಲೇ ಅತ್ಯಂತ ವೇಗದ ಬೆಳವಣಿಗೆ ಸಾಧಿಸಿದೆ ಎಂದು ಡಂಗುರ ಸಾರಲಾಯಿತು. ಈ ಸರಕಾರದ ಹೊಸ ಜಿಡಿಪಿ ಮತ್ತು ದರ ಬಹಳ ವಿವಾದಕ್ಕೊಳಗಾಗಿದೆ. ಸರಕಾರದ ಸಂಖ್ಯೆ ತೆಗೆದು–ಕೊಂಡರೂ ಜಿಡಿಪಿ ದರದಲ್ಲಿ ಭಾರತದ್ದು 4ನೇ ಸ್ಥಾನ.

ಈಗಾಗಲೇ ಹೇಳಿದ ಹಾಗೆ ಸರಕಾರದ 2015–16ರ ಜಿಡಿಪಿ ದರ (ಶೇ. 7.6) ವಿವಾದಿತವಾಗಿದೆ. ಏಕೆಂದರೆ ಅದು ಇತರ ಆರ್ಥಿಕ ಚಟುವಟಿಕೆಗಳ ಬಗೆಗಿನ ಅಂಕೆಸಂಖ್ಯೆಗಳ ಜತೆ ತಾಳೆಯಾಗುವುದಿಲ್ಲ. ಕೈಗಾರಿಕಾ ಬೆಳವಣಿಗೆ ಸೂಚ್ಯಂಕ ಕೇವಲ ಶೇ. 2ರಷ್ಟು ಏರಿದೆ. ಕೃಷಿ ಬೆಳವಣಿಗೆ ದರ ಕೇವಲ ಶೇ. 1.2 ಇತ್ತು. ರೈಲ್ವೇಯ ಒಟ್ಟು ಟನ್–ಕಿಲೋಮೀಟರ್ ಶೇ. 4.5 ರಷ್ಟು ಕಡಿಮೆಯಾಯಿತು. ಸರಕಾರದ ಬಳಕೆ ಏರಿಕೆ ಶೇ. 12.8ರಿಂದ 2.2ಕ್ಕೆ ಇಳಿಯಿತು. ಉತ್ಪಾದಕ ಆಸ್ತಿಯ ಸೃಷ್ಟಿಯ ದರ ಶೇ. 4.9ರಿಂದ ಶೇ. 3.9ಕ್ಕೆ ಇಳಿಯಿತು. ಒಟ್ಟು ಬಂಡವಾಳ ಸಂಚಯ ಶೇ. 32.3ರಿಂದ ಶೇ. 31.2ಕ್ಕೆ ಇಳಿಯಿತು. ಹಾಗಾದರೆ ಜಿಡಿಪಿ ದರ ಶೇ. 7.6 ಮೋದಿಯ ಮಾರ್ಕೆಟಿಂಗ್ ಟೀಮ್‌ನ ಮಂಡೆಯಿಂದಲ್ಲದೆ ಮತ್ತೆಲ್ಲಿಂದ ಉದುರಿತು? ಅದೇ ರೀತಿ 2015–16ರ ಕೊನೆಯ ತ್ರೈಮಾಸಿಕ (ಜನವರಿ–ಮಾರ್ಚ್ 2016) ಜಿಡಿಪಿ ದರ ಶೇ. 7.9 ಸಹ ವಿವಾದಿತವಾಗಿದೆ. ಈ ಅವಧಿಯ ಇತರ ಆರ್ಥಿಕ ಚಟುವಟಿಕೆಯ ಅಂಕೆಸಂಖ್ಯೆಗಳೊಂದಿಗೆ ತಾಳೆಯಾಗುತ್ತಿಲ್ಲ: ಕೈಗಾರಿಕಾ ಬೆಳವಣಿಗೆ ದರ ಕೇವಲ ಶೇ. 0.1; ಸಾಮೂಹಿಕ ಉತ್ಪಾದನೆ ಶೇ. 1.1ರಷ್ಟು ಕುಗ್ಗಿತು; ರೈಲ್ವೇಯ ಒಟ್ಟು ಟನ್–ಕಿಲೋಮೀಟರ್ ಶೇ. 8.4 ರಷ್ಟು ಕಡಿಮೆಯಾಯಿತು; ಒಟ್ಟು ಬಂಡವಾಳ ಸಂಚಯ ಶೇ. 1.9ರಷ್ಟು ಕುಗ್ಗಿತು; ಕೃಷಿ ಬೆಳವಣಿಗೆ ಶೇ. 2.3 ರಷ್ಟು ಮಾತ್ರ ಇತ್ತು. ಈ ತಾಳೆಯಾಗದ ಅಂಶಗಳನ್ನು ತೆಗೆದು ಹಾಕಿದರೆ ಜನವರಿ–ಮಾರ್ಚ್ 2016 ಜಿಡಿಪಿ ದರ ಕೇವಲ ಶೇ. 3.9 ರಷ್ಟಾಗುತ್ತದೆ ಎಂದು ಹೇಳಲಾಗಿದೆ.

ಜನರನ್ನು ಬಾಧಿಸುವ ಆವಶ್ಯಕ ಬೆಲೆ ಏರಿಕೆ, ಆರೋಗ್ಯ ವೆಚ್ಚ ಏರಿಕೆ, ಶಿಕ್ಷಣದ ವೆಚ್ಚ ಏರಿಕೆ, ಮಹಿಳೆಯರ ಸುರಕ್ಷತೆ, ವಿದ್ಯಾರ್ಥಿಗಳ ಸ್ಕಾಲರ್ ಶಿಪ್ ಎಲ್ಲದರಲ್ಲೂ ಬಿಜೆಪಿಯ ವೈಫಲ್ಯದಿಂದಾಗಿಯೇ ಅದಕ್ಕೆ ಬರಿಯ ಹಸಿ ಸುಳ್ಳುಗಳನ್ನು ಉತ್ಪಾದಿಸುವ ಮಾರ್ಕೆಟಿಂಗ್ ಮಶೀನ್ ಸಾಕಾಗುವುದಿಲ್ಲ. ಆಗಾಗ ಗೋಮಾಂಸ ನಿಷೇಧ, ಘರ್ ವಾಪಸಿ, ಲವ್ ಜೆಹಾದ್, ಬಾಂಗ್ಲಾದೇಶಿಗಳ 'ಅಪಾಯ' ಮುಂತಾದ ಹೊಸ ಭೂತಗಳನ್ನು ಸೃಷ್ಟಿಸಬೇಕಾಗುತ್ತದೆ ಅಥವಾ ಮರುಕಳಿಸಬೇಕಾಗುತ್ತದೆ.

ಕರ್ನಾಟಕದ ಕಾಂಗ್ರೆಸ್ ಸರಕಾರದ ಮೂರು ವರ್ಷಗಳ ಆಡಳಿತದ ಕತೆಯೂ ಬಹಳ ಭಿನ್ನವಾಗಿಲ್ಲ. ಬಹುಪಾಲು ತಾಲೂಕುಗಳಲ್ಲಿ ಬರ ಇರುವುದರಿಂದ ಕನಿಷ್ಟ ಕೇಂದ್ರ ಸರಕಾರದಂತೆ ಅದ್ದೂರಿ ದುಬಾರಿ ವಾರ್ಷಿಕೋತ್ಸವ ಆಚರಿಸಲಿಲ್ಲ ಎಂಬುದಷ್ಟೇ ಸಮಾಧಾನದ ವಿಷಯ. ಕಾಂಗ್ರೆಸ್ ಸರಕಾರದ ಅತಿ ದೊಡ್ಡ ವೈಫಲ್ಯವೆಂದರೆ ಅಭೂತಪೂರ್ವ ಸಾವಿರ ದಾಟಿದ ರೈತರ ಸರಣಿ ಆತ್ಮಹತ್ಯೆಗಳು. ಅದೇ ರೀತಿ ಎರಡು ವರ್ಷಗಳ ಬರ ಪರಿಹಾರ ನಿರ್ವಹಿಸುವಲ್ಲಿ ನಿರ್ಲಕ್ಷ, ಅದಕ್ಷತೆ, ವೈಫಲ್ಯ ಸಹ ಅಕ್ಷಮ್ಯ. ಕೃಷಿಯ ಬೆಳವಣಿಗೆಗೆ (ನೀರಾವರಿ ಮುಂತಾದ) ಯಾವುದೇ ಕ್ರಮ ಕೈಗೊಳ್ಳದೆ ಅದು ಶೇ. 4.5ರಷ್ಟು ಕುಂಠಿತಗೊಂಡಿದೆ. ಕೈಗಾರಿಕೆ ಬೆಳವಣಿಗೆಗೆ ವಿದೇಶಿ ಬಂಡವಾಳವನ್ನು ಮಾತ್ರ ಅವಲಂಬಿಸಿದ್ದು ಅದು ಬಾರದೆ ಕೈಗಾರಿಕೆ ಬೆಳವಣಿಗೆ ಐಟಿ ಕ್ಷೇತ್ರದ ಮೇಲೆ ಅವಲಂಬಿತವಾಗಿದೆ. ಹಿಂದಿನ ಬಿಜೆಪಿ ಸರಕಾರಕ್ಕಿಂತಲಾದರೂ ಕಡಿಮೆ ಭ್ರಷ್ಟ ಸರಕಾರವೆಂದು ಜನ ಆರಂಭದ ದಿನಗಳಲ್ಲಿ ಸ್ವಲ್ಪ ಸಮಾಧಾನ ಪಟ್ಟುಕೊಳ್ಳುತ್ತಿರುವಾಗಲೇ ಕೆ.ಪಿ.ಎಸ್.ಸಿ. ಹಗರಣದಿಂದ ಆರಂಭಿಸಿ ಹಾಸಿಗೆ–ದಿಂಬು ಹಗರಣದ ವರೆಗೆ ಹಗರಣಗಳ ಸರಣಿ ಆರಂಭವಾಗಿದೆ. ಲೋಕಾಯುಕ್ತವನ್ನು ದುರ್ಬಲಗೊಳಿಸಿ ಎ.ಸಿ.ಬಿ. ಸ್ಥಾಪಿಸ ಹೊರಟ ಮೇಲಂತೂ ಹಗರಣದಲ್ಲಿ ಜೈಲಿಗೆ ಹೋದ ಯೆಡಿಯೂರಪ್ಪನವರೂ ಇದು ಅತ್ಯಂತ ಭ್ರಷ್ಟ ಸರಕಾರ ಎಂದು ದೂಷಿಸುವ ಧೈರ್ಯ ಮಾಡುವಂತಾಗಿದೆ!

ಆದರೆ ಕಾಂಗ್ರೆಸ್ ಸರಕಾರದ ಅತಿ ದೊಡ್ಡ ವೈಫಲ್ಯವೆಂದರೆ ಬಿಜೆಪಿಯ ಕೋಮುವಾದಿ ಅಟ್ಟಹಾಸ ನಿಲ್ಲಿಸಿ ಕೋಮುವಾದಿ ಶಕ್ತಿಗಳನ್ನು ಮಟ್ಟ ಹಾಕಲು ಸಾಧ್ಯವಾಗದೆ ಹೋಗಿದ್ದು. ಕರಾವಳಿ ಕರ್ನಾಟಕದಲ್ಲಿ ಅವ್ಯಾಹತವಾಗಿ ಪೋಲಿಸರ ಶಾಮೀಲಿನೊಂದಿಗೆ ನಡೆಯುತ್ತಿರುವ ಅನೈತಿಕ ಪೋಲಿಸ್‌ಗಿರಿ, ಲವ್ ಜಿಹಾದ್, ಘರ್ ವಾಪಸಿಯಂತಹ ಅಟ್ಟಹಾಸದ ಬಗ್ಗೆ ತಲೆ ಕೆಡಿಸಿಕೊಳ್ಳದಿರುವುದು, ಅಲ್ಲಿ ಕಾಂಗ್ರೆಸ್ ಸರಕಾರದ ಆಡಳಿತ ಇದೆಯೇ ಎಂದು ಸಂಶಯ ಬರುವ ಹಾಗಿದೆ. ಡಾ. ಕಲಬುರ್ಗಿಯವರ ಹಂತಕರನ್ನು ಈ ವರೆಗೂ ಸೆರೆ ಹಿಡಿಯಲು ಸಾಧ್ಯವಾಗಿಲ್ಲ. ಅವರ ಗೌರವಾರ್ಥ ತರಬೇಕಾಗಿದ್ದ ಮೌಢ್ಯ–ವಿರೋಧಿ ಕಾನೂನು ಸಂಘ ಪರಿವಾರದ ಒತ್ತಡದಿಂದ ನೆನೆಗುದಿಗೆ ಬಿದ್ದಿದೆ. ದಲಿತರ ಮೇಲೆ ದೌರ್ಜನ್ಯ ತಡೆಗಟ್ಟುವುದರಲ್ಲೂ ನಿರ್ಲಕ್ಷ, ಅದಕ್ಷತೆ, ವೈಫಲ್ಯ ಕಂಡು ಬಂದಿದೆ. ರೈತ, ಕೃಷಿ ಕೂಲಿಕಾರರ, ಕಾರ್ಮಿಕರ, ಆದಿವಾಸಿಗಳ ಪ್ರಜಾಸತ್ತಾತ್ಮಕ ಹಕ್ಕೊತ್ತಾಯಗಳನ್ನು ತಿರಸ್ಕರಿಸುವಲ್ಲಿ ಮತ್ತು ಹೋರಾಟವನ್ನು ದಮನ ಮಾಡುವಲ್ಲಿ ಮಾತ್ರ ಈ ಸರಕಾರ ಅತ್ಯಂತ ಮುತುವರ್ಜಿಯಿಂದ ಕೆಲಸ ಮಾಡುತ್ತದೆ. ಜೂನ್ 2ರ ಸರಕಾರಿ ನೌಕರರ ಮುಷ್ಕರ ಮತ್ತು ಜೂನ್ 4ರ ಪೋಲಿಸ್ ಪ್ರತಿಭಟನೆ ವಿರುದ್ಧ ಎಸ್ಮಾ ಪ್ರಯೋಗಿಸಿ ದಮನಿಸುವ ತ್ವರಿತ ಕ್ರಮದಿಂದ ಇದು ತಿಳಿಯುತ್ತದೆ.

ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷ ಮತ್ತು ಅದರ ಸರಕಾರಗಳ ನಡುವೆ ಯಾವುದೇ ವ್ಯತ್ಯಾಸ ಪ್ರಾಯೋಗಿಕವಾಗಿ ಕಾಣದಿರುವುದಕ್ಕೆ ಅವು ಎರಡೂ ಬೂರ್ಜ್ವಾ–ಭೂಮಾಲಕ ಆಳುವ ವರ್ಗಗಳ ಪ್ರತಿನಿಧಿಗಳಾಗಿರುವುದೇ ಕಾರಣ. ಜನತೆಯನ್ನು ಜಾತಿ–ಧರ್ಮಗಳ ಆಧಾರದ ಮೇಲೆ ಒಡೆಯುವುದು, ಅವರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನಿಸುವುದು, ಆಳುವ ವರ್ಗಗಳ ಪರವಾದ ಆರ್ಥಿಕ ನೀತಿಗಳನ್ನು ಹೇರಲು ಅಗತ್ಯ. ಆದ್ದರಿಂದ ಜನಪರ ಪರ್ಯಾಯ ನೀತಿಗಳನ್ನು ರೂಪಿಸಿ ಜಾರಿ ಮಾಡುವುದನ್ನು ಕಾಂಗ್ರೆಸ್–ಬಿಜೆಪಿಗಳಿಂದ ನಿರೀಕ್ಷಿಸಲಾಗದು. ಇನ್ನೂ ರಾಜ್ಯದ ಜೆಡಿ–ಎಸ್ ನಡೆಯನ್ನು ಗಮನಿಸಿದವರಿಗೆ ಅದು ಪರ್ಯಾಯ ಒದಗಿಸಲಾಗದು ಎಂಬುದು ಸ್ವಯಂವಿದಿತ.

ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಿಗೆ ಸೆಡ್ಡು ಹೊಡೆದು ಸೆಕ್ಯುಲರ್ ಪರ್ಯಾಯ ಜನಪರ ನೀತಿಗಳನ್ನು ರೂಪಿಸಿ, ಅವುಗಳಿಗೆ ಜನಬೆಂಬಲ ಪಡೆದು, ಅವುಗಳ ಜಾರಿಗಾಗಿ ಶ್ರಮಿಸುತ್ತಿರುವ ಎಡ ಪಕ್ಷಗಳ ನಾಯಕತ್ವದ ರಂಗಗಳೇ ನಿಜವಾದ ಪರ್ಯಾಯ ಎಂದು ಕೇರಳ, ತ್ರಿಪುರಾದ ಅನುಭವಗಳಿಂದ ಸಿದ್ಧವಾಗಿದೆ. ಕೇರಳ ಸತತವಾಗಿ ಹೆಚ್ಚಿನ ಮಾನವ ಅಭಿವೃದ್ಧಿ ಸೂಚ್ಯಂಕಗಳಲ್ಲಿ ಮೊದಲ ಸ್ಥಾನದಲ್ಲಿರುವುದು, ತ್ರಿಪುರಾ ಸಹ ಅದೇ ಹಾದಿ ಹಿಡಿದಿರುವುದು ಗಮನಾರ್ಹ. ವಿವಿಧ ರಾಜ್ಯಗಳಲ್ಲಿ 2015–16ರ ಸಾಲಿನಲ್ಲಿ ರೇಗಾ ಉದ್ದೇಶಗಳ ಜಾ–ರಿಯ ಮಟ್ಟ ಅಳೆದ ಸ್ವತಂತ್ರ ಅಧ್ಯಯನವೊಂದರ ವರದಿ ಪ್ರಕಾರ, ತ್ರಿಪುರಾ 26.8 (ಗರಿಷ್ಟ 30ರಲ್ಲಿ)ಅಂಕ ಗಳಿಸಿ ಮೊದಲ ಸ್ಥಾನದಲ್ಲಿದೆ. ತ್ರಿಪುರಾ ಶೇ. 95 ಮನೆಗಳಿಗೆ ಕೆಲಸ ಒದಗಿಸಿದೆ (ರಾಷ್ಟ್ರೀಯ ಸರಾಸರಿ 50%). ಪ್ರತಿ ಮನೆಗೆ ವರ್ಷದಲ್ಲಿ ಒದಗಿಸಿದ ಸರಾಸರಿ ಕೆಲಸದ ದಿನಗಳು, 15 ದಿನಗಳೊಳಗೆ ಕೂಲಿ ಪಾವತಿ ಮಾಡಿದ ಪ್ರಮಾಣ, ಕೆಲಸ ಪೂರ್ಣಗೊಳಿಸಿದ ಪ್ರಮಾಣ – ಈ ಮೂರು ಅಂಕೆ ಸಂಖ್ಯೆಗಳನ್ನು ಇದಕ್ಕಾಗಿ ಬಳಸಲಾಗಿದೆ. 'ಅತ್ತ ದರಿ ಇತ್ತ ಪುಲಿ' ಎಂಬಂತೆ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಿಂದ ಭ್ರಮ ನಿರಸನಗೊಂಡಿರುವ, ಅವುಗಳ ಅಪಾಯ ಮನ ಗಂಡಿರುವ, ಜೆಡಿ(ಎಸ್) ಪಕ್ಷದ ಅವಕಾಶವಾದಿ ವರ್ತನೆಗಳಿಂದ ಬೇಸತ್ತಿರುವ ಕರ್ನಾಟಕದ ಜನತೆಯನ್ನು ಎಡ ಪರ್ಯಾಯದತ್ತ ಸೆಳೆಯಲು ಎಡ–ಪ್ರಜಾಸತ್ತಾತ್ಮಕ ಶಕ್ತಿಗಳು ಶ್ರಮಿಸಬೇಕಾಗಿದೆ. ಇದಕ್ಕಾಗಿ ಪರ್ಯಾಯ ನೀತಿಗಳನ್ನು ನಿರೂಪಿಸಿ ಪ್ರಚಾರ ಮಾಡಬೇಕಾಗಿದೆ. ಜೂನ್ 6ರಂದು ಬೆಂಗಳೂರಿನಲ್ಲಿ ನಡೆಯಲಿರುವ ಎಡಪಕ್ಷಗಳ ಬೃಹತ್ ರ್‍ಯಾಲಿ ಈ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಲಿ ಎಂದು ಆಶಿಸಬೇಕಾಗಿದೆ.



ವ್ಯಂಗ್ಯಚಿತ್ರ ಕೃಪೆ:
ಪಿ.ಮಹಮ್ಮದ್, ವಿಜಯ ಕರ್ನಾಟಕ

ಜಿಲ್ಲಾ ಎಡ ಸಮಾವೇಶಗಳು

ಜಾಹೀರಾತು ಮೂಲಕ ಮಾತ್ರ ಪ್ರಚಾರ ಗಿಟ್ಟಿಸಿಕೊಳ್ಳುತ್ತಿರುವ ನರೇಂದ್ರಮೋದಿ



ವಿಜಯಪುರದಲ್ಲಿ ಜಿಲ್ಲಾ ಮಟ್ಟದ ಎಡ ಸಮಾವೇಶವನ್ನು ಹಮ್ಮಿಕೊಳ್ಳಲಾಗಿತ್ತು. ಮುಖ್ಯ ಭಾಷಣಕಾರರಾಗಿ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ ಎಸ್. ವರಲಕ್ಷ್ಮಿಯವರು ಮಾತನಾಡುತ್ತಾ "ಕಳೆದ ಅರವತ್ತೇಂಟು ವರ್ಷಗಳಿಂದ ನಮ್ಮನ್ನಾಳಿರುವ ಎಲ್ಲ ಸರಕಾರಗಳು ಭೂ ಮಾಲಿಕರ ಮತ್ತು ಬಂಡವಾಳಿಗರ ಹಾಗೂ ಉಳ್ಳವರ ಸೇವೆಗೈಯುತ್ತಲೇ ಬಂದಿವೆ. ಆದರೆ ಇದಕ್ಕೆ ಪರ್ಯಾಯ ಆಡಳಿತ ಕೊಡುತ್ತೇನೆಂದು ಅಧಿಕಾರಕ್ಕೇ ಬಂದ ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಸರಕಾರವು ಜಾಹಿರಾತುಗಳ ಮೂಲಕ ಬರೀ ಮಾತನಾಡುತ್ತಿದೆಯೇ ಹೊರತು ಸಾಧನೆಗಳು ಮಾತನಾಡುತ್ತಿಲ್ಲ, ಜನಪರ ಸರಕಾರವನ್ನು ಜನರೇ ಹೊಗಳುತ್ತಾರೆ. ಆದರೆ ಈ ಸರಕಾರವು ತನ್ನನ್ನು ತಾನೇ ಹೊಗಳಿಕೊಳ್ಳಲು ದೇಶದ ಜನಗಳ ಕೋಟ್ಯಂತರ ರೂಪಾಯಿಯನ್ನು ವ್ಯಯಿಸುತ್ತಿದೆ ಎಂದರು.

ಕೇಂದ್ರ ಸರಕಾರವು ಜಾಗತಿಕ ವ್ಯಾಪಾರಕ್ಕೆ ಭಾರತದ ಜನರನ್ನು ಗುಲಾಮರನ್ನಾಗಿಸಿದೆ ಮತ್ತು ಇದನ್ನು ಪ್ರಶ್ನಿಸಲು ಹೋದರೆ ದಬ್ಬಾಳಿಕೆಯ ಮೂಲಕ ಹತ್ತಿಕ್ಕುತ್ತಿದೆ. ಜನಪರ ನೀತಿಗಳನ್ನು ಜಾರಿಗೊಳಿಸುವುದನ್ನು ಬಿಟ್ಟು ಕೋಮುವಾದ ಹರಿಬಿಡುವುದೇ ಬಿಜೆಪಿ ಸರಕಾರದ ಕೆಲಸವಾಗಿದೆ ಎಂದರು. ಅಪ್ರಜಾತಾಂತ್ರಿಕವಾಗಿ ಬಂಡವಾಳಿಗರ ಹಿತ ರಕ್ಷಣೆಗಾಗಿ ಅನವಶ್ಯಕವಾಗಿ ಸುಗ್ರೀವಾಜ್ಞೆಗಳನ್ನು ಹೊರಡಿಸುತ್ತಿವೆ ಎಂದು ದೂರಿದರು.

ಎಸ್‌ಯುಸಿಐ(ಸಿ)ನ ರಾಜ್ಯ ಸಮಿತಿ ಸದಸ್ಯರಾದ ಹೆಚ್.ವಿ.ದಿವಾಕರ ರವರು ಮಾತನಾಡುತ್ತಾ ಇಂದು ಬಿಜೆಪಿ ಜಾರಿಗೊಳಿಸಿರುವ ಬೇಟಿ ಬಚಾವೋ ಬೇಟಿ ಪಡಾವೋ, ಸ್ವಚ್ಛ ಭಾರತ, ಮೇಕ್ ಇನ್ ಇಂಡಿಯಾ ಗಳಂತಹ ಪ್ರಮುಖ ಹದಿನಾಲ್ಕು ಯೋಜನೆಗಳು ವರ್ಣರಂಜಿತ ಶಬ್ದಗಳಲ್ಲಿವೆ. ಜೆಎನ್‌ಯೂ, ಹೈದರಾಬಾದ್ ವಿಶ್ವವಿದ್ಯಾಲಯಗಳಲ್ಲಿ ನಡೆದ ಘಟನೆಗಳು ಇವರ ಪ್ರಜಾತಂತ್ರ ವಿರೋಧಿ ಆಡಳಿತಕ್ಕೆ ಹಿಡಿದ ಕೈಗನ್ನಡಿಯಾಗಿವೆ ಎಂದರು.

ಇತ್ತ ರಾಜ್ಯದಲ್ಲಿ 137 ತಾಲ್ಲೂಕುಗಳು ಬರದಿಂದ ತತ್ತರಿಸುತ್ತಿವೆ. ಆದರೆ ಕಾಂಗ್ರೆಸ್ ಸರಕಾರ ಇದ–ಕ್ಕೇ ಸ್ಪಂದಿಸುವಲ್ಲಿ ಸಂಪೂರ್ಣ ವಿಫಲವಾಗಿದೆ. ಬರ ಕಾಮಗಾರಿಗಳು ಕೇವಲ ಘೋಷಣೆಗಳಲ್ಲಿ ಉಳಿದಿವೆ. ಅತ್ತ ವಿರೊಧ ಪಕ್ಷದಲ್ಲಿರುವ ಬೆಜೇಪಿಯು ಬರದ ಕುರಿತು ಗಂಭೀರ ಚರ್ಚೆ ಮಾಡಬೇಕಾದ ಅಧಿವೇಶನದಲ್ಲಿ ಬರಿ ವಾಚ್ ಬಗ್ಗೆ ವಾರಗಟ್ಟಲೇ ಚರ್ಚೆ ಮಾಡಿ ಅಧಿವೇಶನದ ಸಮಯ ಹಾಳು ಮಾಡಿದರು ಎಂದರು.

ಪ್ರಾಸ್ತಾವಿಕವಾಗಿ ಎಸ್‌ಯುಸಿಐ(ಸಿ)ನ ವಿಜಯಪುರ ಜಿಲ್ಲಾ ಕಾರ್‍ಯದರ್ಶಿಗಳಾದ ಬಿ. ಭಗವಾನರೆಡ್ಡಿ ಮಾತನಾಡಿ "ಇಡೀ ದೇಶಾದ್ಯಂತ ಇಂದು ಆರ್ಥಿಕ ಮತ್ತು ಕೋಮುವಾದಿ ಸಮಸ್ಯಗಳ ವಿರುದ್ಧ ಹೋರಾಡಲು ಎಲ್ಲಾ ಎಡಪಕ್ಷಗಳು ಒಂದಾಗಿದ್ದು ಸಂತಸದ ಸಂಗತಿ ಎಂದರು. ಸರಕಾರಗಳು ತರುವ ಜನ ವಿರೋಧಿ ಆರ್ಥಿಕ ನೀತಿಗಳನ್ನು ಮರೆಮಾಚಲು ಸರಕಾರಗಳು ಕೋಮುವಾದವನ್ನು ಹರಿಬಿಡುತ್ತಿವೆ ಎಂದರು.

ಕಾರ್ಯಕ್ರಮದ ಅ ಧ್ಯಕ್ಷತೆ ವಹಿಸಿದ ಸಿಪಿಐ(ಎಂ) ಮುಖಂಡರಾದ ಭೀಮಸಿ ಕಲಾದಗಿ ಮಾತನಾಡುತ್ತಾ ರಾಜ್ಯವು ಬರಗಾಲದಿಂದ ತತ್ತರಿಸಿದೆ ಆದ–ರೆ ಸರಕಾರಗಳು ಇದಕ್ಕೇ ಸ್ಪಂದಿಸುತ್ತಿಲ್ಲ ಎಂದರು. ಕಾರ್ಮಿಕರ ಹೋರಾಟದಿಂದ ಕೆಲವು ಕಾಯ್ದೆಗಳು ತಡೆ ಹಿಡಿಯುವಲ್ಲಿ ಕಾರ್ಮಿಕ ಸಂಘಟನೆಗಳು ಯಶಸ್ವಿಯಾಗಿವೆ ಎಂದರು.

ಮುಖಂಡರಾದ ಹೆಚ್.ಬಿ.ಚಿಂಚೋಳ್ಳಿ, ಸಿಪಿಐ ಪಕ್ಷದ ಪ್ರಕಾಶ ಹಿಟ್ನಳ್ಳಿ ಮಾತನಾಡಿದರು. ವಂದನಾರ್ಪಣೆಯನ್ನು ಕಾರ್ಮಿಕ ಮುಖಂಡರಾದ ಲಕ್ಷ್ಮಣ ಹಂದ್ರಾಳ, ನಿರೂಪಣೆಯನ್ನು ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಅಣ್ಣಾರಾಯ ಇಳಗೇರ ನೆರವೇರಿಸಿದರು.

ಸಭೆಯ ಕೊನೆಯಲ್ಲಿ ಜಿಲ್ಲೆಯ ಸಮಸ್ಯೆಗಳಿಗೆ ಸಂಭಂಧಿಸಿದಂತೆ ಹಕ್ಕೊತ್ತಾಯಗಳನ್ನು ಮಂಡಿಸಲಾಯಿತು. ಸಭೆಯ ಆರಂಭದಲ್ಲಿ ಆವಿಷ್ಕಾರ ಪ್ರಗತಿಪರ ಸಾಂಸ್ಕೃತಿಕ ವೇದಿಕೆಯ ವತಿಯಿಂದ ಹೋರಾಟದ ಹಾಡುಗಳನ್ನು ಪ್ರಸ್ತುತ ಪಡಿಸಲಾಯಿತು.

ಸಭೆಗೂ ಮುನ್ನ ರೈತ ಹಾಗೂ ಕಾರ್ಮಿಕ ಮುಖಂಡ ವ್ಹಿ.ಎಂ.ಸೊನ್ನದ ರವರು ಪಶ್ಚಿಮ ಬಂಗಾಳ ಹಾಗೂ ಕೇರಳ ರಾಜ್ಯಗಳ ವಿಧಾನಸಭಾ ಚುನವಾವಣೆಯಲ್ಲಿ ತೃಣಮೂಲ ಕಾಂಗ್ರೆಸ್ ಹಾಗೂ ಬಿಜೆಪಿ ಆರ್.ಎಸ್.ಎಸ್. ಗೂಂಡಾಗಳಿಂದ ಹತ್ಯಗೊಳಗಾದ ಎಡಪಕ್ಷಗಳ ಕಾರ್ಯಕರ್ತರ ನೆನಪಿನಲ್ಲಿ ಹಾಗೂ ಕೇಂದ್ರ ಹಾಗೂ ರಾಜ್ಯ ಸರಕಾರಗಳ ರೈತ ವಿರೋಧಿ ನೀತಿಯಿಂದ ಆತ್ಮಹತ್ಯೆ ಮಾಡಿಕೊಂಡಿರುವವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ಎಲ್ಲರೂ ಎದ್ದು ನಿಂತು ಮೌನ ಆಚರಿಸಿ ಗೌರವ ಸಲ್ಲಿಸಿತು.

– ಮಲ್ಲಿಕಾರ್ಜುನ ಹೆಚ್ ಟಿ

ದೇಶವನ್ನು ವಿನಾಶದತ್ತ ಕೊಡ್ಯೊತ್ತಿದೆ ಬಿಜೆಪಿ ಸರ್ಕಾರ



ಮೈಸೂರಿನಲ್ಲಿ ಎಡಪಕ್ಷಗಳ ಜಂಟಿಸಮಿತಿಯು ನಗರದ ಹೊಟೇಲ್ ಒಂದರಲ್ಲಿ ಸಮಾವೇಶ ಹಮ್ಮಿಕೊಂಡಿತ್ತು. ಸಭೆಯನ್ನು ಉದ್ದೇಶಿಸಿ ಸಿಪಿಐ ರಾಷ್ಟ್ರೀಯ ಮಂಡಳಿ ಸದಸ್ಯರಾದ ಸಿದ್ಧನಗೌಡ ಪಾಟೀಲ್ ಮಾತಮಾಡಿ "ಬಿಜೆಪಿಯು ದೇಶದಲ್ಲಿ ಅಧಿಕಾರ ಹಿಡಿದು ವಿನಾಶದತ್ತ ಕೊಂಡ್ಯೊತ್ತಿದ್ದು ಇದರ ವಿರುದ್ಧ ಎಲ್ಲಾ ಎಡಪಕ್ಷಗಳ ಜನಾಂದೋಲನದ ಮೂಲಕ ರಾಜಕೀಯ ಪರ್ಯಾಯ ವ್ಯವಸ್ಥೆ ರೂಪಿಸಬೇಕೆಂದು ಹೇಳಿದರು.

ನರೇಂದ್ರ ಮೋದಿರವರಿಗೆ ಜಾತಿ ಜಾತಿಗಳ ನಡುವೆ, ಧರ್ಮ ಧರ್ಮಗಳ ನಡುವೆ ಸಂಬಂಧ ನಾಶ ಮಾಡುವ ಕಲೆ ತಿಳಿದಿದೆ. ಈ ಕೆಲಸವನ್ನು ಅವರು ಗುಜರಾತ್‌ನಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಮಾಡಿದ್ದರು. ಅದೇ ಕೆಲಸವನ್ನು ಅವರು ಪ್ರಧಾನಿಯಾಗಿ ವಿಸ್ತರಿಸಿದ್ದಾರೆ. ಇದಕ್ಕೆ ಸಾಕ್ಷಿ ಎಂಬಂತೆ ರಾಜ್ಯದಲ್ಲಿ ಮರ್ಯಾದೆ ಹತ್ಯೆಗಳು ನಡೆಯುತ್ತಿವೆ ಎಂದು ಹೇಳಿದರು.

ರಾಜ್ಯದ ಸಿದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರ ಮೂರು ವರ್ಷಗಳ ತಮ್ಮ ಅಧಿಕಾರವಧಿಯಲ್ಲಿ ಕಾರ್ಮಿಕರು, ಅಲ್ಪಸಂಖ್ಯಾತರು, ಹಿಂದುಳಿದವರು ಹಾಗೂ ದಲಿತರ ಸಮಸ್ಯೆಗಳನ್ನು ಆಲಿಸುತ್ತಿಲ್ಲ. ಇವರು ಬಿಜೆಪಿಗಿಂತ ಹೇಗೆ ಭಿನ್ನರು ಎಂದು ಪ್ರಶ್ನಿಸಿದ ಅವರು ಬಡವರು, ದಲಿತರು, ರೈತರು, ಶ್ರಮಿಕರ ಪರ ಕೆಲಸ ಮಾಡದೆ ಇದ್ದಲ್ಲಿ ಕರ್ನಾಟಕದಲ್ಲೂ ಕಾಂಗ್ರೆಸ್ ಸರ್ವನಾಶವಾಗಲಿದೆ ಎಂದು ತಿಳಿಸಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿರವರು ಮಾತನಾಡಿ ಬಿಹಾರ ಮತ್ತು ಇತ್ತೀಚಿಗೆ ನಡೆದ ಪಂಚರಾಜ್ಯಗಳ ಚುನಾವಣೆ ನಂತರ ದೇಶದಲ್ಲಿ ಎಡಪಕ್ಷಗಳ ಮೇಲೆ ದಾಳಿಗಳು ಹೆಚ್ಚಾಗುತ್ತಿವೆ. ದೇಶಪ್ರೇಮದ ಹೆಸರಿನಲ್ಲಿ ದಲಿತರು, ಮಹಿಳೆಯರು ಮತ್ತು ಸಂವಿಧಾನದ ಮೇಲೆ ದಾಳಿ ನಡೆಯುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.



ಬಿಜೆಪಿ ಸರಕಾರದ ಅದ್ದೂರಿ ಆಚರಣೆಗಳಿಗೆ ಶ್ರೀಸಾಮಾನ್ಯ ಹಣ ಒದಗಿಸಬೇಕಾಗಿದೆ. ಮುಂದೆ ಇಂತಹದೇ 'ತಮಾಷಾ'ಗಳಿಗಾಗಿ ಹೆಚ್ಚಿನ ತೆರಿಗೆಗಳು ಹಾಗೂ ಬೆಲೆ ಏರಿಕೆಯ ಬರೆ ಅನುಭವಿಸಬೇಕೆ?

–ಸೀತಾರಾಂ ಯೆಚುರಿ


ವಿಕಾಸ ಪರ್ವವಲ್ಲ ವಿನಾಶ ಪರ್ವ

ಬೆಂಗಳೂರು : ಮೇ 31ರಂದು ನಗರದಲ್ಲಿ ಎಡ ಪಕ್ಷಗಳ ಜಿಲ್ಲಾ ಸಮಾವೇಶವನ್ನು ಹಮ್ಮಿಕೊಳ್ಳಲಾಗಿತ್ತು. ಮಾತಿಗೆ ಮುಂಚೆ 'ಅಭಿವೃದ್ಧಿ' ಎನ್ನುವ ಬಿಜೆಪಿ ಸರಕಾರವು ಇಲ್ಲಿಯವರೆಗೆ ಸಾಧಿಸಿದ್ದಾರೂ ಏನು? ಹೆಚ್ಚುತ್ತಿರುವ ಬಡತನ, ನಿರುದ್ಯೋಗ, ಬೆಲೆಏರಿಕೆ, ರೈತರ ಆತ್ಮಹತ್ಯೆಗಳು, ಬರ ಪರಿಸ್ಥಿತಿಯಿಂದ ಇಡೀ ದೇಶ ತತ್ತರಿಸುತ್ತಿರುವಾಗ ದೇಶದ ಪ್ರಧಾನಿಗಳು 40ಕ್ಕೂ ಹೆಚ್ಚು ಪರದೇಶಗಳಿಗೆ ಭೇಟಿ ನೀಡಿದ್ದಾರೆ. ವಿದೇಶ ಪ್ರವಾಸದಿಂದ ಏನೇನು ಪ್ರಯೋಜನವಾಗಿಲ್ಲ.

ರಾಜ್ಯಕ್ಕೆ ಆಗಮಿಸಿದ ಪ್ರಧಾನಿ ನರೇಂದ್ರಮೋದಿರವರು ವಿಕಾಸ ಪರ್ವ ಸಮಾವೇಶಕ್ಕೆ ಬಂದಿಲ್ಲ. ಬದಲಾಗಿ ವಿನಾಶ ಪರ್ವವನ್ನು ಆಚರಿಸಲು ಬಂದಿದ್ದಾರೆ ಎಂದರು. ಕನಿಷ್ಠ ಉಚಿತವಾಗಿ ಶಿಕ್ಷಣ–ಆರೋಗ್ಯವನ್ನು ನೀಡಲಾಗದ ಸರಕಾರಗಳು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದು 2 ವರ್ಷ ಮತ್ತು ರಾಜ್ಯದಲ್ಲಿ ಅಧಿಕಾರಕ್ಕೆ ಬಂದು 3 ವರ್ಷವಾಗಿದೆ ಎಂದು ಪ್ರಚಾರ ಪಡೆಯುತ್ತಿದೆ.

ಜೂನ್ 6ರಂದು ನಡೆಯಲಿರುವ ಎಡಪಕ್ಷಗಳ ಬೃಹತ್ ಪ್ರತಿಭಟನಾ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ತಿಳಿಸಲಾಯಿತು. ಎಡಪಕ್ಷಗಳ ಮುಖಂಡರಾದ ಎಂ.ಎಸ್.ಮೀನಾಕ್ಷಿ ಸುಂದರಂ, ಕೆ.ಎನ್.ಉಮೇಶ್, ವಿಜಯ ಭಾಸ್ಕರನ್, ಜ್ಞಾನಮೂರ್ತಿ ವಿ., ಅಪ್ಪಣ್ಣ ಪಿ.ಪಿ ರವರು ಮಾತನಾಡಿದರು.

– ವೆಂಕಟೇಶ್ ಕೆ.





ತುಮಕೂರು :



ಚಿಕ್ಕಬಳ್ಳಾಪುರ:

ಜಿಲ್ಲಾ ಎಡ ಸಮಾವೇಶಗಳು

ಉಡುಪಿಯಲ್ಲಿ ಎಡಪಕ್ಷಗಳಿಂದ ವಾಹನ ಜಾಥಾ


ಉಡುಪಿ

ಉಡುಪಿ : ಎಡಪಕ್ಷಗಳು ಜಿಲ್ಲೆಯಾದ್ಯಂತ ಮೇ 26–27 ಮತ್ತು 28 ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ವಾಹನ ಪ್ರಚಾರ ಜಾಥಾವು ಉಡುಪಿ ನಗರದ ಗಾಂಧಿ ಪಾರ್ಕಿ ಬಳಿ ಸಮಾರೋಪ ಸಮಾರಂಭ ಜರುಗಿತು.

ಉಡುಪಿ ಜಿಲ್ಲೆಯ ಉತ್ತರ ತುದಿಯ ಬೈಂದೂರಿನಿಂದ ಆರಂಭಗೊಂಡ ಪ್ರಚಾರ ಜಾಥವು 3 ದಿನಗಳ ಕಾಲ ಜಿಲ್ಲೆಯಾದ್ಯಂತ ಸಂಚರಿಸಿ ವಿವಿಧ ಪ್ರದೇಶಗಳಲ್ಲಿ ಬೀದಿ ಬದಿ ಪ್ರಚಾರ ಸಭೆ ನಡೆಸಿದ ನಂತರ ಕೊನೆಯ ದಿನ ಉಡುಪಿ ನಗರದಲ್ಲಿ ಸಮಾರೋಪ ಸಮಾರಂಭ ಜರುಗಿತು.

ಸಿಪಿಐ(ಎಂ) ಉಡುಪಿ ಜಿಲ್ಲೆ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಹಾಗೂ ಮುಖಂಡರಾದ ಪಿ. ವಿಶ್ವನಾಥ ರೈ ಸಮಾರೋಪ ಸಮಾರಂಭದ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಎಲ್ಲಾ ಸಮಸ್ಯೆಗಳಿಗೆ ಬಿಜೆಪಿಯಿಂದಲೇ ಪರಿಹಾರ ಎಂದ ನರೇಂದ್ರಮೋದಿ, ಆದರೆ ನಾವು ಕಂಡುಕೊಂಡ ಸತ್ಯವೇನು? ಕೇಂದ್ರ ಸರ್ಕಾರದ ಕಾರ್ಮಿಕ ಇಲಾಖೆಯ ಸಮೀಕ್ಷೆಯೊಂದರ ಪ್ರಕಾರ ಕಳೆದ 2 ವರ್ಷಗಳ ಅವಧಿಯಲ್ಲಿ ಉದ್ಯೋಗಗಳೇ ಸೃಷ್ಠಿಯಾಗಿಲ್ಲ. ಕೈಗಾರಿಕೆಯಲ್ಲಿ ಉದ್ಯೋಗದ ಕುಸಿತ ಆಗಿದೆ. ಇನ್ನೊಂದೆಡೆ ದೇಶದ ಶೇ.50% ಆಸ್ತಿ ಶೇ.1% ರಷ್ಟು ಜನರ ಕೈಯಲ್ಲಿದೆ ಎಂಬುವುದು ವಿಪರ್ಯಾಸ ಎಂದು ಬಾಲಕೃಷ್ಣ ಶೆಟ್ಟಿ ಹೇಳಿದರು.

ಸಮಾರೋಪ ಸಮಾರಂಭದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಶಂಕರ, ಮುಖಂಡರಾದ ಮಹಾಬಲ ವಡೇರ ಹೋಬಳಿ, ಉಮೇಶ್ ಕುಂದರ್, ಕವಿರಾಜ್, ಮುಂತಾದವರು ಉಪಸ್ಥಿತರಿದ್ದರು. ವೆಂಕಟೇಶ ಕೋಣಿ ಕಾರ್ಯಕ್ರಮ ನಿರೂಪಿಸಿ ಸ್ವಾಗತಿಸಿ ವಂದಿಸಿದರು.

ತುಮಕೂರು :

ಜನ ಸಾಮಾನ್ಯರನ್ನು ಬಾದಿಸುತ್ತಿರುವ ಅಗತ್ಯ ವಸ್ತುಗಳ ಬೆಲೆ ನಿಯಂತ್ರಣಕ್ಕೆ ಆಗ್ರಹಿಸಿ, ಜನಪರ ನೀತಿಗಳ ಜಾರಿಗಾಗಿ ಆಗ್ರಹಿಸಿ ಸಿಪಿಐ-ಸಿಪಿಐ(ಎಂ)–ಎಸ್‌ಯುಸಿಐ(ಸಿ) ಮೂರು ಎಡಪಕ್ಷಗಳು ತುಮಕೂರು ನಗರದಲ್ಲಿ ಪ್ರಚಾರಾಂದೋಲನವನ್ನು ನಡೆಸಿತು.

ಎಡಪಕ್ಷಗಳು ಜೂನ್ 6 ರಂದು ಜನಪರ ನೀತಿಗಳ ಜಾರಿಗಾಗಿ ಆಗ್ರಹಿಸಿ ಬೆಲೆ ಏರಿಕೆ ನಿಯಂತ್ರಣಕ್ಕೆ ಒತ್ತಾಯಿಸಿ ಬೆಂಗಳೂರಿನಲ್ಲಿ ಬೃಹತ್ ಬಹಿರಂಗ ಸಭೆಯನ್ನು ಹಮ್ಮಿಕೊಳ್ಳಲಾಗಿದ್ದು ಇದರ ಭಾಗವಾಗಿ ತುಮಕೂರು ನಗರದಲ್ಲಿ ಪ್ರಚಾರಾಂದೋಲನವನ್ನು ನಡೆಸಲಾಗುತ್ತಿದೆ.

ಈ ಪ್ರಚಾರಂದೋಲನದಲ್ಲಿ ಸಿಪಿಐ(ಎಂ)ನ ರಾಜ್ಯಸಮಿತಿ ಸದಸ್ಯ ಸೈಯದ್ ಮುಜೀಬ್, ಸಿಪಿಐ ಜಿಲ್ಲಾ ಕಾರ್ಯದರ್ಶೀ ಕಂಬೇಗೌಡ, ಎಸ್.ಯುಸಿಐ(ಸಿ)ಯ ನರಸಿಂಹರಾಜು, ದರ್ಶನ್, ಶಿವಣ್ಣ ಸೇರಿದಂತೆ ಮುಂತಾದವರು ಪ್ರಚಾರಂದೋಲನದಲ್ಲಿ ಇದ್ದರು.

ಚಿಕ್ಕಬಳ್ಳಾಪುರ:

ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಎಡಪಕ್ಷಗಳ ಜನಾಂದೋಲನ–ಸಮಾವೇಶವನ್ನು ಮೇ 29ರಂದು ಹಮ್ಮಿಕೊಳ್ಳಲಾಗಿತ್ತು. ಸಮಾವೇಶಕ್ಕೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಹಾಗೂ ಜಿಲ್ಲಾ ಕಾರ್ಯದರ್ಶಿ ಎಂ.ಪಿ.ಮುನಿವೆಂಕಟಪ್ಪರವರು ಭಾಗವಹಿಸಿದ್ದರು.

ರಾಯಚೂರು:

ಜಿಲ್ಲೆಯ ಎಡಪಕ್ಷಗಳ ಜಂಟಿ ಸಮಾವೇಶವನ್ನು ಮೇ 26ರಂದು ಹಮ್ಮಿಕೊಳ್ಳಲಾಗಿತ್ತು. ಸಿಪಿಐ(ಎಂ) ಮುಖಂಡರಾದ ಶ್ರೀಕ್ಷ ಖಾದ್ರಿ, ಸಿಪಿಐ ರಾಜ್ಯ ಕಾರ್ಯದರ್ಶಿ ಪಿ.ವಿ.ಲೋಕೇಶ್ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.

ಬಳ್ಳಾರಿ:

ಜಿಲ್ಲೆಯಲ್ಲಿ ಮೇ 24ರಂದು ಹಮ್ಮಿಕೊಳ್ಳಲಾಗಿದ್ದ ಎಡಪಕ್ಷಗಳ ಸಮಾವೇಶಕ್ಕೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಯು.ಬಸವರಾಜು, ಜಿಲ್ಲಾ ಕಾರ್ಯದರ್ಶಿ ಆರ್.ಎಸ್.ಬಸವರಾಜು ಭಾಗವಹಿಸಿದ್ದರು.

ಕಲಬುರಗಿ :

ಜಿಲ್ಲೆಯ ಚಿಂಚೋಳಿ ತಾಲ್ಲೂಕಿನಲ್ಲಿ ಎಡಪಕ್ಷಗಳ ಪ್ರತಿಭಟನಾ ಸಮಾವೇಶದ ಅಂಗವಾಗಿ ಸಿಪಿಐ(ಎಂ), ಸಿಪಿಐ, ಎಸ್‌ಯುಸಿಐ(ಸಿ) ಪಕ್ಷಗಳ ನೇತೃತ್ವದಲ್ಲಿ ಭೀಕರ ಬರಗಾಲವಾಗಿದ್ದು ಕುಡಿಯುವ ನೀರಿಗಾಗಿ, ಭೂಮಿ ಹಕ್ಕುಪತ್ರಕ್ಕಾಗಿ, ಮುಂಗಾರು ಬಿತ್ತನೆಗಾಗಿ ರೈತರಿಗೆ ಬೀಜ–ಗೊಬ್ಬರ ವಿತರಿಸಬೇಕೆಂದು, ರೈತರ ಬೆಳೆ ಸಾಲ ಮನ್ನಾ ಮಾಡಬೇಕೆಂದು, ಆಧಾರ್ ಕಾರ್ಡ್‌ನ ಕುಂಟು ನೆಪ ಹೇಳಿ ಬಡವರು ತಿನ್ನುವ ಅನ್ನ ಕಸಿದಿಕೊಳ್ಳುವುದನ್ನು ಖಂಡಿಸಿ ಪ್ರತಿಭಟನೆ ನಡೆಸಲಾಯಿತು.



ಕಲಬುರಗಿ



ರಾಯಚೂರು:



ಬಳ್ಳಾರಿ

ಜೂನ್ 6 ರ ಎಡಪಕ್ಷಗಳ ರ್‍ಯಾಲಿಯ ಹಕ್ಕೊತ್ತಾಯಗಳು

1) ಜನವಿರೋಧಿ ಕಾರ್ಮಿಕ ಕಾನೂನುಗಳ ತಿದ್ದುಪಡಿಗಳನ್ನು ಕೈಬಿಡಿ. ಸರ್ಕಾರದ ಅಡಿಯಲ್ಲಿ ದುಡಿಯುತ್ತಿರುವ ಲಕ್ಷಾಂತರ ಕಾಂಟ್ರಾಕ್ಟ್, ಅರೆಕಾಲಿಕ ಉದ್ಯೋಗಿಗಳ, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರ ಸಮಸ್ಯೆಗಳನ್ನು ಪರಿಹರಿಸಿ, ಅಸಂಘಟಿತ ಕ್ಷೇತ್ರಗಳ ಕಾರ್ಮಿಕರಿಗೆ ರಕ್ಷಣೆ ಒದಗಿಸಿ.
2) ಬರಗಾಲ ಪರಿಹಾರ ಕಾಮಗಾರಿಗಳಿಗಾಗಿ ಹಾಗೂ ನರೇಗಾದ ಸೂಕ್ತ ಅನುಷ್ಠಾನಗೊಳಿಸಿ. ಮಧ್ಯ ಹಾಗೂ ಉತ್ತರಕರ್ನಾಟಕದ ಜಿಲ್ಲೆಗಳ ನೀರಿನ ಕೊರತೆಯನ್ನು ನೀಗಿಸಲು ಶಾಶ್ವತ ನೀರಾವರಿ ಯೋಜನೆಯನ್ನು ಜಾರಿಗೊಳಿಸಿ. ಬಗರ್ ಹುಕುಂ ರೈತರಿಗೆ ಭೂಮಿ ಹಕ್ಕು ನೀಡಿ, ಬಡ–ಮಧ್ಯಮ ರೈತರ ಸಾಲ ಮನ್ನಾ ಮಾಡಿ, ರೈತ ಬೆಳೆದ ಬೆಳೆಗೆ ಸೂಕ್ತ ಬೆಂಬಲ ಬೆಲೆ ನೀಡಿ, ಅಗ್ಗ ದರದಲ್ಲಿ ಬೀಜ, ಗೊಬ್ಬರ, ಕೀಟನಾಶಕಗಳ ಒದಗಿಸಿ, ನಿರಂತರ ವಿದ್ಯುತ್‌ಗಾಗಿ, ಕಬ್ಬು–ಭತ್ತ–ತೆಂಗು ಬೆಳೆಗಾರರ ಬಿಕ್ಕಟ್ಟನ್ನು ಶೀಘ್ರ ಪರಿಹರಿಸಿ.
3) ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ತಡೆಯಿರಿ, ಮರ್ಯಾದಾ ಹತ್ಯೆಗಳಿಗೆ ಕೊನೆಹಾಕಿ, ಮಹಿಳಾ ವಿರೋಧಿ ಕೃತ್ಯಗಳಲ್ಲಿ ತೊಡಗಿರುವ ಎಲ್ಲಾ ಅಪರಾಧಿಗಳಿಗೆ ಸೂಕ್ತ ಶಿಕ್ಷೆ ನೀಡಿ, ಮಹಿಳೆಯರಿಗೆ ಉದ್ಯೋಗ–ಶಿಕ್ಷಣಗಳ ಹಕ್ಕನ್ನು ಖಾತ್ರಿ ಪಡಿಸಿ.
4) ಎಲ್ಲರಿಗೂ ಸಾರ್ವತ್ರಿಕ ಶಿಕ್ಷಣ ಹಾಗೂ ಆರೋಗ್ಯ ಖಾತ್ರಿ ಪಡಿಸಿ. ಉನ್ನತ ಶಿಕ್ಷಣವೂ ಸಹ ಬಡವರಿಗೆ–ಮಧ್ಯಮ ವರ್ಗದವರಿಗೆ ಕೈಗೆಟುಕುವಂತೆ ಮಾಡಿ. ಎಲ್ಲ ರೀತಿಯ ಡೊನೇಶನ್ ಕ್ಯಾಪಿಟೇಶನ್ ಫೀ ಪದ್ಧತಿಗೆ ಕೊನೆಹಾಕಿ. ಶಿಕ್ಷಣದ ಕೋಮುವಾದೀಕರಣ–ಕೇಸರೀಕರಣಗಳನ್ನು ತಡೆಗಟ್ಟಿ. ವಿಶ್ವವಿದ್ಯಾಲಯಗಳ ಸ್ವಾಯತ್ತತೆ ಹಾಗೂ ಸ್ವಾತಂತ್ರ್ಯದ ವಾತಾವರಣವನ್ನು ಉಳಿಸಿ.
5) ಎಲ್ಲರಿಗೂ ಉದ್ಯೋಗ ಒದಗಿಸಿ, ಅಲ್ಲಿಯವರೆಗೂ ನಿರುದ್ಯೋಗ ಭತ್ಯೆ ನೀಡಿ, ಸರ್ಕಾರದಲ್ಲಿ ಖಾಲಿ ಇರುವ ಎರಡೂವರೆ ಲಕ್ಷ ಹುದ್ದೆಗಳನ್ನು ಭರ್ತಿ ಮಾಡಿ.
6) ದಲಿತರ, ಅಲ್ಪಸಂಖ್ಯಾತರ, ಮಹಿಳೆಯರ ಮೇಲಿನ ದಮನಕಾರಿ ಧೋರಣೆಗಳನ್ನು ಮಟ್ಟಹಾಕಿ, ಕೋಮುವಾದಿ–ಜಾತಿವಾದಿ ಶಕ್ತಿಗಳಿಗೆ ಕಡಿವಾಣ ಹಾಕಿ. ಸಾಂಸ್ಕೃತಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸೂಕ್ತ ನೀತಿ ರೂಪಿಸಿ. ಎಲ್ಲಾ ಸಾಂಸ್ಕೃತಿಕ–ಪಾರಂಪರಿಕ ತಾಣಗಳ ಖಾಸಗೀಕರಣವನ್ನು ನಿಲ್ಲಿಸಿ.
7) ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ)ವನ್ನು ಕೈಬಿಟ್ಟು ಲೋಕಾಯುಕ್ತವನ್ನು ಬಲಪಡಿಸಿ.

PÉÃ½ZÀÄY

ಕನ್ನಡದ ಕಟ್ಟಾಳು ದೇ. ಜವರೇಗೌಡ

ಓದು, ಬರಹ ಬಾರದ ತಂದೆ ತಾಯಿಗಳ ಉದರದಲ್ಲಿ ಜನಿಸಿದ್ದರೂ ಜನ್ಮ ಜನ್ಮಾಂತರದಿಂದ ವಿದ್ಯೆಯನ್ನು ಹೊತ್ತು ಬಂದಿದ್ದಾರೆ ಎನ್ನುವ ರೀತಿಯಲ್ಲಿ ಸತತ ಅಧ್ಯಯನಶೀಲರಾಗಿದ್ದರು. ಅವರ ಆತ್ಮಚರಿತ್ರೆ 'ಹೋರಾಟದ ಬದುಕು' ಓದಿದರೆ ಗೊತ್ತಾಗುತ್ತದೆ. ಅವರು ವಿದ್ಯೆಯನ್ನು ಹೇಗೆ ಗಳಿಸಿಕೊಂಡರು ಎಂಬುವುದು. ಅವರ ಸಾಮರ್ಥ್ಯಕ್ಕೆ ಎಲ್ಲೆಗಳಿರಲಿಲ್ಲ.

ಒಬ್ಬ ಮೇರು ಸಾಹಿತಿಯಾಗಿ ಸುಮಾರು 400 ಗ್ರಂಥಗಳನ್ನು ರಚಿಸಿರುವ ದೇಜಗೌ ತಮ್ಮ ಗ್ರಂಥಗಳ ಪುನರ್ ಮುದ್ರಣದಿಂದ ಲಭ್ಯವಾಗುತ್ತಿದ್ದ ಧನರಾಶಿಯಿಂದಲೇ ಸುಖದ ಸುಪ್ಪತ್ತಿಗೆಯಲ್ಲಿ ಇರಬಹುದಾಗಿತ್ತು. ಆದರೆ ಸರಳ ಜೀವನದ ಮಹತ್ವವನ್ನು ಕುವೆಂಪು ಅವರಿಂದ ಕಲಿತಿದ್ದರು. ಹಾಗಾಗಿ 'ವಿಶ್ವಚೇತನ ಕಲಾ ನಿಲಯ' ಎಂಬ ಪುಟ್ಟ ಕುಟೀರದಲ್ಲಿ ಅವರ ಓದು, ಬರಹ.

ಅವರು ಕೇವಲ ಸಾಹಿತಿ ಆಗಿದ್ದರೆ ಸಾವಿರ ಗ್ರಂಥಗಳನ್ನು ರಚಿಸಿ ಒಂದು ವಿಕ್ರಮವನ್ನೇ ಸ್ಥಾಪಿಸುತ್ತಿದ್ದರು. ತಮ್ಮ ಉತ್ಕೃಷ್ಟ ಸಮಯವನ್ನು ಕನ್ನಡ ಭಾಷೆ, ಸಂಸ್ಕೃತಿಯ ಉಳಿವಿಗಾಗಿ ಮೀಸಲಿಟ್ಟರು. ಇಳಿವಯಸ್ಸಿನಲ್ಲಿ ಕ್ಷೀಣಿಸುವ ಆರೋಗ್ಯವನ್ನು ಲೆಕ್ಕಿಸದೇ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ತಂದುಕೊಡಲು ಉಪವಾಸ ಸತ್ಯಾಗ್ರಹ ನಡೆಸಿದರು.

ಮೈಸೂರು ವಿಶ್ವವಿದ್ಯಾಲಯದ ಕುಲಪತಿಯಾಗಿ 24 ವಿಭಾಗಗಳು 48 ವಿಭಾಗಗಳಾಗಿ ವಿಕಾಸವಾಗಲು ಶ್ರಮಿಸಿದರು. ಕನ್ನಡ ಅಧ್ಯಯನ ಸಂಸ್ಥೆ ಶಾಖೋಪಶಾಖೆಗಳಾಗಿ ಅರಳುವುದಕ್ಕೆ ಕಾರಣಕರ್ತರಾದರು. ಇಂದು ಆ ಸಂಸ್ಥೆ ಕರ್ನಾಟಕದ ಎಲ್ಲ ವಿಶ್ವವಿದ್ಯಾನಿಲಯಗಳ ಕನ್ನಡ ಅಧ್ಯಯನ ಸಂಸ್ಥೆಗಳಿಗೆ ಮಾದರಿಯಾಗಿದೆ. ಜಾನಪದ ವಿಭಾಗವನ್ನು ತೆರೆದು ದೇಶದಲ್ಲೇ ಪ್ರಥಮ ಎಂಬ ಹೆಗ್ಗಳಿಕೆಯನ್ನು ತಂದುಕೊಟ್ಟರು.

ಭಾಷಾಂತರ ಮತ್ತು ತೌಲನಿಕ ಸಾಹಿತ್ಯದ ಬಗ್ಗೆ ಸದಾ ಧ್ಯಾನಸ್ಥರಾಗಿದ್ದರು. ಕುವೆಂಪು ಸೂಚನೆಯ ಮೇರೆಗೆ ಟಾಲ್‌ಸ್ಟಾಯ್ ಅವರ ಮೇರುಕೃತಿಗಳ ಅನುವಾದವನ್ನು ಕೈಗೊಂಡ ದೇಜಗೌ, ಅನುವಾದ ಕ್ಷೇತ್ರಕ್ಕೆ ಸುಮಾರು ಆರು ಸಾವಿರ ಪುಟಗಳ ಕೊಡುಗೆಯನ್ನು ನೀಡಿದ್ದಾರೆ.

– ಡಾ.ಸಿ.ನಾಗಣ್ಣ
ನಿವೃತ್ತ ಪ್ರಾಧ್ಯಾಪಕ, ಮೈಸೂರು

ಮಂಗಳೂರಿನಲ್ಲಿ ಕಟ್ಟಡ ಕಾರ್ಮಿಕರ ನಗರ ಸಮ್ಮಿಲನ:



ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ನಿನ ಮಂಗಳೂರು ನಗರ ಉತ್ತರ ಮತ್ತು ದಕ್ಷಿಣ ಸಮಿತಿಗಳ ಸಂಯುಕ್ತ ಆಶ್ರಯದಲ್ಲಿ ಮೇ 29ರಂದು ಪುರಭವನದಲ್ಲಿ 'ಕಾರ್ಮಿಕ ಸಮ್ಮಿಲನ' ಹಾಗೂ 'ಶ್ರಮ ಸಂಭ್ರಮ' ಎಂಬ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಸಮಾವೇಶವನ್ನು ಉದ್ಘಾಟಿಸಿದ ಸಹಾಯಕ ಕಾರ್ಮಿಕ ಆಯುಕ್ತ ಡಿ.ಜಿ.ನಾಗೇಶ್ ಕುಮಾರ್ ಕಟ್ಟಡ ಕಾರ್ಮಿಕರಿಗೆ ಕಲ್ಯಾಣ ಮಂಡಳಿ ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ಸಿಐಟಿಯು ಸಂಘಟನೆ ಹಾಗೂ ಸ್ಥಳೀಯ ಮುಖಂಡರ ಪಾತ್ರವನ್ನು ಶ್ಲಾಘಿಸಿ ಮಾತನಾಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಫೆಡರೇಶನ್ನಿನ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಹಾಗೂ ಸಿಐಟಿಯು ಮುಖಂಡರಾದ ಕೆ.ಮಹಾಂತೇಶ್ ಮಾತನಾಡಿ "1996ರಲ್ಲಿ ರಾಷ್ಟ್ರ ಮಟ್ಟದಲ್ಲಿ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರಿಗೆ ಕಲ್ಯಾಣ ಮಂಡಳಿ ಕಾನೂನು ಜಾರಿಯಾಗುವಲ್ಲಿಯೂ, ಬಳಿಕ ರಾಜ್ಯದಲ್ಲಿ 2006ರಲ್ಲಿ ಕಲ್ಯಾಣ ಮಂಡಳಿ ನಿಯಮಾವಳಿಗಳು ಅನುಷ್ಠಾನಗೊಳ್ಳುವುದರಲ್ಲಿಯೂ ಸಿಐಟಿಯು ಹಾಗೂ ಕಾರ್ಮಿಕ ವರ್ಗದ ಸುದೀರ್ಘ ಹೋರಾಟವಿದೆ. ಕೇರಳದ ಕಟ್ಟಡ ಕಾರ್ಮಿಕರು ಹೆಚ್ಚು ವರ್ಷಗಳಿಂದ ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಪಿಂಚಣಿ ಮತ್ತಿತರ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ರೂ.4200 ಕೋಟಿ ಮಾಲಕರ ಪಾಲಿನ ಕೊಡುಗೆಯಿಂದ ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯಲ್ಲಿ ಮೊಬಲಗು ಜಮೆಯಾಗಿದ್ದರೂ ಈವರೆಗೂ ಕಾರ್ಮಿಕರಿಗೆ ನೀಡಿದ ಸೌಲಭ್ಯದ ಮೊತ್ತ ರೂ.69 ಕೋಟಿ ಮಾತ್ರ. ಕೇರಳದಲ್ಲಿ ಈಗಾಗಲೇ ರೂ.900 ಕೋಟಿಗೂ ಮೀರಿ ಪಿಂಚಣಿಗಾಗಿ ಖರ್ಚು ಮಾಡಿದ್ದರೆ, ಕರ್ನಾಟಕ ರಾಜ್ಯದಲ್ಲಿ ಈಚೆಗಷ್ಟೇ ಪಿಂಚಣಿ ಯೋಜನೆ ಆರಂಭಿಸಲಾಗಿದೆ. ರಾಜ್ಯದ ಕಾರ್ಮಿಕ ಸಚಿವರು ಕಟ್ಟಡ ಕಾರ್ಮಿಕರಿಗೆ ಅತ್ಯವಶ್ಯಕವಾದ ಬಾಬತ್ತಿಗಲ್ಲದೆ, ಬೇರೆಯದಕ್ಕೆ ಅಂ-ದರೆ ಕಲ್ಯಾಣ ಮಂಟಪ, ಕಾರ್ಮಿಕ ಭವನ, ಕಾರ್ಮಿಕ ಸ್ಥಿತಿಗತಿ ಅಧ್ಯಯನಕ್ಕೆ ವಿದೇಶೀ ಪ್ರವಾಸ ಇತ್ಯಾದಿಗಳಿಗೆ ಕಲ್ಯಾಣ ನಿಧಿ ಮೊಬಲಗನ್ನು ಖರ್ಚು ಮಾಡಲು ಸಂಚು ಮಾಡುತ್ತಿದ್ದಾರೆ ಎಂದು ದೂಷಿಸಿದರು.

ಕಟ್ಟಡ ಕಾರ್ಮಿಕರ ಪಿಂಚಣಿ ಯೋಜನೆಗೆ ಮಹಿಳೆಯರಿಗೆ ವಯಸ್ಸು 55, ಪುರುಷರಿಗೆ 60 ಎಂದು ನಿಗದಿಗೊಳಿಸಬೇಕು, ಅಲ್ಲದೆ ರೂ.1000 ಬದಲು ರೂ.5000 ಪಿಂಚಣಿ ನೀಡಬೇಕು ಎಂದು ಮಹಾಂತೇಶ್ ಆಗ್ರಹಿಸಿದರು.

ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಅಧ್ಯಕ್ಷತೆ ವಹಿಸಿದ್ದು, ಮಂಗಳೂರು ನಗರ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. ಕಟ್ಟಡ ಕಾರ್ಮಿಕ ಸಂಘಟನೆಯ ನಗರ ಮುಖಂಡರಾದ ಯೋಗೀಶ್ ಕುಮಾರ್ ಕಾರ್ಯಕ್ರಮ ನಿರೂಪಿಸಿದರು. ಮುಖಂಡರಾದ ರವಿಚಂದ್ರ ಕೊಂಚಾಡಿ, ಸಂತೋಷ್ ಶಕ್ತಿನಗರ, ಅಶೋಕ್ ಶ್ರೀಯಾನ್, ಪ್ರೇಮನಾಥ ಜಲ್ಲಿಗುಡ್ಡೆ, ಪ್ರಗತಿಪರ ಚಿಂತಕರಾದ ಕೃಷ್ಣಪ್ಪ ಕೊಂಚಾಡಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವೇದಿಕೆಯಲ್ಲಿ ನಡೆದ ಶ್ರಮ ಸಂಭ್ರಮ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಿಶೋರ್ ಪ್ರತಿಭೆ ದುರ್ಗಾಶ್ರೀ ಬಳಗದ ಸ್ಯಾಕ್ಸ್‌ಫೋನ್ ವಾದನ, ಅಂತರಾಷ್ಟ್ರೀಯ ಖ್ಯಾತಿಯ ಜಗದೀಶ್ ಪೂಜಾರಿಯ ದೇಹದಾರ್ಢ್ಯ ಪ್ರದರ್ಶನ ಇತ್ಯಾದಿ ಕಾರ್ಯಕ್ರಮಗಳಿದ್ದುವು.

ವಾಸುದೇವ ಉಚ್ಚಿಲ

ಬೀಡಿ ಕಾರ್ಮಿಕರಿಗೆ ಬದಲಿ ಉದ್ಯೋಗಕ್ಕೆ ಆಗ್ರಹಿಸಿ ಉಡುಪಿಯಲ್ಲಿ ಪ್ರತಿಭಟನೆ:

ಕೇಂದ್ರ ಸರಕಾರ ಜಾರಿಗೊಳಿಸಿರುವ ಕೋಟ್ಪಾ ಕಾಯಿದೆಯಿಂದಾಗಿ ಹಂತ ಹಂತವಾಗಿ ಬೀಡಿ ಉದ್ಯಮವನ್ನು ನಿಲುಗಡೆಗೊಳಿಸುವ ಪ್ರಯತ್ನ ನಡೆ-ಯುತ್ತಿದೆ. ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ ಬೀಡಿ ಕಟ್ಟುವುದನ್ನೇ ಆಶ್ರಯಿಸಿ ನಾಲ್ಕೈದು ಲಕ್ಷ ಜನ ಜೀವಿಸುತ್ತಿದ್ದಾರೆ. ಬೀಡಿ ಪ್ಯಾಕ್ ಮೇಲೆ ಅಪಾಯದ ಸೂಚನಾಚಿತ್ರ 85% ಇರಬೇಕು ಎಂಬ ನಿಯಮವನ್ನು ಕಡ್ಡಾಯಗೊಳಿಸಲಾಗಿದ್ದು, ಇದರಿಂದ ಅಧಿಕೃತ ಬೀಡಿ ಉದ್ಯಮಿಗಳು ಬೀಡಿ ಉತ್ಪಾದನೆಯನ್ನು ಕಡಿತಗೊಳಿಸಿ, ಕಾರ್ಮಿಕರಿಗೆ ಕಡಿಮೆ ದಿನಗಳ ಕೆಲಸ ನೀಡುತ್ತಿದ್ದಾರೆ. ಅಲ್ಲದೆ ವಂಚಕ ಉದ್ಯಮಿಗಳು ಸೃಷ್ಟಿಯಾಗಿದ್ದು, ಲೇಬಲ್ ಇಲ್ಲದ ಬೀಡಿ ಚಲಾವಣೆಗೆ ಬರುತ್ತಿದೆ. ತಂಬಾಕು ಉತ್ಪನ್ನಗಳ ತಯಾರಿಕೆ ಶೇ.19 ರಷ್ಟು ಹೆಚ್ಚಿದೆ ಎಂದು ಸರಕಾರದ ಅಂಕಿಅಂಶಗಳೇ ಹೇಳುತ್ತುವೆ.

ಇದರ ಅರ್ಥ ಬೀಡಿ ಕಾರ್ಮಿಕರು ಸಂಘಟಿತರಾಗಿರುವ ಜಿಲ್ಲೆಗಳ ಬದಲು ಕಡಿಮೆ ಕೂಲಿಯಲ್ಲಿ ದುಡಿಯುವ ಸ್ಥಳಗಳಿಗೆ ಬೀಡಿ ಕಟ್ಟುವ ಕೆಲಸವನ್ನು ಕಾನೂನು ಬಾಹಿರವಾಗಿ ವರ್ಗಾಯಿಸಲಾಗುತ್ತಿದೆ. ಆದರೆ ಸಂಘಟಿ-ತ ಕಾರ್ಮಿಕರಿರುವ ಉಡುಪಿ, ದ.ಕ.ಜಿಲ್ಲೆಗಳ ಬೀಡಿ ಕಾರ್ಮಿಕರು ಕಡಿಮೆ ಕೆಲಸದಿಂದ ಸಂಕಷ್ಟಕ್ಕೀಡಾಗಿದ್ದಾರೆ. ಅಲ್ಲದೆ ಬೀಡಿ ಕಂಪೆನಿಗಳು ಪರಿಸ್ಥಿತಿಯ ಲಾಭ ಪಡೆದು ಕಾರ್ಮಿಕರನ್ನು ಸೌಲಭ್ಯಗಳಿಂದ ವಂಚಿಸುತ್ತಿದ್ದಾರೆ.

ಸಿಐಟಿಯು ಉಡುಪಿ ಜಿಲ್ಲಾ ಮುಖಂಡರಾದ ಪಿ.ವಿಶ್ವನಾಥ ರೈ, ಬಾಲಕೃಷ್ಣ ಶೆಟ್ಟಿ, ಕವಿರಾಜ್, ಉಡುಪಿ ಬೀಡಿ ಮತ್ತು ತಂಬಾಕು ಕಾರ್ಮಿಕರ ಸಂಘದ ಉಮೇಶ್ ಕುಂದರ್, ಸುಜಾತ, ಮಲ್ಪೆ ಬೀಡಿ ಕೆಲಸಗಾರರ ಸಂಘದ ನಳಿನಿ, ಸುಗಂಧಿ, ಕಾಪು ಬೀಡಿ ಕೆಲಸಗಾರರ ಸಂಘದ ಲಕ್ಷ್ಮಣ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ಮಂಗಳೂರಿನಲ್ಲಿ ಎಡಪಕ್ಷಗಳ ಪ್ರತಿಭಟನಾ ಪ್ರದರ್ಶನ

ಕೇಂದ್ರ ಮತ್ತು ರಾಜ್ಯ ಸರಕಾರಗಳ ಜನವಿರೋಧಿ ನೀತಿಗಳ ವಿರುದ್ಧ ರಾಜಕೀಯ ಪ್ರಚಾರಾಂದೋಲನವನ್ನು ಮಂಗಳೂರಿನಲ್ಲಿ ಮೇ 24 ರಂದು ಸಿಪಿಐ ಮತ್ತು ಸಿಪಿಐ(ಎಂ) ಜಿಲ್ಲಾ ಸಮಿತಿಗಳು ಜಂಟಿಯಾಗಿ ಪ್ರತಿಭಟನಾ ಮೆರವಣಿಗೆ ಹಾಗೂ ಬಹಿರಂಗ ಸಭೆಯನ್ನು ಏರ್ಪಡಿಸಿತು. ಪುರಭವನದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ಸಾಗಿದ ಎರಡೂ ಪಕ್ಷಗಳ ಕಾರ್ಯಕರ್ತರು, ಜಿಲ್ಲಾಧಿಕಾರಿ ಕಚೇರಿ ಎದುರು ಬಹಿರಂಗ ಸಭೆ ನಡೆಸಿದರು.

ಬಹಿರಂಗ ಸಭೆಯನ್ನು ಉದ್ದೇಶಿಸಿ ಸಿಪಿಐ ದ.ಕ.ಜಿಲ್ಲಾ ಕಾರ್ಯದರ್ಶಿ ವಿ.ಕುಕ್ಯಾನ್ ಮತ್ತು ಸಿಪಿಐ(ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ.ಬಾಲಕೃಷ್ಣ ಶೆಟ್ಟಿ, ಯಾದವ ಶೆಟ್ಟಿ, ಬಿ.ಎಂ.ಭಟ್, ಕೃಷ್ಣಪ್ಪ ಸಾಲ್ಯಾನ್, ಕೃಷ್ಣಪ್ಪ ಕೊಂಚಾಡಿ, ಸುನಿಲ್ ಕುಮಾರ್ ಬಜಾಲ್, ಸಿಪಿಐ ಜಿಲ್ಲಾ ಮುಖಂಡರಾದ ಸೀತರಾಮ ಬೇರಿಂಜೆ, ಕರುಣಾಕರ, ಬಿ.ಶೇಖರ, ಶಿವಪ್ಪ ಕಾರ್ಯಕ್ರಮದ ನೇತೃತ್ವ ವಹಿಸಿದರು. ಜೆ.ಬಾಲಕೃಷ್ಣ ಶೆಟ್ಟಿ ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಸಿಪಿಐ(ಎಂ) ಹಾಗೂ ಸಿಪಿಐ ಜಂಟಿಯಾಗಿ ಪಾದಯಾತ್ರೆ, ಮನೆ-ಮನೆ ಭೇಟಿ, ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಿ ಜನಜಾಗೃತಿ ನಡೆಸಲು ತೀರ್ಮಾನಿಸಿದೆ. ಜಿಲ್ಲಾ ಮಟ್ಟದ ಪ್ರದರ್ಶನದ ಮೊದಲು ಸಿಪಿಐ(ಎಂ) ಉಳ್ಳಾಲ ಸಮಿತಿ ತೊಕ್ಕೊಟಿನಲ್ಲಿ ಒಂದು ಜನಜಾಗೃತಿ ಸಭೆ ನಡೆಸಿದೆ.

ಎತ್ತಿನಹೊಳೆ ಯೋಜನೆ ಬಗ್ಗೆ ಜಿಲ್ಲೆಯಲ್ಲಿ ಬಂದ್ ರೀತಿಯ ಪ್ರತಿಭಟನೆಗಳು ನಡೆದಿರುವ ಹಿನ್ನೆಲೆಯಲ್ಲಿ ಈ ಯೋಜನೆಯಿಂದ ಪ್ರಯೋಜನ ಪಡೆಯಲಿರುವ ಬರಪೀಡಿತ ಪೂರ್ವದ ಜಿಲ್ಲೆಗಳ ಸಮಸ್ಯೆಗಳನ್ನು ಜನಜಾಗೃತಿಯಲ್ಲಿ ಮನಗಾಣಿಸಲಾಗಿದೆ; ಅಲ್ಲದೆ ದ.ಕ.ಜಿಲ್ಲೆಯಲ್ಲಿ ಬೇಸಿಗೆಯಲ್ಲಿನ ನೀರಿನ ಸಮಸ್ಯೆಗೆ ಜಿಲ್ಲೆಯ ನೇತ್ರಾವತಿಯನ್ನು ಒಳಗೊಂಡು ಎಲ್ಲಾ ನದಿಗಳಿಗೆ ಸರಣಿ ಕಿಂಡಿ ಅಣೆಕಟ್ಟುಗಳನ್ನು ಕಟ್ಟುವ ವಿಚಾರವನ್ನು ಪ್ರಚಾರ ಮಾಡಲಾಗಿದೆ. ಕೋಟ್ಪಾ ಕಾಯಿದೆ ಅನುಷ್ಠಾನದಿಂದಾಗಿ ಕುಂಠಿತಗೊಳ್ಳಲಿರುವ ಬೀಡಿ ಉದ್ಯಮ ಕಾರ್ಮಿಕರಿಗೆ ಪರ್ಯಾಯ ಉದ್ಯೋಗ ಒದಗಿಸಬೇಕೆಂದು ಈ ಜನಜಾಗೃತಿ ಕಾರ್ಯಕ್ರಮದ ವೇಳೆ ಹಕ್ಕೊತ್ತಾಯ ಮಾಡಲಾಗುತ್ತಿದೆ.

ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ವಿಸ್ತೃತ ಸಭೆ



ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕು ಸಂಘಟನಾ ಸಮಿತಿ ಆಶ್ರಯದಲ್ಲಿ ಆದಿವಾಸಿ ಜನಾಂಗವಾದ ಕೊರಗ ಕುಟುಂಬದ ಸದಸ್ಯರ ವಿಸ್ತೃತ ಸಭೆಯು ಕುಂದಾಪುರದ ಕಾರ್ಮಿಕ ಭವನದಲ್ಲಿ ಯಶಸ್ವಿಯಾಗಿ ಜರುಗಿತು.

ಕರ್ನಾಟಕ ಆದಿವಾಸಿ ಹಕ್ಕುಗಳ ರಾಜ್ಯ ಸಹಸಂಚಾಲಕ ಎಸ್.ವೈ.ಗುರುಶಾಂತ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಾ ಪರಿಶಿಷ್ಟ ಜಾತಿ ಪಂಗಡಕ್ಕೆ ಕಾದಿರಿಸಿದ ಸರ್ಕಾರಿ ಜಿಲ್ಲಾಧಿಕಾರಿ ಮನ್ನಾ ಸ್ಥಳವನ್ನು ಈ ಕೂಡಲೇ ಭೂಹೀನ ಆದಿವಾಸಿ ಹಾಗೂ ದಲಿತ ಕುಟುಂಬಕ್ಕೆ ವಿತರಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು.

ಕೊಲ್ಲೂರು ಸಮೀಪದ ಮುದೂರು ಗ್ರಾಮ ಪ್ರದೇಶದಲ್ಲಿ ಸರ್ಕಾರಿ ಭೂಮಿ ಸುಮಾರು 60 ಎಕ್ರೆ ಸ್ಥಳೀಯ ಮೂಲ ನಿವಾಸಿಗಳಿಗೆ 1 ಎಕ್ರೆಯಂತೆ ಮಂಜೂರು ಮಾಡಿರುವುದರ ಜೊತೆ-ಗೆ ಈ ಸ್ಥಳವನ್ನು ಮೋಜಣಿ ಮಾಡಿಸಿ, ಸ್ಥಾಪಿತ ಹಿತಾಸಕ್ತಿಗಳು ಅನಧೀಕೃತವಾಗಿ ಅತಿಕ್ರಮಣ ಮಾಡಿದ ಸರ್ಕಾರಿ ಜಾಗವನ್ನು ಕೂಡಲೇ ತೆರವುಗೊಳಿಸಿ ಸ್ಥಳೀಯ ಮೂಲ ನಿವಾಸಿಗಳಿಗೆ ಭೂಮಿ ಮಂಜೂರು ಮಾಡಬೇಕು. ಹಾಗೂ ಮುದೂರು ಪ್ರದೇಶದಲ್ಲಿ ಬಡಕೂಲಿ ಕಾರ್ಮಿಕ ಮೂಲ ನಿವಾಸಿಗಳ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಸತಿ ಶಾಲೆಯನ್ನು ಆರಂಭಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಲಾಯಿತು.

ಉತ್ತರ ಕನ್ನಡ ಜಿಲ್ಲೆಯ ಜೊಯ್ಡಾದಲ್ಲಿ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಮಟ್ಟದ ಮೂರು ದಿನಗಳ ಅಧ್ಯಯನ ಶಿಬಿರಕ್ಕೆ ಉಡುಪಿ ಜಿಲ್ಲೆಯಿಂದ ಹತ್ತು ಮಂದಿ ಪ್ರತಿನಿಧಿಗಳನ್ನು ಭಾಗವಹಿಸುವುದಕ್ಕೆ ತೀರ್ಮಾನಿಸಲಾಯಿತು. ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ವೆಂಕಟೇಶ ಕೋಣಿ, ಉಪಸ್ಥಿತರಿದ್ದರು.

ಈ ವಾರ ಚರಿತ್ರೆಯಲ್ಲಿ

30 ಮೇ 1970

ಸಿಐಟಿಯು ಸ್ಥಾಪನಾ ದಿನ

ಇಂದು ಭಾರತದ ಅತಿ ದೊಡ್ಡ ಕೇಂದ್ರೀಯ ಟ್ರೇಡ್ ಯೂನಿಯನ್ ಆಗಿರುವ ಸಿಐಟಿಯು (ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್) ಈ ದಿನ ಸ್ಥಾಪನೆಯಾಗಿತ್ತು. ಹಿಂದಿನ ಕೇಂದ್ರೀಯ ಟ್ರೇಡ್ ಯೂನಿಯನ್ ಎ.ಐ.ಟಿ.ಯು.ಸಿ.ಯ ನಾಯಕತ್ವದ ವರ್ಗ ಸಹಕಾರದ ಧೋರಣೆ ಕಾರ್ಮಿಕ ವರ್ಗದ ಹಿತಾಸಕ್ತಿಗಳಿಗೆ ಮಾರಕವಾಗುವ ಹಂತ ತಲುಪಿದಾಗ ಸಿಐಟಿಯು ಸ್ಥಾಪನೆಯಾಯಿತು. ಸ್ಥಾಪನೆಯಾದಾಗಿಂದ ಕಾರ್ಮಿಕರ ವರ್ಗ ಹೋರಾಟಕ್ಕೆ ಪ್ರಾಥಮಿಕತೆ ಕೊಡುತ್ತಾ ಬಂದಿರುವ ಸಿಐಟಿಯು ವಿವಿಧ ಕೇಂದ್ರೀಯ ಟ್ರೇಡ್ ಯೂನಿಯನ್ ಗಳಲ್ಲಿ ಸಂಘಟಿತವಾಗಿರುವ ಕಾರ್ಮಿಕರ ಸಡಿಲ ಅಖಿಲ ಭಾರತ ಸಂಘಟನೆ ರಚಿಸಲು ಸಹ ಹೆಣಗುತ್ತಾ ಬಂದಿದೆ. ಕಾರ್ಮಿಕರ ಹಿತಾಸಕ್ತಿಗಳಿಗೆ ತೀವ್ರ ಧಕ್ಕೆ ಬಂದಾಗ ಹಲವು ಅಖಿಲ ಭಾರತ ಮುಷ್ಕರಗಳನ್ನು ಹೋರಾಟಗಳನ್ನು ಸಂಘಟಿಸುತ್ತಾ ಬಂದಿದೆ.

ಆಫ್ರಿಕನ್ ವಿದ್ಯಾರ್ಥಿಗಳ ಮೇಲೆ ಜನಾಂಗವಾದೀ ದಾಳಿ

ಭಾರತದಲ್ಲಿ ಸಾಮಾಜಿಕ ಜೀವನ ಮತ್ತು ನಾಗರಿಕ ಮೌಲ್ಯಗಳ ಅಧೋಗತಿಗೆ ಹಿಡಿದ ಕನ್ನಡಿ



ದಕ್ಷಿಣ ದೆಹಲಿಯಲ್ಲಿ ಮೇ 21ರಂದು ಆಫ್ರಿಕನ್ ದೇಶ ಕಾಂಗೋದ ವಿದ್ಯಾರ್ಥಿ ಮಸೊಂಡಾ ಕಿತಂಡಾ ಒಲಿವರ್ ಬರ್ಬರವಾಗಿ ಹತ್ಯೆಯಾಗಿದ್ದು ಭಾರತದಲ್ಲಿ ಜನಾಂಗೀಯವಾದ ಆಳವಾಗಿ ಬೇರು ಬಿಟ್ಟಿರುವುದನ್ನು ಮತ್ತೊಮ್ಮೆ ಎತ್ತಿ ತೋರಿಸುತ್ತದೆ. ದೇಶದ ವಿವಿಧ ಶೈಕ್ಷಣಿಕ ಸಂಸ್ಥೆಗಳಲ್ಲಿ ಆಫ್ರಿಕಾದ ಸಾವಿರಾರು ವಿದ್ಯಾರ್ಥಿಗಳು ಅಧ್ಯಯನ ನಡೆಸುತ್ತಿದ್ದಾರೆ. ಈ ಕರಿಯ ವಿದ್ಯಾರ್ಥಿಗಳು ಆಗಾಗ ಜನಾಂಗೀಯ ತಾರತಮ್ಯ ಮತ್ತು ಆಕ್ರಮಣಗಳಿಗೆ ತುತ್ತಾಗುತ್ತಿರುವುದು ತೀರಾ ನಾಚಿಕೆಗೇಡಿನ ಸಂಗತಿ.

ವಿದ್ಯಾರ್ಥಿಗಳು ಮಾತ್ರವೇ ಅಲ್ಲದೆ ಆಫ್ರಿಕಾದ ಇತರ ಜನರು ಕೂಡ ಅವರ ಚರ್ಮದ ಬಣ್ಣದ ಕಾರಣಕ್ಕಾಗಿ ಇಂಥ ದಾಳಿಗಳ ಗುರಿಯಾಗುತ್ತಿದ್ದಾರೆ. ಮೇ ತಿಂಗಳಲ್ಲಿ ಆಫ್ರಿಕಾ ವಿದ್ಯಾರ್ಥಿಗಳ ಮೇಲೆ ಇನ್ನೂ ಇತರ ಎರಡು ಪ್ರಕರಣಗಳು ನಡೆದಿರುವುದರಿಂದ ಒಲಿವರ್‌ರ ಅಮಾನುಷ ಹತ್ಯೆಯನ್ನು ಒಂದು ಅಪರೂಪದ ಪ್ರಕರಣವಾಗಿ ಕಾಣಲು ಆಗುವುದಿಲ್ಲ. ಐವರಿ ಕೋಸ್ಟ್‌ನ ಒಬ್ಬ ವಿದ್ಯಾರ್ಥಿ ಮೇಲೆ ಮೇ 2ರಂದು ಬೆಂಗಳೂರಿನಲ್ಲಿ ಹಲ್ಲೆ ನಡೆದಿದ್ದು ಅದಾದ ಮೇಲೆ ಹೈದರಾಬಾದ್‌ನಲ್ಲಿ 23 ವರ್ಷದ ನೈಜೀರಿಯಾ ವಿದ್ಯಾರ್ಥಿಯೊಬ್ಬನ ಮೇಲೆ ಹಲ್ಲೆಯಾಗಿ ಆತ ಗಾಯಗೊಂಡಿದ್ದಾನೆ.

ಇದೇ ವರ್ಷ ಜನವರಿಯಲ್ಲಿ ಬೆಂಗಳೂರಿನಲ್ಲಿ ತಾಂಜಾನಿಯಾದ 23 ವರ್ಷ ಪ್ರಾಯದ ವಿದ್ಯಾರ್ಥಿನಿಯನ್ನು ವಿವಸ್ತ್ರಗೊಳಿಸಿ ಥಳಿಸಿದ ಘೋರ ಪ್ರಕರಣವನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು. ಆಕೆ ಆಫ್ರಿಕಾದವಳು ಎನ್ನುವುದನ್ನು ಬಿಟ್ಟರೆ ಬೇರೆ ಯಾವ ಕಾರಣವೂ ಇರಲಿಲ್ಲ ಆಕೆ ಮೇಲಿನ ಹಲ್ಲೆಗೆ. ಆ ವಿದ್ಯಾರ್ಥಿನಿಯ ಕಾರು ಆ ಪ್ರದೇಶವನ್ನು ಹಾದು ಹೋಗುವುದಕ್ಕೂ ಸ್ವಲ್ಪ ಹೊತ್ತಿಗೆ ಮುಂಚೆ ಆಫ್ರಿಕಾದ ಬೇರೊಬ್ಬರು ಚಲಾಯಿಸುತ್ತಿದ್ದ ಕಾರು ಗುದ್ದಿದ ಅಪಘಾತದಲ್ಲಿ ಒಬ್ಬ ಮಹಿಳೆ ಮೃತಪಟ್ಟಿದ್ದರು. ಜನರ ಗುಂಪು ತಾಂಜಾನಿಯಾ ವಿದ್ಯಾರ್ಥಿನಿಯ ಕಾರನ್ನು ತಡೆದು ಆಕೆಯ ಮೇಲೆ ಹಲ್ಲೆ ನಡೆಸಿತು. ಇದಕ್ಕೆ ಪೊಲೀಸರು ಮೂಕಪ್ರೇಕ್ಷಕರಾಗಿದ್ದರು.

ದೆಹಲಿಯಲ್ಲಿ ನಡೆದ ಒಲಿವರ್ ಹತ್ಯೆ ಪ್ರಕರಣ ಭಾರತದಲ್ಲಿ ವಾಸಿಸುತ್ತಿರುವ ಆಫ್ರಿಕನ್ ಸಮುದಾಯದ ಜನರಲ್ಲಿ ಆತಂಕವನ್ನು ಸೃಷ್ಟಿಸಿದೆ. ಆಫ್ರಿಕಾ ದೇಶಗಳ ಎಲ್ಲಾ ರಾಯಭಾರ ಕಚೇರಿಗಳ ಮುಖ್ಯಸ್ಥರು ಭಾರತ ಸರಕಾರಕ್ಕೆ ಸಾಮೂಹಿಕವಾಗಿ ಪ್ರತಿಭಟನೆ ಸಲ್ಲಿಸಿದ್ದಾರೆ. ತಮ್ಮ ತಮ್ಮ ರಾಯಭಾರ ಕಚೇರಿಗಳಲ್ಲಿ ಆಫ್ರಿಕಾ ದಿನವನ್ನು ಆಚರಿಸದಿರಲು ಅವರು ನಿರ್ಧರಿಸಿದರು.

ತಮಗಿಂತ ಭಿನ್ನವಾಗಿ ಕಾಣುವವರನ್ನು ಮತ್ತು ಬೇರೆಯದೇ ಆದ ಸಾಂಸ್ಕೃತಿಕ ಜೀವನ ಶೈಲಿ ಹೊಂದಿರುವವರ ಮೇಲೆ ಜನರು ದಾಳಿ ಮಾಡುವುದಕ್ಕೆ ಪ್ರೋತ್ಸಾಹಿಸುವ ವಾತಾವರಣ ಭಾರತದಲ್ಲಿ ಸೃಷ್ಟಿಯಾಗಿದೆ. ಆಫ್ರಿಕನ್ ವಿದ್ಯಾರ್ಥಿಗಳು ಘನತೆಯಿಂದ ಮತ್ತು ನೆಮ್ಮದಿಯಿಂದ ಜೀವನ ನಡೆಸಲು ಸಾಧ್ಯವಾಗುತ್ತಿಲ್ಲ ಎನ್ನುವುದು ಭಾರತದಲ್ಲಿ ಸಾಮಾಜಿಕ ಜೀವನ ಮತ್ತು ನಾಗರಿಕ ಮೌಲ್ಯಗಳು ಅಧೋಗತಿಗೆ ಇಳಿದಿರುವುದಕ್ಕೆ ಕಳಂಕಪೂರ್ಣ ವ್ಯಾಖ್ಯಾನವಾಗಿ ನಿಲ್ಲುತ್ತದೆ.



ಪ್ರಕಾಶ ಕಾರಟ್

ಆಫ್ರಿಕನ್ನರ ಮೇಲೆ ಜನಾಂಗೀಯ ದೃಷ್ಟಿಯಿಂದ ಗುರಿಯಿಡಲಾಗುತ್ತಿದೆ ಎಂದು ಹೇಳಿರುವ ರಾಯಭಾರಿಗಳು, ಆಫ್ರಿಕನ್ ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಭದ್ರತೆಗೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಭಾರತ ಸರಕಾರ ವನ್ನು ಆಗ್ರಹಿಸಿದ್ದಾರೆ.

ಒಲಿವರ್ ಹತ್ಯೆಯಾದ ಕೆಲವೇ ದಿನಗಳಲ್ಲಿ ದೆಹಲಿಯ ಹೊರವಲಯದಲ್ಲಿ ಇನ್ನೊಂದು ಪ್ರಕರಣ ನಡೆಯಿತು. ದಕ್ಷಿಣ ದೆಹಲಿಯ ರಾಜ್‌ಪುರ್ ಖುರ್ದ್ ಎಂಬ ಗ್ರಾಮದಲ್ಲಿ ನಾಲ್ವರು ಮಹಿಳೆಯರು ಸೇರಿದಂತೆ ಏಳು ಆಫ್ರಿಕನ್ನರನ್ನು ಜನಾಂಗೀಯವಾಗಿ ನಿಂದಿಸಲಾಯಿತು ಹಾಗೂ ಅವರ ಮೇಲೆ ಹಲ್ಲೆ ಮಾಡಲಾಯಿತು. ಆದರೆ ಇದು ಎರಡು ಗುಂಪುಗಳ ನಡುವೆ ನಡೆದ 'ಮುಷ್ಟಿಕಾಳಗ' ಅಷ್ಟೇ ಎಂದು ದೆಹಲಿ ಪೊಲೀಸರು ಹೇಳಿದರು. ಜೋರಾದ ಸಂಗೀತ ಹಾಗೂ ಸಾರ್ವಜನಿಕವಾಗಿ ಮದ್ಯಪಾನ ಮಾಡಿದ್ದು ಆಫ್ರಿನ್ನರ ಮೇಲಿನ ದಾಳಿಗೆ ಕಾರಣ ಎಂದವರು ಹೇಳಿದರು.

ಇಂಥ ಘಟನೆಗಳನ್ನು ಮಾಮೂಲಿ ಜಗಳ ಅಥವಾ ಸಾರ್ವಜನಿಕ ಕಿತ್ತಾಟವಷ್ಟೆ ಎಂದು ಬಿಂಬಿಸುವ ಮೂಲಕ ಯಾವುದೇ ಜನಾಂಗೀಯವಾದ ಇಲ್ಲ ಎಂದು ಹೇಳುವುದೇ ಪೊಲೀಸರ ಧೋರಣೆಯ ಉದ್ದೇಶ. ಒಲಿವರ್ ಮೇಲಿನ ಬರ್ಬರ ಆಕ್ರಮಣವನ್ನು ಕೂಡ ಆಟೋ ಬಾಡಿಗೆ ಪಡೆಯುವ ವಿಚಾರದಲ್ಲಿನ ಜಗಳವಷ್ಟೇ ಎಂದು ಬಿಂಬಿಸಲು ಪೊಲೀಸರು ಪ್ರಯತ್ನಿಸಿದರು. ಆಟೋರಿಕ್ಷಾವೊಂದನ್ನು ಬಾಡಿಗೆ ಪಡೆಯುವ ವಿಷಯದ ಮಾತಿನ ಚಕಮಕಿ ಯಲ್ಲಿ ಒಬ್ಬ ವ್ಯಕ್ತಿ ಯನ್ನು ಹೊಡೆದು ಕೊಂದು ಹಾಕುವುದು ಭಾರತದಲ್ಲಿ ಸಾಮಾನ್ಯ ಎನ್ನುವ ರೀತಿಯ ಧೋರಣೆ ಇದಾಗಿದೆ.

ನಿಜವಾಗಿಯೂ ಭಾರತದ ಪೊಲೀಸರು ಮತ್ತು ಅಧಿಕಾರಶಾಹಿ ಕರಿಯ ಜನರ ವಿರುದ್ಧ ಜನಾಂಗವಾದಿ ಪೂರ್ವಗ್ರಹಪೀಡಿತ ಮನೋಭಾವವನ್ನು ಹೊಂದಿದ್ದಾರೆ ಎನ್ನುವುದೇ ಕಟುವಾಸ್ತವವಾಗಿದೆ. ಮೋದಿ ಸರಕಾರದ ಕೆಲವು ಸಚಿವರ ಪ್ರತಿಕ್ರಿಯೆಗಳು ಕೂಡ ಖಂಡನಾರ್ಹವಾಗಿವೆ. ವಿದೇಶಾಂಗ ಖಾತೆಯ ಸಹಾಯಕ ಸಚಿವ ವಿ.ಕೆ. ಸಿಂಗ್ ರಾಜ್‌ಪುರ್ ಖುರ್ದ್ ಘಟನೆಯ ನಂತರ ಪ್ರತಿಕ್ರಿಯಿಸುತ್ತಾ, ಆಫ್ರಿನ್ನರ ಮೇಲಿನ ದಾಳಿಯಂಥ 'ಸಣ್ಣಪುಟ್ಟ ಚಕಮಕಿಗಳನ್ನು' ಮಾಧ್ಯಮದವರು ದೊಡ್ಡದು ಮಾಡುತ್ತಾರೆ ಎಂದಿದ್ದರು. ಯಾವುದೇ ಜನಾಂಗೀಯವಾದ ಒಳಗೊಂಡಿಲ್ಲ ಎಂದ ಇನ್ನೊಬ್ಬ ಮಂತ್ರಿ ಮಹೇಶ್ ಶರ್ಮಾ, ಆಫ್ರಿಕಾದಲ್ಲಿ ಕೂಡ ಈ ರೀತಿಯ ಘಟನೆಗಳು ನಡೆಯುತ್ತವೆ ಎಂದೂ ಹೇಳುವ ಮಟ್ಟಕ್ಕೆ ಹೋಗಿದ್ದರು. ಅಂತಿಮವಾಗಿ, ಆಫ್ರಿಕಾದ ರಾಯಭಾರಿಗಳು ಮತ್ತು ಆಫ್ರಿಕನ್ ವಿದ್ಯಾರ್ಥಿ ಪ್ರತಿನಿಧಿಗಳ ಜೊತೆ ನಡೆದ ಸಭೆಯೊಂದರಲ್ಲಿ ಸ್ವತಃ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಕೂಡ ಕಾಂಗೊ ವಿದ್ಯಾರ್ಥಿಯ ಹತ್ಯೆ ಜನಾಂಗವಾದದಿಂದ ಪ್ರೇರಿತವಾದುದಲ್ಲ ಎಂದು ಘೋಷಿಸಿದರು.

ಭಾರತೀಯ ಸಮಾಜವೂ ಆಳವಾಗಿ ವರ್ಣಭೇದದಿಂದ ಕೂಡಿದೆ ಎಂಬ ಹೊಲಸು ವಾಸ್ತವವನ್ನು ಈ ಎಲ್ಲಾ ಬೆಳವಣಿಗೆಗಳು ಬಯಲಿಗೆಳೆದಿವೆ. ಈ ಜನಾಂಗವಾದವು ಜಾತಿ ವ್ಯವಸ್ಥೆಯಿಂದ ಇನ್ನಷ್ಟು ಬಲಗೊಂಡಿದೆ. ಕಪ್ಪುಚರ್ಮದವರಾದ ದಕ್ಷಿಣದ ದ್ರಾವಿಡರಿಗೆ ಹೋಲಿಸಿದರೆ ಹೊರಗಡೆಯಿಂದ ಬಂದು ಉತ್ತರ ಭಾರತದಲ್ಲಿ ನೆಲೆನಿಂತ 'ಆರ್ಯರು' ಬೆಳ್ಳಗಿದ್ದರು ಎಂಬ ಜನಾಂಗೀಯ ಸ್ಟಿರಿಯೋಟೈಪ್ ಮಿಥ್ಯೆಯೊಂದು ನಮ್ಮಲ್ಲಿದೆ. ಜಾತಿ–ಪದ್ಧತಿಯ ಸಮಾಜ ಬೆಳ್ಳಗಿನ ಚರ್ಮಕ್ಕೆ ಮಹತ್ವ ನೀಡುತ್ತದೆ. ಕಪ್ಪು ಚರ್ಮದವರನ್ನು ಕಡೆಗಣ್ಣಿನಿಂದ ನೋಡಲಾಗುತ್ತದೆ. ಶ್ವೇತವರ್ಣದ ಆರಾಧನೆಯು ಗುಲಾಮಗಿರಿಯೊಂದಿಗೆ ಜಾತಿ ಪೂರ್ವಗ್ರಹವು ಇನ್ನಷ್ಟು ಬಲಗೊಂಡಿದೆ. ಶ್ವೇತವರ್ಣದ ವಧು ಬೇಕು ಎಂದು ವೈವಾಹಿಕ ಜಾಹಿರಾತುಗಳಲ್ಲಿ ಬೇಡಿಕೆ ಇಡುವಲ್ಲಿ ಈ ವರ್ಣತಾರತಮ್ಯದ ಪೂರ್ವಗ್ರಹ ಪ್ರತಿಬಿಂಬಿತವಾಗುತ್ತದೆ. ಬಿಳಿ ತೊಗಲಿನ ಯಜಮಾನರು ಶ್ರೇಷ್ಠ ಜನಾಂಗದವರು ಎಂದು ಕಾಣುವುದರೊಂದಿಗೆ ಶ್ವೇತ ಚರ್ಮದ ಆರಾಧನೆ ವಸಾಹತುವಾದದ ವೇಳೆ ಇನ್ನಷ್ಟು ಪ್ರಬಲವಾಯಿತು. ಈ ರೀತಿಯಾಗಿ ಕಪ್ಪು ಜನರು ಕೀಳು ಮಾನವರು ಎಂದು ಕಾಣಲಾಯಿತು.

ಚರ್ಮದ ಬಣ್ಣದ ಆಧಾರದ ಮೇಲಿನ ಜನಾಂಗೀಯವಾದ ಈ ರೀತಿಯಾಗಿ ಪರಂಪರಾಗತವಾಗಿ ಬಂದಿದೆ ಹಾಗೂ ಅಸಮಾನ ಸಾಮಾಜಿಕ ಮತ್ತು ಜಾತಿ ವ್ಯವಸ್ಥೆ ಅದನ್ನು ಮುಂದುವರಿಸಿಕೊಂಡು ಹೋಗಿದೆ. ವರ್ಣೀಯರು ಅಥವಾ ಕಪ್ಪು ಜನರು ಎಂದು ಬಿಳಿಯ ಸಮಾಜಗಳು ಪರಿಗಣಿಸುವ ಹಾಗೂ ಜನಾಂಗೀಯ ತಾರತಮ್ಯಕ್ಕೆ ಒಳಗಾದ ಭಾರತೀಯರೇ ತಾವು ಕಪ್ಪು ವರ್ಣೀಯರಿಗಿಂತ ಶ್ರೇಷ್ಠರು ಎಂದು ಪರಿಗಣಿಸುವುದು ವ್ಯಂಗ್ಯವೇ ಆಗಿದೆ.

ಭಾರತದಲ್ಲಿ, ಲೈಂಗಿಕವಾಗಿ ಶೋಷಣೆಗೊಳಗಾದ ದಲಿತ ಮಹಿಳೆ, ಅಥವಾ ಬರ್ಬರವಾಗಿ ಶೋಷಣೆಗೊಳಗಾದ ಆದಿವಾಸಿ ಮಹಿಳೆ, ಅಥವಾ ಜಾತಿ ವ್ಯವಸ್ಥೆಯಲ್ಲಿ ಅತ್ಯಂತ ಕೆಳಸ್ತರಕ್ಕೆ ಸೇರಿದ ಜೀತ ಕಾರ್ಮಿಕ– ಇವರೆಲ್ಲರೂ ಈ ಜನಾಂಗೀಯ ಮತ್ತು ಜಾತಿವಾದಿ ಸಾಮಾಜಿಕ ವ್ಯವಸ್ಥೆಯ ಭಾಗವಾಗಿದ್ದಾರೆ. ಹಾಗಾಗಿ, ಜಾತಿ ದೌರ್ಜನ್ಯ ಮತ್ತು ಜಾತಿ ತಾರತಮ್ಯದ ವಿರುದ್ಧ ಹೋರಾಡುವ ರೀತಿಯಲ್ಲೇ ಜನಾಂಗೀಯವಾದದ ವಿರುದ್ಧವೂ ಹೋರಾಟ ನಡೆಸಬೇಕಾಗಿದೆ.

ಆದರೆ ಕೇಂದ್ರದಲ್ಲಿರುವ ಬಿಜೆಪಿ ಸರಕಾರ ಇಂಥದ್ದೊಂದು ತಾರತಮ್ಯದ ವಿರುದ್ಧ ಹೋರಾಟವನ್ನು ಕೈಗೆತ್ತಿಕೊಳ್ಳಲು ಯಾವುದೇ ರೀತಿಯಲ್ಲಿ ಸನ್ನದ್ಧವಾಗಿಲ್ಲ. ಸಂಕುಚಿತ ಕೋಮು ಅಸ್ಮಿತೆ ಮತ್ತು ಹಿಂದೂ ರಾಷ್ಟ್ರೀಯವಾದ ಆಧಾರದಲ್ಲಿ ಹೊರಗಿಡುವ ಅಜೆಂಡಾವನ್ನು ಬಿಜೆಪಿ ಸರಕಾರ ಪೋಷಿಸುತ್ತಿದೆ. ಅವರ ಆಡಳಿತದಲ್ಲಿ ಗೋಮಾಂಸ ತಿನ್ನುವವರ ಮೇಲೆ ಅಥವಾ ಬಹುಸಂಖ್ಯಾತರಿಗಿಂತ ಹೊರತಾದ ಧರ್ಮಕ್ಕೆ ಸೇರಿದವರ ಮೇಲೆ ಜನಜಂಗುಳಿ ದಾಳಿ ಮಾಡುತ್ತವೆ. ತಮಗಿಂತ ಭಿನ್ನವಾಗಿ ಕಾಣುವವರನ್ನು ಮತ್ತು ಬೇರೆಯದೇ ಆದ ಸಾಂಸ್ಕೃತಿಕ ಜೀವನ ಶೈಲಿ ಹೊಂದಿರುವವರ ಮೇಲೆ ಜನರು ದಾಳಿ ಮಾಡುವುದಕ್ಕೆ ಪ್ರೋತ್ಸಾಹಿಸುವ ವಾತಾವರಣ ಸೃಷ್ಟಿಯಾಗಿದೆ. ಭಾರತದ ವಿವಿಧ ನಗರಗಳಲ್ಲಿ ಬಹಿಷ್ಕೃತ ರೀತಿಯಲ್ಲಿ ಜೀವನ ನಡೆಸುತ್ತಿರುವ ಆಫ್ರಿಕನ್ ವಿದ್ಯಾರ್ಥಿಗಳ ಸಣ್ಣ ಗುಂಪುಗಳು ಅವರ ಚರ್ಮದ ಬಣ್ಣ ಮತ್ತು ಜೀವನ ಶೈಲಿಯ ಕಾರಣಕ್ಕಾಗಿ ಬಹಳ ಸುಲಭವಾಗಿ ದಾಳಿಗೆ ತುತ್ತಾಗುತ್ತಿದ್ದಾರೆ. ಅವರು ಘನತೆಯಿಂದ ಮತ್ತು ನೆಮ್ಮದಿಯಿಂದ ಜೀವನ ನಡೆಸಲು ಸಾಧ್ಯವಾಗುತ್ತಿಲ್ಲ ಎನ್ನುವುದು ಭಾರತದಲ್ಲಿ ಸಾಮಾಜಿಕ ಜೀವನ ಮತ್ತು ನಾಗರಿಕ ಮೌಲ್ಯಗಳು ಅಧೋಗತಿಗೆ ಇಳಿದಿರುವುದಕ್ಕೆ ಕಳಂಕಪೂರ್ಣ ವ್ಯಾಖ್ಯಾನವಾಗಿ ನಿಲ್ಲುತ್ತದೆ.

ಅನುವಾದ: ವಿಶ್ವ

ಭಾರತೀಯ ಸಮಾಜವೂ ಆಳವಾಗಿ ವರ್ಣಭೇದದಿಂದ ಕೂಡಿದೆ ಎಂಬ ಹೊಲಸು ವಾಸ್ತವವನ್ನು ಈ ಎಲ್ಲಾ ಬೆಳವಣಿಗೆಗಳು ಬಯಲಿಗೆಳೆದಿವೆ. ಈ ಜನಾಂಗವಾದವು ಜಾತಿ ವ್ಯವಸ್ಥೆಯಿಂದ ಇನ್ನಷ್ಟು ಬಲಗೊಂಡಿದೆ. ಕಪ್ಪು ಚರ್ಮದವರಾದ ದಕ್ಷಿಣದ ದ್ರಾವಿಡರಿಗೆ ಹೋಲಿಸಿದರೆ ಹೊರಗಡೆಯಿಂದ ಬಂದು ಉತ್ತರ ಭಾರತದಲ್ಲಿ ನೆಲೆನಿಂತ 'ಆರ್ಯರು' ಬೆಳ್ಳಗಿದ್ದರು ಎಂಬ ಜನಾಂಗೀಯ ಸ್ಟಿರಿಯೋಟೈಪ್ ಮಿಥ್ಯೆಯೊಂದು ನಮ್ಮಲ್ಲಿದೆ. ಜಾತಿ–ಪದ್ಧತಿಯ ಸಮಾಜ ಬೆಳ್ಳಗಿನ ಚರ್ಮಕ್ಕೆ ಮಹತ್ವ ನೀಡುತ್ತದೆ. ಕಪ್ಪು ಚರ್ಮದವರನ್ನು ಕಡೆಗಣ್ಣಿನಿಂದ ನೋಡಲಾಗುತ್ತದೆ. ಬಿಳಿ ತೊಗಲಿನ ಯಜಮಾನರು ಶ್ರೇಷ್ಠ ಜನಾಂಗದವರು ಎಂದು ಕಾಣುವುದರೊಂದಿಗೆ ಶ್ವೇತ ಚರ್ಮದ ಆರಾಧನೆ ವಸಾಹತುವಾದದ ವೇಳೆ ಇನ್ನಷ್ಟು ಪ್ರಬಲವಾಯಿತು. ಈ ರೀತಿಯಾಗಿ ಕಪ್ಪು ಜನರು ಕೀಳು ಮಾನವರು ಎಂದು ಕಾಣಲಾಯಿತು.

ವರ್ಣೀಯರು ಅಥವಾ ಕಪ್ಪು ಜನರು ಎಂದು ಬಿಳಿಯ ಸಮಾಜಗಳು ಪರಿಗಣಿಸುವ ಹಾಗೂ ಜನಾಂಗೀಯ ತಾರತಮ್ಯಕ್ಕೆ ಒಳಗಾದ ಭಾರತೀಯರೇ ತಾವು ಕಪ್ಪು ವರ್ಣೀಯರಿಗಿಂತ ಶ್ರೇಷ್ಠರು ಎಂದು ಪರಿಗಣಿಸುವುದು ವ್ಯಂಗ್ಯವೇ ಆಗಿದೆ.



ವ್ಯಂಗ್ಯಚಿತ್ರ : ಅಧ್ವರ್ಯು, ಟೈಂಸ್ ಆಫ್ ಇಂಡಿಯಾ

ಸರಕಾರಿ ನೌಕರರ ಮುಷ್ಕರ ಮತ್ತು ಪೋಲಿಸರ ಪ್ರತಿಭಟನೆ ಅವರ ಸಾಂವಿಧಾನಿಕ ಹಕ್ಕಲ್ಲವೇ?

– ಎಸ್. ವರಲಕ್ಷ್ಮಿ

ಕರ್ನಾಟಕ ರಾಜ್ಯದಲ್ಲಿ ರಾಜ್ಯ ಸರಕಾರದಡಿಯಲ್ಲಿ ಬರುವ ಸುಮಾರು 80 ಇಲಾಖೆಗಳು ಮತ್ತು ಸಚಿವಾಲಯದ ನೌಕರರ ಸಂಘಟನೆಗಳು ಜೂನ್ 2, 2016 ರಂದು ಮುಷ್ಕರವನ್ನು ನಡೆಸಿದ್ದಾರೆ. ಹಾಗೇನೆ ಪೋಲಿಸರು ಜೂನ್4, 2016 ರಂದು ಪ್ರತಿಭಟನೆ ಮಾಡುತ್ತಿದ್ದಾರೆ. ಇಂದು ರಾಜ್ಯದಲ್ಲಿ 365 ದಿನಗಳೂ ಪ್ರತಿಭಟನೆಯ ದಿನಗಳಾಗಿ ಪರಿವರ್ತನೆಯಾಗುತ್ತಿದೆ.

ವಿವಿಧ ಕ್ಷೇತ್ರದ ಕಾರ್ಮಿಕರು, ಅಸಂಘಟಿತ ಕ್ಷೇತ್ರದ ಕಾರ್ಮಿಕರು, ಕೇಂದ್ರ ಮತ್ತು ರಾಜ್ಯ ಸರಕಾರದ ಯೋಜನೆಗಳಲ್ಲಿ ಕೆಲಸ ಮಾಡುವ ನೌಕರರು, ಸಾರಿಗೆಯಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರು ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಈ ಎಲ್ಲ ಹೋರಾಟಗಳಲ್ಲಿ ಸಮಾನವಾಗಿ ಕಾಣುವ ಬೇಡಿಕೆ ವೇತನ ಹೆಚ್ಚಳ, ವೇತನ ತಾರತಮ್ಯ, ಕೆಲಸದ ಸ್ಥಳಗಳಲ್ಲಿ ಆಗುತ್ತಿರುವ ಗುಲಾಮಗಿರಿಯ ವಿರುದ್ಧ ಎನ್ನುವುದು ಗಮನಾರ್ಹ. "ಸಹಜವಾಗಿ ಹೋರಾಟಗಳು ನಡೆಯುವಾಗ ಪ್ರಭುತ್ವ ಪೋಲಿಸರನ್ನು ಉಪಯೋಗಿಸಿ ಹೋರಾಟಗಳನ್ನು ಸದೆಬಡೆಯುತ್ತದೆ. ಆದರೆ ಈಗ ಅದೇ ಪೋಲಿಸರು ಪ್ರಭುತ್ವದ ವಿರುದ್ಧ ತಿರುಗಿ ನಿಂತಿರುವುದನ್ನು ಗಮನಿಸಬೇಕು"

ವೇತನ ಹೆಚ್ಚಳ: ವೇತನ ಹೆಚ್ಚಳದ ಬೇಡಿಕೆಯಿಟ್ಟ ಕೂಡಲೇ ಎಲ್ಲರೂ ಹೇಳುವುದು ಕಾರ್ಮಿಕ ಸಂಘಟನೆಗಳು ಮತ್ತು ನೌಕರರ ಸಂಘಟನೆಗಳು ಯಾವಾಗಲೂ ಆರ್ಥಿಕ ಬೇಡಿಕೆಗಳಿಗಾಗಿ ಮಾತ್ರವೇ ಹೋರಾಟ ನಡೆಸುತ್ತಿದ್ದಾರೆ ಎಂಬುದು. ಆರ್ಥಿಕ ಬೇಡಿಕೆಗಳು ವರ್ಗ ಸಂಘರ್ಷದ ಭಾಗವಾಗಿ, ಬೂರ್ಜ್ವಾ ಸರಕಾರಗಳ ಶೋಷಣೆಯ ವಿರುದ್ಧದ ಸಂಘರ್ಷಗಳು.

'ಅಚ್ಛೇ ದಿನ್ ಆನೇವಾಲೆ ಹೈ' ಎಂಬ ಘೋಷಣೆಯನ್ನು ಕೊಟ್ಟಂತಹ ಬಿಜೆಪಿ ಇಂದು ಒಳ್ಳೆಯ ದಿನಗಳ ಬದಲಿಗೆ ದುಬಾರಿ ದಿನಗಳನ್ನು ಕೊಟ್ಟಿದೆ. ಪ್ರತಿಯೊಂದರ ಬೆಲೆಯೂ ಹೆಚ್ಚುತ್ತಿದೆ. ಯಾವ ವಿಭಾಗಕ್ಕೆ ಸವಲತ್ತುಗಳನ್ನು ಕೊಡಬೇಕೆಂದರೂ ಅದು ತೆರಿಗೆಗಳು, ಸೆಸ್‌ಗಳು, ಲೆವಿಗಳಲ್ಲಿಯೇ ಸಂಗ್ರಹ ಮಾಡುತ್ತಿದೆ. ಪರೋಕ್ಷ ತೆರಿಗೆಗಳಲ್ಲಿ ಸಂಗ್ರಹವಾದ ಮೊತ್ತ 20,600 ಕೋಟಿ ರೂಪಾಯಿಗಳು.

2016–17 ನೇ ಸಾಲಿನ ಬಜೆಟ್ ನಲ್ಲಿ ಸೇವಾ ತೆರಿಗೆಯನ್ನು 12.36% ರಿಂದ 14%ಕೆ ಹೆಚ್ಚಿಸಿದ್ದಾರೆ. ಕೃಷಿಕರ ಕಲ್ಯಾಣ ಕಾರ್ಯಕ್ರಮ, ಕೃಷಿ ಕ್ಷೇತ್ರದ ಯೋಜನೆಗಳಿಗೆ ಹಣಕಾಸು ಸಂಪನ್ಮೂಲ ಸಂಗ್ರಹಿಸಲು ಹೊಸದಾಗಿ ಕೃಷಿ ಕಲ್ಯಾಣ ಸೆಸ್ (ಕೆಕೆಸಿ) ವಿಧಿಸಿದ್ದಾರೆ. 2015ರ ನವೆಂಬರ್ ತಿಂಗಳಿನಿಂದ ಜಾರಿಯಲ್ಲಿರುವ "ಸ್ವಚ್ಛ ಭಾರತ ಸೆಸ್" (0.5%) ಸೇರಿದಂತೆ ಒಟ್ಟಾರೆ 15% ಕ್ಕೆ ಏರಿಕೆಯಾಗಿದೆ. ಮಾತ್ರವಲ್ಲದೇ ನೌಕರರ ಸಂಬಳಗಳ ಮೇಲೆ ಪಿ.ಎಫ್ ಹಣದಲ್ಲಿ ಕೂಡಿರುವ ಹಣದ ಮೇಲೂ ತೆರಿಗೆಯನ್ನು ವಿಧಿಸಲಾಗಿತ್ತು!

ಈ ತೆರಿಗೆಗಳಿಂದ ಆಹಾರ ಧಾನ್ಯಗಳು, ಶಿಕ್ಷಣ, ಆರೋಗ್ಯ, ಮನೆಬಾಡಿಗೆ, ನೀರು, ಬಟ್ಟೆಗಳು, ತರಕಾರಿ–ಹಣ್ಣುಗಳು ಮುಂತಾದ ವಸ್ತುಗಳ ಮತ್ತು ಸೇವೆಗಳ ಬೆಲೆಗಳು ಗಗನಕ್ಕೇರುತ್ತಿವೆ. ತೆರಿಗೆಗಳನ್ನು ಹಾಕುವ ಮುಖಾಂತರ ಬೆಲೆ ಏರಿಕೆ ಮಾಡುವ ಸರಕಾರ, ನೌಕರರ–ಕಾರ್ಮಿಕರ ವೇತನಗಳನ್ನು ಯಾಕೆ ಹೆಚ್ಚಿಸುವುದಿಲ್ಲ? ಇಂದು ರಾಜ್ಯ ಸರಕಾರಿ ನೌಕರರು ಮತ್ತು ಪೋಲಿಸರು ಇಟ್ಟಿರುವ ಪ್ರಮುಖ ಬೇಡಿಕೆ ಕೇಂದ್ರ ಮತ್ತು ರಾಜ್ಯ ಸರಕಾರಿ ನೌಕರರಿಗೆ ಇರುವ ವೇತನ ತಾರತಮ್ಯ.

ಏನಿದು ವೇತನ ತಾರತಮ್ಯ?

1957ರ 15ನೆಯ ಭಾರತೀಯ ಕಾರ್ಮಿಕ ಸಮ್ಮೇಳನ (ಐ.ಎಲ್.ಸಿ)ದ ಶಿಫಾರಸ್ಸುಗಳಲ್ಲಿ ನಿಗದಿಪಡಿಸಿದ ಅಂಶಗಳು ಮತ್ತು 1992ರ ಸರ್ವೋಚ್ಚ ನ್ಯಾಯಾಲಯವು (ರಘ್ತುಕೋಸ್ ಬ್ರೆಟ್ ಥ ವರ್ಕರ್ಸ್ ಯೂನಿಯನ್) ನೀಡಿದ ತೀರ್ಪಿನ ಆಧಾರದಲ್ಲಿ ಸರಕಾರದಲ್ಲಿ ಕನಿಷ್ಟ ವೇತನ ನಿಗದಿಪಡಿಸಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಿದೆ.

ಇದರ ಪ್ರಕಾರ ಪ್ರತಿ ಮೂರು ಜನ ಸದಸ್ಯರಿರುವ ಕಾರ್ಮಿಕ ಕುಟುಂಬದ ಪ್ರತಿಯೊಬ್ಬರಿಗೆ ಕನಿಷ್ಠ 2700 ಕ್ಯಾಲೋರಿ ಆಹಾರವನ್ನು ಸೇವಿಸಲು, ಎರಡು ವರ್ಷಕ್ಕೆ ಕನಿಷ್ಠ 18 ಯಾರ್ಡ ಬಟ್ಟೆ, ಮೇಲಿನ ಎರಡೂ ವಸ್ತುಗಳ ಶೇ.10ರಷ್ಟು ಮನೆ ಬಾಡಿಗೆ, ಎರಡೂ ವೆಚ್ಚಗಳ ಶೇ.20ರಷ್ಟು ಇಂಧನ, ವಿದ್ಯುತ್ ಚ್ಛಕ್ತಿ ಇತ್ಯಾದಿ ಅಂಶಗಳ ವೆಚ್ಚದಲ್ಲಿ, ಶೇ.25ರಷ್ಟನ್ನು ಸೇರಿಸುವ ಮೂಲಕ ಕನಿಷ್ಟ ಕೂಲಿ ನಿಗದಿ ಮಾಡಬೇಕು.



ಕೇಂದ್ರ ಮತ್ತು ರಾಜ್ಯ ಸರಕಾರಿ ನೌಕರರಿಗೆ ಡಾ. ಆರ್ಕಿಡ್ ಫಾರ್ಮುಲಾ ಪ್ರಕಾರ ಮೇಲ್ಕಂಡ ರೀತಿಯಲ್ಲಿಯೇ ಲೆಕ್ಕಹಾಕಿ ಅದಕ್ಕೆ ಶೇ.25 ರಷ್ಟು ವೆಚ್ಚವನ್ನು ಸೇರಿಸಿ ವೇತನ ನಿಗದಿ ಮಾಡಲಾಗುತ್ತದೆ. ಎಲ್ಲಾ ರಾಜ್ಯಗಳಿಗೆ ಡಾ. ಆರ್ಕಿಡ್ ಫಾರ್ಮುಲಾ ಪ್ರಕಾರ ವೇತನಗಳನ್ನು ನಿಗದಿಗೊಳಿಸಬೇಕೆಂಬ ಕೇಂದ್ರ ಸರಕಾರದ ನಿರ್ದೇಶನವಿದೆ. ದೇಶದಲ್ಲಿ ಇದುವರೆಗೂ 24 ರಾಜ್ಯಗಳಲ್ಲಿ ಈ ನಿಯಮವನ್ನು ಜಾರಿಮಾಡಿದ್ದಾರೆ. ಆದರೆ ಕರ್ನಾಟಕದಲ್ಲಿ ಇದರ ನಿರಾಕರಣೆ ಮುಂದುವರೆದಿದೆ, ಬೆಲೆ ಏರಿಕೆಯ ಆಧಾರದಲ್ಲಿ ಕೇಂದ್ರ ಸರಕಾರ ಶೇ.5, 6, 7 ರಷ್ಟು ಡಿ.ಎ ನಿಗದಿ ಮಾಡಿದ್ದಾಗ, ರಾಜ್ಯ ಸರಕಾರ ಅದರಲ್ಲಿ ಅರ್ಧದಷ್ಟು ಮಾತ್ರ ಕೊಡುತ್ತದೆ. 1966 ರಿಂದ 2011ವರೆಗೆ ಹತ್ತು ವೇತನ ಆಯೋಗದ ರಚನೆಯಾಗಬೇಕಿತ್ತು. ಆದರೆ ಇಲ್ಲಿಯವರೆಗೆ ಕೇವಲ ಐದು ಆಯೋಗಗಳು ಮಾತ್ರ ರಚನೆಯಾಗಿವೆ.

ಈ ಕಾರಣದಿಂದಲೇ ಪೋಲಿಸರಿಗೂ, ರಾಜ್ಯ ಸರಕಾರಿ ನೌಕರರಿಗೂ ಬೇರೆ ಬೇರೆ ರಾಜ್ಯಗಳಿಗೆ ಹೋಲಿಸಿದರೆ ವೇತನ ಅತ್ಯಂತ ಕಡಿಮೆ ಇದೆ. ಕೇಂದ್ರ ಮತ್ತು ರಾಜ್ಯ ಸರಕಾರಿ ನೌಕರರ ವೇತನಗಳ ನಡುವೆ ಶೇ. 44ರಷ್ಟು ವ್ಯತ್ಯಾಸ ಇದೆ. ಕೇಂದ್ರದಲ್ಲಿ 7ನೇ ವೇತನ ಆಯೋಗ ಜಾರಿ ಆದರೆ ಇದು ಶೇ. 65ಕ್ಕೆ ಏರಲಿದೆ. ರಾಜ್ಯದಲ್ಲಿ 7.20 ಲಕ್ಷ ಸರಕಾರಿ ಹುದ್ದೆಗಳಿವೆ. 4 ಲಕ್ಷ ಜನ ಉದ್ಯೋಗಸ್ಥರಿದ್ದಾರೆ. 3.20 ಲಕ್ಷಗಳ ಉದ್ಯೋಗಸ್ಥರ ಕೆಲಸಗಳನ್ನು ಇವರೇ ಹೊರುತ್ತಿದ್ದಾರೆ.

ಕರ್ನಾಟಕ ಪೋಲಿಸ್ ಪೇದೆಗಳ ವೇತನ ನೆರೆಯ ತಮಿಳುನಾಡಿನ ಮೂರನೇ ಒಂದು ಭಾಗದಷ್ಟು ಮತ್ತು ಆಂಧ್ರದ ಅರ್ಧದಷ್ಟು ಇದೆ. ಸಬ್ ಇನಸ್ಪೆಕ್ಟರ್ ವೇತನ ತಮಿಳುನಾಡಿನ ಅರ್ಧದಷ್ಟು ಇದೆ. ಪೋಲಿಸ್ ಇಲಾಖೆಯಲ್ಲಿ ಶೇ. 30ರಷ್ಟು ಉದ್ಯೋಗಗಳು ಖಾಲಿ ಇವೆ. ಕರ್ನಾಟಕ ಪೋಲಿಸ್ ಕಾಯಿದೆ ಪ್ರಕಾರ ಮೂರು ಶಿಫ್ಟ್ ಇರಬೇಕಾದ ಕಡೆ 2 ಶಿಫ್ಟ್ ಮಾತ್ರವಿದೆ. ದಿನವೂ 14–15 ಗಂಟೆ ದುಡಿಯುವ ಒಬ್ಬ ಮನುಷ್ಯನ ಮನಸ್ಥಿತಿ ಹೇಗಿರುತ್ತದೆ ಮತ್ತು ಅವರಿಂದ ಯಾವ ರೀತಿಯ ಪ್ರಾಮಾಣಿಕ ಮತ್ತು ಬದ್ಧತೆಯ ಕೆಲಸವನ್ನು ನಿರೀಕ್ಷಿಸಲು ಸಾಧ್ಯ. ವಾರಕ್ಕೊಮ್ಮೆ ರಜೆಯನ್ನು ಕೊಡದೇ ಖಾಯಿಲೆ ಬಿದ್ದರೆ, ದೊಂಬಿಗಳಲ್ಲಿ, ಹೋರಾಟಗಳಲ್ಲಿ ಪೋಲಿಸರಿಗೆ ಗಾಯಗಳಾದರೆ ಆರೋಗ್ಯ ಭಾಗ್ಯದಡಿಯಲ್ಲಿ ರಾಜ್ಯ ಸರಕಾರ ಹಣ ಪಾವತಿ ಮಾಡದೇ ಇರುವುದರಿಂದ ಕನಿಷ್ಟ ಚಿಕ್ಕ ಸೌಲಭ್ಯಗಳು ಇಲ್ಲದಂತಾಗಿದೆ.

ಪೋಲಿಸರ ವಸತಿ ಗೃಹಗಳು ಹೆಚ್ಚುಕಡಿಮೆ ಪಾಳುಬಿದ್ದ ಮನೆಗಳಲ್ಲಿ ವಾಸವಿರುವಂತಾಗಿದೆ. ಮೇಲಾಧಿಕಾರಿಗಳ ಮನೆಗಳಲ್ಲಿ ಬಿಟ್ಟಿ ಚಾಕರಿಯನ್ನು ಸಾಮಾನ್ಯ ಕಾನಸ್ಟೇಬಲ್‌ಗಳ ಮುಖಾಂತರ ಮಾಡಿಸಲಾಗುತ್ತಿದೆ. ಈ ಎಲ್ಲಾ ಕಾರಣಗಳಿಂದ ಪೋಲಿಸರು ಇಂದು ಪ್ರತಿಭಟನೆಯತ್ತ ಹೆಜ್ಜೆ ಹಾಕಿದ್ದಾರೆ.

ಪ್ರತಿಭಟನೆಯನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿರುವ ಪ್ರಭುತ್ವ:

ಪ್ರಭುತ್ವದ ವಿರುದ್ಧ ಸೊಲ್ಲು ಎತ್ತಿದರೆ ಸಹಿಸುವುದಿಲ್ಲ ಎನ್ನುವ ಅದರ ಮೂಲ ಗುಣದಂತೆ ರಾಜ್ಯದ ಮುಖ್ಯಮಂತ್ರಿ ಸಿದ್ರಾಮಯ್ಯ ಅದರ ಹೊರತು ನಾನಿಲ್ಲ ಎಂಬುದನ್ನು ಸಾಬೀತುಪಡಿಸುತ್ತಿದ್ದಾರೆ. ಪ್ರತಿಭಟನೆ ಮಾಡಬಾರದು ಎಂದು ಎಚ್ಚರಿಕೆಯನ್ನು ಮೇಲಾಧಿಕಾರಿಗಳು, ಗೃಹ ಸಚಿವರು, ಮುಖ್ಯಮಂತ್ರಿಗಳ ಸಮೇತ ಮಾಧ್ಯಮಕ್ಕೆ ಜಾಹೀರಾತು ಮತ್ತು ಹೇಳಿಕೆಗಳನ್ನು ಕೊಡುವುದರೊಂದಿಗೆ ಎಸ್ಮಾ ಕಾಯಿದೆ ಯನ್ನು ಜಾರಿಗೊಳಿಸಲಾಗಿದೆಯೆಂಬ ಸುತ್ತೋಲೆಯನ್ನು ಹೊರಡಿಸಿದ್ದಾರೆ. ಅಷ್ಟೇಯಲ್ಲದೇ "1966ರ ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳಾನುಸಾರ ಯಾವುದೇ ಸರಕಾರಿ ನೌಕರರು ಮುಷ್ಕರ ಅಥವಾ ಪ್ರತಿಭಟನಾ ಪ್ರದರ್ಶನಗಳಲ್ಲಿ ಪಾಲ್ಗೊಳ್ಳುವಂತಿಲ್ಲ." ಎಂಬ ಎಚ್ಚರಿಕೆಯನ್ನು ಕೊಡಲಾಗಿದೆ.

'ಸಂವಿಧಾನದ ಅನುಸೂಚಿ 7ರಲ್ಲಿನ ಎರಡನೆ ಪಟ್ಟಿಯಲ್ಲಿರುವ ಸಾರ್ವಜನಿಕ ವ್ಯವಸ್ಥೆ ಮತ್ತು ಪೋಲಿಸರಿಗೆ ಸಂಬಂಧಿಸಿದ ಎಲ್ಲಾ ಸೇವೆಗಳ ಬಗ್ಗೆ ನಮ್ಮ ಶಾಸಕಾಂಗವು ಕಾನೂನು ರೂಪಿಸುವ ಅಧಿಕಾರ ಹೊಂದಿರುತ್ತದೆ.' ಅಪರಾಧ ಪತ್ತೆ ಹಾಗೂ ಸಾರ್ವಜನಿಕ ವ್ಯವಸ್ಥೆಯ ನಿರ್ವಹಣೆಯೊಂದಿಗೆ ನಾಗರೀಕರ ಆಸ್ತಿ ಮತ್ತು ಜೀವವನ್ನು ರಕ್ಷಿಸುವುದು ರಾಜ್ಯ ಪೋಲಿಸ್ ಸಿಬ್ಬಂದಿಯ ಅವಶ್ಯಕ ಕರ್ತವ್ಯವಾಗಿರುತ್ತದೆ. ಸಾರ್ವಜನಿಕ ಸುವ್ಯವಸ್ಥೆ, ಸುರಕ್ಷತೆಯ ದೃಷ್ಟಿಯಿಂದ ಕರ್ನಾಟಕ ಅತ್ಯವಶ್ಯಕ ಸೇವೆಗಳ ನಿರ್ವಹಣಾ ಅಧಿನಿಯಮ 2013 (2015 ಕರ್ನಾಟಕ ಅಧಿನಿಯಮ 25) ರ ಎರಡನೆಯ ಪ್ರಕರಣದ (1ನೇ) ಉಪಪ್ರಕರಣದ (ಎ) ಖಂಡದ (3)ನೇ ಉಪಖಂಡದಲ್ಲಿ ಅಧಿಕಾರವನ್ನು ಚಲಾಯಿಸಿ 'ಅತ್ಯಾವಶ್ಯಕ ಸೇವೆ'ಯೆಂದು ಪರಿಗಣಿಸಿ ಜಾರಿ ಮಾಡಲಾಗಿದೆ. ಅಂದರೆ ಈ ನೌಕರರು ತಮ್ಮ ದುಡಿಮೆ ಹಕ್ಕಿಗಾಗಿ ಪ್ರತಿಭಟನೆ ಮಾಡಬಾರದೇ?

ಭಾರತ ಸಂವಿಧಾನವು ಭಾಗ 3ರಲ್ಲಿ ಮೂಲಭೂತ ಹಕ್ಕುಗಳನ್ನು ದೇಶದ ಎಲ್ಲಾ ನಾಗರೀಕರಿಗೆ ಖಚಿತಪಡಿಸಿದೆ. ಮನುಷ್ಯನ ನ್ಯಾಯಯುತ ಮತ್ತು ನೆಮ್ಮದಿಯ ಬದುಕಿಗಾಗಿ ಮೂಲಭೂತ ಹಕ್ಕುಗಳು ಪ್ರಮುಖವಾಗಿವೆ ಎಂದು ಸ್ಪಷ್ಟಪಡಿಸಲಾಗಿದೆ. ಅದರಲ್ಲಿ ಪರಿಚ್ಛೇದ 19ರ ಪ್ರಕಾರ ಅಭಿವ್ಯಕ್ತಿ ಸ್ವಾತಂತ್ರ್ಯ, ಸಂಘಟನಾ ಸ್ವಾತಂತ್ರ್ಯ ಮತ್ತು ಶೋಷಣೆಯ ವಿರುದ್ಧದ ಹೋರಾಡುವ ಸ್ವಾತಂತ್ರ್ಯವನ್ನು ಕೊಡಮಾಡಲಾಗಿದೆ. ಸಂಘಟನಾ ಸ್ವಾತಂತ್ರ್ಯ ಇತರ ಎಲ್ಲಾ ಹಕ್ಕುಗಳ ಉಳಿವಿಗೂ ಮೂಲಭೂತ ಹಕ್ಕಾಗಿದೆ.

ಇಂದು ರಾಜ್ಯ ಸರಕಾರ ಹೇರುತ್ತಿರುವ 'ಎಸ್ಮಾ ಕಾನೂನು' ಸಂಘಟನಾ ಹಕ್ಕು ಮತ್ತು ಶೋಷಣೆಯ ವಿರುದ್ಧ ಮೂಲಭೂತ ಹಕ್ಕುಗಳ ಮೇಲಿನ ದಮನವೇ ಆಗಿದೆ.

ಮತ್ತೊಂದು ಗಮನಿಸಬೇಕಾದ ಅಂಶ (2014 ರಲ್ಲಿ ನಡೆದ ಬೆಳಗಾಂ ಅಧಿವೇಶನದ ವಿಧಾನಸಭೆಯ ಕೆಳಮನೆಯಲ್ಲಿ ಎಸ್ಮಾ ಮಸೂದೆ ಅಂಗೀಕಾರ ಮಾಡಿದೆ. ಆದರೆ ಈ ವಿಧೇಯಕ ಕಾನೂನಿನಲ್ಲಿ ಅಂತಿಮ ಸ್ವರೂಪ ಪಡೆಯಬೇಕಾದರೆ ವಿಧಾನ ಪರಿಷತ್ ನಲ್ಲಿ ಮಂಡನೆಯಾಗಿ ಅಂಗೀಕಾರ ಪಡೆದು ರಾಜ್ಯಪಾಲರ ಅನುಮೋಧನೆಯನ್ನು ರಾಷ್ಟ್ರಪತಿಗಳಿಗೆ ಕಳುಹಿಸಿ ಅಂಗೀಕಾರ ಪಡೆಯಬೇಕು. ಇದು ಇನ್ನೂ ಆಗಿಲ್ಲ.)

ಆದರೆ ಕಾನೂನು ಆಗದಿರುವ ಎಸ್ಮಾ ವನ್ನು ಈ ಮುಷ್ಕರಗಳ ಮೇಲೆ ಪ್ರಯೋಗಿಸುತ್ತಿರುವುದು ಹಾಗೂ ಕಾನೂನಾಗಿ ಎಸ್ಮಾ ವನ್ನು ತರುವ ಎರಡೂ ಪ್ರಯತ್ನಗಳು ನಮ್ಮ ಸಂವಿಧಾನದ ಮೂಲಭೂತ ಆಶಯಗಳನ್ನು ಬುಡಮೇಲು ಮಾಡುತ್ತದೆ. ಈ ರೀತಿ ಹೋರಾಟಗಳು ನಡೆಯುತ್ತಿರುವುದು ಇದೇ ಮೊದಲೇನಲ್ಲ. ವಿರೇಂದ್ರ ಪಾಟೀಲರು 1989ರಲ್ಲಿ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ರಾಜ್ಯ ಸರಕಾರಿ ನೌಕರರು ಇದೇ ಬೇಡಿಕೆಯಾಧಾರಲ್ಲಿ ಐದು ದಿನಗಳ ಕಾಲ ಮುಷ್ಕರವನ್ನು ನಡೆಸಿದ್ದರು. ಆದರೆ ಆ ಮುಷ್ಕರಕ್ಕೆ ಸರ್ಕಾರ ತಲೆ ಬಾಗಲೇಬೇಕಾದ ಸಂದರ್ಭದಲ್ಲಿ ಅಂದಿನ ಆ ಸಂಘಟನೆಯ ಮುಖಂಡರು, ಅಂದಿನ ಜನಪ್ರತಿನಿಧಿಗಳು ತೋರಿದ ಆಮೀಷಕ್ಕೆ ಬಲಿಯಾಗಿ ಹೋರಾಟವನ್ನು ಬಲಿ ಕೊಟ್ಟ ಉದಾರಹಣೆಗಳಿವೆ. ಹಾಗೇಯೇ ಪೋಲಿಸರು ಎರಡನೆಯ ಬಾರಿಗೆ ಇಂತಹ ಹೋರಾಟಕ್ಕೆ ಇಳಿದಿದ್ದಾರೆ.


ಎಸ್ಮಾದ ಬೆದರಿಕೆ ಇದ್ದರೂ ಜೂನ್ 2ರ ರಾಜ್ಯ ಸರಕಾರಿ ನೌಕರರ ಮುಷ್ಕರ ಪೂರ್ಣ ಸಫಲವಾಗಿದೆ. ಜೂನ್ 2 ರಂದು ವಿಧಾನಸೌಧ ಬಣಗುಡುತ್ತಿದ್ದು, ಮುಖ್ಯಮಂತ್ರಿಗಳ ಕಚೇರಿಯ ನೌಕರರರೂ ಕೆಲಸಕ್ಕೆ ಹಾಜರಾಗಿಲ್ಲ ಎಂಬುದು ಏನನ್ನು ತೋರಿಸುತ್ತದೆ. ಆದರೂ ರಾಜ್ಯ ಸರಕಾರಿ ನೌಕರರು ಮತ್ತು ಪೋಲಿಸರನ್ನು ಬೆದರಿಸಲು ಪೋಲಿಸ್ ಮಹಾಸಂಘದ ಅಧ್ಯಕ್ಷರನ್ನು ಜೂನ್ 2 ರಂದು ಬಂಧಿಸಲಾಗಿದೆ. ಇದಲ್ಲದೆ ಹಿರಿಯ ಪೋಲಿಸ್ ಅಧಿಕಾರಿಗಳು ಪೋಲಿಸ್ ಸಿಬ್ಬಂದಿಯನ್ನು ವಜಾದ ಬೆದರಿಕೆ ಹಾಕಿ, ದೇವರ ಮೇಲೆ ಪ್ರಮಾಣ ಮಾಡಿಸಿ ಜೂನ್ 4 ಪ್ರತಿಭಟನೆಯಲ್ಲಿ ಭಾಗವಹಿಸದಂತೆ ಪ್ರಜಾಪ್ರಭುತ್ವ–ವಿರೋಧಿ ಕ್ರಮಗಳನ್ನು ಅನುಸರಿಸುತ್ತಿದ್ದಾರೆ. ಇದು ಖಂಡನೀಯ. ಇಂತಹ ಕ್ರಮಗಳಿಂದ ಈ ಮುಷ್ಕರ–ಪ್ರತಿಭಟನೆಗಳಿಗೆ ಕಾರಣವಾದ ಸಮಸ್ಯೆಗಳಗಲಿ ಅದು ಉಂಟು ಮಾಡಿದ ಆಕ್ರೋಶವಾಗಲಿ ಮಾಯವಾಗುವುದಿಲ್ಲ. ಅದು ಒಂದಲ್ಲ ಒಂದು ದಿನ ಆಸ್ಫೋಟಗೊಳ್ಳುವುದು ಎಂದು ಸರಕಾರ ಮನಗಾಣಬೇಕು.

ಈ ನೌಕರರು ಎತ್ತಿರುವ ಬೇಡಿಕೆಗಳು ಇಂದಿನ ಸಂದರ್ಭದಲ್ಲಿ ನ್ಯಾಯಯುತವಾಗಿವೆ. ಅತ್ಯವಶ್ಯಕ ಸೇವೆ ಎಂದ ಕೂಡಲೇ ಸೇವೆಯನ್ನು ಮಾಡುವ, ಸೇವೆಗೊಳಗಾಗುವವರು ಇಬ್ಬರೂ ಸಾಮಾನ್ಯ ನಾಗರೀಕರೆಂಬುವುದನ್ನು ಪರಿಗಣಿಸಬೇಕು. ಆದರೆ ರಾಜ್ಯದಲ್ಲಿರುವ ಸಿದ್ಧರಾಮಯ್ಯನವರ ಸರಕಾರ ಇವರ ಮುಷ್ಕರದ ನೋಟಿಸ್ ಗಳನ್ನು ಕೊಟ್ಟ ನಂತರವೂ ಮಾತುಕತೆಗೆ ಕರೆಯದೇ ಬೇಡಿಕೆಗಳಿಗೆ ಪ್ರತಿನಿಧಿಗಳಿಗೆ ಸ್ಪಂದಿಸದಿರುವುದನ್ನು ನೋಡಿದರೆ, ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಪ್ರಗತಿಪರರೇ ಎಂದು ಕೇಳಬೇಕಾಗಿದೆ. ಅಷ್ಟೆಯಲ್ಲದೇ ರಾಜ್ಯದ ಎಲ್ಲಾ ವಿಭಾಗದ ಜನತೆ ಆಕ್ರೋಶಗಳನ್ನು ವ್ಯಕ್ತಪಡಿಸುತ್ತಿದ್ದರೂ ಅದಕ್ಕೂ ನನಗೂ ಸಂಬಂಧವಿಲ್ಲ ಎಂಬ ಮನೋಭಾವನೆಯಲ್ಲಿದ್ದಂತಿದೆ. ಮಾತ್ರವಲ್ಲದೇ ಅಧಿಕಾರ ಚಲಾಯಿಸಿ ಚಳುವಳಿಗಳನ್ನು ಅಡಗಿಸುತ್ತೇನೆ ಎಂಬ ದಾಷ್ಟ್ಯತೆಯಿಂದ, ಮುಂದೆ ಅನಗತ್ಯ ರಾಜಕೀಯ ಬದಲಾವಣೆಗಳಿಗೆ ತಾವೇ ದಾರಿ ಮಾಡಿಕೊಡುತ್ತಿದ್ದಾರೆ. ಇದರ ಲಾಭ ಜಾತಿ ಮತ್ತು ಧರ್ಮಾಧಾರಿತ ಕೋಮುವಾದಿಗಳಿಗೆ ಲಭಿಸಲಿದೆಯೆಂಬುವುದನ್ನು ಮರೆಯಬಾರದು.

ಗರಿಷ್ಟ ಭಾಷಣ-ಕನಿಷ್ಟ ಶಾಸನ

2_ವರ್ಷ_ತರಲಿಲ್ಲ_ಹರ್ಷ

ಮೇ 26ರಂದು ಅಧಿಕಾರದಲ್ಲಿ ಎರಡು ವರ್ಷಗಳನ್ನು ಪೂರೈಸಿದ ನರೇಂದ್ರ ಮೋದಿ ನೇತೃತ್ವದ ಸರಕಾರ ತನ್ನ 'ಸಾಧನೆ'ಗಳನ್ನು ಬಿತ್ತರಿಸಲು 21 ದಿನಗಳ 'ವಿಕಾಸ ಪರ್ವ' ಮಹೋತ್ಸವವನ್ನು ಆರಂಭಿಸಿದೆ. 2017ರಲ್ಲಿ ವಿಧಾನಸಭಾ ಚುನಾವಣೆಗಳನ್ನು ಕಾಣಲಿರುವ ಉತ್ತರ ಪ್ರದೇಶದಲ್ಲಿ ಪ್ರಧಾನ ಮಂತ್ರಿಗಳ ಮತ್ತೊಂದು ಅಮೋಘ ಭಾಷಣದ ಮೂಲಕ ಇದು ಆರಂಭವಾಗಿದೆ. ಮೇ 29ರಂದು ದಿಲ್ಲಿಯ ಇಂಡಿಯಾ ಗೇಟಿನಲ್ಲಿ 5 ಗಂಟೆಗಳ ಸರಕಾರದ ಖರ್ಚಿನ ಥಳಕು-ಬೆಳಕಿನಲ್ಲಿ 'ಹೊಸ ಬೆಳಕಿ'ನ ನೇರ ಪ್ರಸಾರದ ಕಾರ್ಯಕ್ರಮದಲ್ಲಿ ಕೇಂದ್ರ ಸಂಪುಟದ ಅತಿರಥ-ಮಹಾರಥರು ಮತ್ತು ಬಾಲಿವುಡ್ ಸ್ಟಾರ್‌ಗಳು ಭಾಗವಹಿಸಿದರು. ರಾಜ್ಯದ ರಾಜಧಾನಿಗಳು, ಮಹಾನಗರಗಳು ಮತ್ತು ಇತರ ಪ್ರಮುಖ ನಗರಗಳು ಸೇರಿದಂತೆ 200 ಕಡೆ ಈ ಮಹೋತ್ಸವವನ್ನು ಆಚರಿಸಲಾಗುತ್ತದೆಯಂತೆ. ಇದಕ್ಕಾಗಿ 33 ತಂಡಗಳನ್ನು ರಚಿಸಲಾಗಿದೆಯಂತೆ. ಪ್ರತಿಯೊಂದರಲ್ಲಿ ಒಬ್ಬರು ಕೇಂದ್ರ ಸಂಪುಟ ಮಂತ್ರಿ, ಒಬ್ಬ ರಾಜ್ಯ ದರ್ಜೆಯ ಮಂತ್ರಿ ಮತ್ತು ಪಕ್ಷದ ರಾಷ್ಟ್ರೀಯ, ಸಂಬಂಧಪಟ್ಟ ರಾಜ್ಯಗಳ, ಜಿಲ್ಲೆಗಳ ಮುಖಂಡರು ಇರುತ್ತಾರೆ. ಬಿಜೆಪಿ ಸಂಸತ್ ಸದಸ್ಯರು ತಮ್ಮ ಕ್ಷೇತ್ರದ ಎಲ್ಲ ವಿಧಾನ ಸಭಾ ಕ್ಷೇತ್ರಗಳಲ್ಲಿ ಕನಿಷ್ಟ ಎರಡು ದಿನಗಳನ್ನು ಕಳೆಯಬೇಕು ಎಂದು ವಿಧಿಸಲಾಗಿದೆಯಂತೆ. ದೇಶದ ಬಹುಪಾಲು ಬರದ ಬವಣೆಯಲ್ಲಿ ತೊಳಲಾಡುತ್ತಿರುವಾಗ, ಸರಕಾರೀ, ಅಂದರೆ ಜನರ ಖರ್ಚಿನಲ್ಲಿ ಇಷ್ಟೊಂದು ದೊಡ್ಡ ಉತ್ಸವ ಏಕೆ, ಕೃತಿಯಲ್ಲಿ ಮಾಡಲಾಗದ್ದನ್ನು ಪ್ರಚಾರದ ಮೂಲಕ ಮುಚ್ಚಿ ಹಾಕುವ ಅನಿವಾರ್ಯತೆಯೇ? ವಿವಿಧ ರಂಗಗಲ್ಲಿ ಈ ಸರಕಾರದ 'ಸಾಧನೆ'ಗಳನ್ನು ನೋಡಿದರೆ ಹಾಗೇ ಅನಿಸದಿರದು. ಇಂತಹ 'ಸಾಧನೆ'ಗಳ ಒಂದು ಕಿರುನೋಟ ಇಲ್ಲಿದೆ.



ವಿಕಾಸ ಪರ್ವ ಮೋಜು–ವ್ಯಂಗ್ಯ ಚಿತ್ರ: ಸತೀಶ್ ಆಚಾರ್ಯ

ನಾ ತಿನ್ನಲಾರೆ'!–ಇರಬಹುದೇನೋ ಗೊತ್ತಿಲ್ಲ 'ತಿನ್ನಲು ಬಿಡಲಾರೆ' !–ಆಗಲೇ ಬಟ್ಟ ಬಯಲಾಗಿದೆ

2014ರ ಚುನಾವಣಾ ಪ್ರಚಾರದ ವೇಳೆಯಲ್ಲಿ ಪ್ರಧಾನಿಗಳು 'ನ ಖಾವೂಂಗಾ, ನ ಖಾನೇ ದೂಂಗಾ' ಎಂದು ಸಾರಿದ್ದರು. ಅವರ ಬೇರೆಲ್ಲ ಘೋಷಣೆಗಳ ಟೊಳ್ಳುಗಳು ಬಯಲಾಗುತ್ತಿರುವುದನ್ನು ಒಪ್ಪಿಕೊಳ್ಳಲೇ ಬೇಕಾಗಿ ಬಂದಿರುವ ಕೆಲವು ಟಿಪ್ಪಣಿಗಾರರು ಇದೊಂದು ಘೋಷಣೆ ಮಾತ್ರ ಟೊಳ್ಳಾಗಿಲ್ಲ ಎನ್ನುತ್ತಿದ್ದಾರೆ. ಆದರೆ ವಾಸ್ತವತೆಯೇನು?



ಭ್ರಷ್ಟಾಚಾರ–ವಿರೋಧಿ ಧೋರಣೆಗಳಿಗೆ ಒಂದು ಕಾನೂನಿನ ಚೌಕಟ್ಟು ಬೇಕಾಗುತ್ತದೆ. ಕಳೆದ ಎರಡು ವರ್ಷಗಳಲ್ಲಿ ಈ ದಿಕ್ಕಿನಲ್ಲಿ ಸಾಧಿಸಿದ್ದೇನು?

* ಲೋಕಪಾಲ ಮಸೂದೆ ಇನ್ನೂ ಮಸೂದೆಯಾಗಿಯೇ ಉಳಿದಿದೆ, ಅದನ್ನು ಮತ್ತಷ್ಟು ದುರ್ಬಲಗೊಳಿಸುವ ತಿದ್ದುಪಡಿಗಳನ್ನು ಕಳೆದೆರಡು ವರ್ಷಗಳಲ್ಲಿ ಸೂಚಿಸಲಾಗಿದೆ, ಆದ-ರೆ, ಈಗ ಲೋಕಸಭೆಯಲ್ಲಿ ಕಾನೂನು ಪ್ರಕಾರ ಮಾನ್ಯ ಮಾಡಲಾದ 'ಪ್ರತಿಪಕ್ಷದ ಮುಖಂಡರು' ಇಲ್ಲವಾದ್ದರಿಂದ ಲೋಕಪಾಲರನ್ನು ಆರಿಸುವ ಸಮಿತಿಯಲ್ಲಿ 'ಪ್ರತಿಪಕ್ಷದ ಮುಖಂಡರು' ಎನ್ನುವಲ್ಲಿ ಅತಿ ದೊಡ್ಡ ಪ್ರತಿಪಕ್ಷದ ಮುಖಂಡರು ಎಂದು ಸಣ್ಣ ತಿದ್ದುಪಡಿ ಮಾಡದಿರುವುದರಿಂದ ಅದಿನ್ನೂ ಮಸೂದೆಯಾಗಿಯೇ ಉಳಿದಿದೆ. ವಾಸ್ತವವಾಗಿ ಮೋದಿ ಸರಕಾರಕ್ಕೆ ಇದನ್ನು ಕಾನೂನು ಮಾಡುವುದೇ ಬೇಕಿಲ್ಲವೇನೋ. ಏಕೆಂದರೆ ಅವರ ಗುಜರಾತ ಮಾದರಿಯಲ್ಲಿ ಹತ್ತು ವರ್ಷಗಳ ನಂತರ ಸುಪ್ರಿಂ ಕೋರ್ಟಿನ ಮಧ್ಯಪ್ರವೇಶದ ನಂತರವೇ ಲೋಕ ಆಯುಕ್ತರನ್ನು ನೇಮಿಸಿದ್ದು.

* ಭ್ರಷ್ಟಾಚಾರ ತಡೆ ಕಾನೂನು: ಈ ಕಾನೂನಿನಲ್ಲಿ

ಪುಟ 11 ನೋಡಿ

ರಭಸದ ಆರ್ಥಿಕ ಸುಧಾರಣೆಯ ಬಡಾಯಿಯ ಹಿಂದೆ ಶ್ರೀಮಂತರಿಗೆ, ಕಾರ್ಪೊರೇಟ್‌ಗಳಿಗೆ ಭಾರೀ ರಿಯಾಯ್ತಿ

ತಮ್ಮ ಸರಕಾರ ಈ ಎರಡೇ ವರ್ಷಗಳಲ್ಲಿ ಯುಪಿಎ ಸರಕಾರ ಹತ್ತು ವರ್ಷಗಳಲ್ಲಿ ಮಾಡಿದ್ದಕ್ಕಿಂತ ಹೆಚ್ಚು 'ಆರ್ಥಿಕ ಸುಧಾರಣೆ'ಗಳನ್ನು ಮಾಡಿದೆ, ಇದನ್ನು ಮಾಡಲು ಯಾರೂ ಇಷ್ಟು ಧೈರ್ಯ ತೋರಿಸಿರಲಿಲ್ಲ ಎಂದು ಪ್ರಧಾನಿಗಳು ನ್ಯೂಯಾರ್ಕಿನ 'ವಾಲ್‌ಸ್ಟ್ರೀಟ್ ಜರ್ನಲ್'ಗೆ ನೀಡಿದ ಒಂದು ಸಂದರ್ಶನದಲ್ಲಿ ಕೊಚ್ಚಿಕೊಂಡಿರುವುದಾಗಿ ವರದಿಯಾಗಿದೆ.

ನಿಜ, ಇದೊಂದು ಮಾತ್ರ ಅವರ ಟೊಳ್ಳು ಜಂಭವಾಗಿರಲಿಲ್ಲ. ಜಗತ್ತಿನ ಒಂದು ಪ್ರಮುಖ ಹಣಕಾಸು ದೈನಿಕಕ್ಕೆ ಅವರು ತಾನು ವಿದೇಶೀ ಹಣಕಾಸು ಕುಳಗಳಿಗಾಗಿ ಏನು ಮಾಡಿದ್ದೇನೆ ಎಂದು ಹೇಳಿಕೊಳ್ಳುವ ಮೂಲಕ ವಿದೇಶಿ ಮತ್ತು ದೇಶೀ ಕಾರ್ಪೊರೇಟ್‌ಗಳ ಪರವಾಗಿ ಇಷ್ಟೊಂದು ಭಂಡತನವನ್ನು ನಮ್ಮ ದೇಶದಲ್ಲಿ ಈ ಹಿಂದೆ ಯಾವ ಸರಕಾರವೂ ಪ್ರದರ್ಶಿಸಿರಲಿಲ್ಲ ಎಂಬ ವಿಶ್ವಾಸವನ್ನೂ ಮೂಡಿಸಿದ್ದಾರೆ.

ನವಂಬರ್ 2015ರಲ್ಲಿ ಈ ಸರಕಾರ 'ಎಫ್‌ಡಿಐ ಧಮಾಕಾ' ಪ್ರಕಟಿಸಿತು. ರಕ್ಷಣೆ, ಬ್ಯಾಂಕಿಂಗ್, ವಿಮೆ, ಕಟ್ಟಡ ನಿರ್ಮಾಣ, ಏಕಬ್ರಾಂಡ್ ಚಿಲ್ಲರೆ ವ್ಯಾಪಾರ, ಪ್ರಸಾರ, ನಾಗರಿಕ ವಿಮಾನಯಾನ ಮುಂತಾದ ಬಹು ಮಹತ್ವದ 15 ವಲಯಗಳಲ್ಲಿ ವಿದೇಶಿ ನೇರ ಹೂಡಿಕೆಗಳಿಗೆ ಭಾರೀ ರಿಯಾಯ್ತಿಗಳನ್ನು ಸಾರಲಾಯಿತು–ದೇಶದ ಸಂಪನ್ಮೂಲಗಳ ಲೂಟಿಗೆ.

ಇನ್ನು ಈ ಸರಕಾರದ ಎರಡು ಬಜೆಟ್‌ಗಳಲ್ಲಿ ಕಾರ್ಪೊರೇಟ್‌ಗಳಿಗೆ ನೀಡಿದ ರಿಯಾಯ್ತಿಗಳ ಪ್ರಮಾಣ ನೋಡಿ:

ಹೆಚ್ಚಿನ ಆದಾಯವುಳ್ಳವರಿಂದ ವಸೂಲಿ ಮಾಡುವ ನೇರ ತೆರಿಗೆಗಲ್ಲಿ ರಿಯಾಯ್ತಿಗಳ ಮೂಲಕ ಕಳಕೊಂಡದ್ದನ್ನು ಕೆಳ ಆದಾಯದವರೂ ಸಏರಿದಂತೆ ಎಲ್ಲರೂ ತೆರಬೇಕಾದ ಪರೋಕ್ಷ ತೆರಿಗೆಗಳನ್ನು ಹೆಚ್ಚಿಸುವ 'ಧೈರ್ಯ'ವನ್ನು ಈ ಸರಕಾರ ತೋರಿದೆ. ಈ ಕೆಳಗಿನ ಪಟ್ಟಿ ನೋಡಿ

ವರ್ಷ	ನೇರತೆರಿಗೆಗಳಲ್ಲಿ'ನಷ್ಟ'	ಪರೋಕ್ಷ ತೆರಿಗೆಗಳಲ್ಲಿ 'ಲಾಭ'
2015	8315ಕೋಟಿ ರೂ.	23,383 ಕೋಟಿ ರೂ.
2016	1060 ಕೋಟಿರೂ.	20,670 ಕೋಟಿ ರೂ.
2 ವರ್ಷಗಳಲ್ಲಿ ಒಟ್ಟು	9375 ಕೋಟಿ ರೂ.	44,053 ಕೋಟಿ ರೂ.

ಇದಲ್ಲದೆ ಕಾರ್ಪೊರೇಟ್ ವಲಯದಿಂದ ವಿವಿಧ ತೆರಿಗೆಗಳು, ಕರಗಳ ಮೂಲಕ ವಸೂಲಿ ಮಾಡಬೇಕಾಗಿದ್ದ ಹಣದಲ್ಲಿ 2015–16ರಲ್ಲಿ ಒಟ್ಟು ರೂ.1.3ಲಕ್ಷ ಕೋಟಿಯಷ್ಟು ಹಣವನ್ನು ಬಿಟ್ಟು ಕೊಡಲಾಗಿದೆ ಎಂದು 2016–17ರ ಬಜೆಟ್ ಅಂಕಿ–ಅಂಶಗಳಿಂದ ತಿಳಿದು ಬರುತ್ತದೆ.

ಈ ಹಣ ಕೋಟ್ಯಂತರ ಜನಸಾಮಾನ್ಯರಿಗೆ ಕನಿಷ್ಟ 100 ದಿನಗಳ ಉದ್ಯೋಗ ಕೊಡಿಸುವ ಮನರೇಗಕ್ಕೆ ಎರಡು ವರ್ಷಗಳಿಗೆ ಮತ್ತು ಆರೋಗ್ಯ ಮಿಶನ್‌ಗೆ ಮೂರು ವರ್ಷಗಳಿಗೆ ಸಾಲುವಷ್ಟು ಹಣ! ಮನರೇಗಕ್ಕೆ ಹಣ ಕಡಿತ ಮಾಡಿದ್ದು ಇತ್ತೀಚೆಗೆ ಸುಪ್ರಿಂ ಕೋರ್ಟಿನ ಟೀಕೆಗೂ ಗುರಿಯಾಯಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

'ಸಬ್‌ಕಾ ಸಾಥ್, ಸಬ್ ಕಾ ವಿಕಾಸ್, ಅಂ–ದರೆ ಎಲ್ಲರೊಂದಿಗೆ ಎಲ್ಲರ ಅಭಿವೃದ್ಧಿ ಎಂಬುದು ಈ ಘೋಷಣಾಪ್ರಿಯ ಸರಕಾರದ ಘೋಷಣೆ ಗಳಲ್ಲಿ ಒಂದು. ಆದರೆ ವಾಸ್ತವವಾಗಿ 'ಶ್ರೀಮಂತರೊಂದಿಗೆ, ಶ್ರೀಮಂತರ ವಿಕಾಸಕ್ಕಾಗಿ' ಎಂಬುದೇ ಸರಿಯಾದ ಘೋಷಣೆ.



ಬೆಲೆಯೇರಿಕೆ: ವ್ಯಾಪಾರಿಗಳ ತಿಜೋರಿ ತುಂಬಲು ಜನಸಾಮಾನ್ಯರ ಜೇಬಿಗೆ ಕತ್ತರಿಯ ದಾರಿ

ಮೋದಿ ಸರಕಾರ ಬಂದ ಮೇಲೆ ಸಗಟು ಬೆಲೆ ಸೂಚ್ಯಂಕ ಇಳಿಯುತ್ತಿದೆ, ಅದು ಋಣಾತ್ಮಕ ಸಂಖ್ಯೆಯಲ್ಲಿದೆ– ಅಂದರೆ ಸಗಟು ಬೆಲೆಗಳ ಏರಿಕೆಯ ಪ್ರಮಾಣ ಕಡಿಮೆಯಾಗಿದೆಯಷ್ಟೇ ಅಲ್ಲ, ವಾಸ್ತವವಾಗಿ 2014ರ ಮೇ ಗಿಂತ ಮೊದಲಿದ್ದುದಕ್ಕಿಂತ ಇಳಿದಿದೆ ಎಂದು ಆಳುವ ಪಕ್ಷದ ವಕ್ತಾರರು ಬೀಗುತ್ತಿದ್ದಾರೆ. ಆದರೆ,

* ಈರುಳ್ಳಿ ಬೆಲೆ ಅಕ್ಟೋಬರ್–ನವಂಬರ್2014ರಲ್ಲಿ ಕೆಜಿಗೆ 100ರೂ.ದಾಟಿತು!
* ತೊಗರಿ ಬೇಳೆ ಬೆಲೆ ಸಪ್ಟಂಬರ್–ನವಂಬರ್ 2015ರಲ್ಲಿ ಕೆಜಿಗೆ 200ರೂ.ದಾಟಿತು. ಈಗ ಅದು ಸ್ವಲ್ಪ ಇಳಿದಿದ್ದರೂ ಇನ್ನೂ 2 ವರ್ಷ ಹಿಂದಿದ್ದುದರ ಬೆಲೆಯ 140% ದ ಸುತ್ತಮುತ್ತಲೇ ಇದೆ.!
* ಆಲೂಗಡ್ಡೆ ಬೆಲೆ ಕಳೆದ ತಿಂಗಳು ಡಬ್ಬಲ್ ಆಯಿತು!
* ಸಕ್ಕರೆ ಬೆಲೆಗಳಲ್ಲಿ 60ಶೇ.ಕ್ಕಿಂತ ಹೆಚ್ಚಿನ ಬೆಲೆಯೇರಿಕೆ ಅಗಿದೆ.

ಸಗಟು ಬೆಲೆಗಳು ಇಳಿದರೂ ಜನಸಾಮಾನ್ಯರೇಕೆ ವಿಪರೀತ ಬೆಲೆ ತೆರಬೇಕಾಗಿದೆ?

ಇದಕ್ಕೆ ಸರಕಾರದ ಅದಕ್ಷ ನಿರ್ವಹಣೆ ಒಂದು ಕಾರಣವಾದರೆ, 'ಮಾರುಕಟ್ಟೆ ಶಕ್ತಿಗಳ' ಮೇಲೆ ಅದರ ಮಮತೆ ಇನ್ನೊಂದು ಕಾರಣ. ವಾಸ್ತವವಾಗಿ, ಈ ಅದಕ್ಷತೆ ಮತ್ತು ಮಮತೆ ಪರಸ್ಪರ ಪೂರಕ ಅಂಶಗಳು ಎಂದೂ ಕಂಡು ಬಂದಿದೆ.

ಉದಾಹರಣೆಗೆ, 2014–15ರಲ್ಲಿ ಬರದಿಂದಾಗಿ ಬೇಳೆಕಾಳುಗಳ ಉತ್ಪಾದನೆ ತೀವ್ರವಾಗಿ ಇಳಿದಿದೆ ಎಂದು ಸರಕಾರಕ್ಕೆ ಗೊತ್ತಿದೆ. ಜನರ ಬಗ್ಗೆ ಯೋಚಿಸುವ ಸರಕಾರ ಬೇಳೆಕಾಳುಗಳ ಆಮದು ಮಾಡಿ ಬೆಲೆಯೇರಿಕೆ ಯಾಗದಂತೆ ತಡೆಯಬಹುದಾಗಿತ್ತು. 'ಉತ್ತಮ ಆಳ್ವಿಕೆ'ಯ ಕೂಗು ಹಾಕುವ ಸರಕಾರ ಅದನ್ನು ಮಾಡಲಿಲ್ಲ. ಕೊನೆಗೂ ಆಮದು ಮಾಡಲು ಹೊರಟಾಗ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆಗಳು ವಿಪರೀತ ಏರಿದ್ದವು.



ವ್ಯಂಗ್ಯಚಿತ್ರ:ಪಿ.ಮಹಮ್ಮದ್, ವಿಜಯ ಕರ್ನಾಟಕ

ಇನ್ನೊಂದೆಡೆಯಲ್ಲಿ 'ಮಾರುಕಟ್ಟೆಗಳನ್ನು ಮುಕ್ತಗೊಳಿಸುವ' ಹೆಸರಿನಲ್ಲಿ ಖಾಸಗಿ ವ್ಯಾಪಾರಿಗಳು ಕಡಿಮೆ ಉತ್ಪಾದನೆಯ ಪರಿಸ್ಥಿತಿಯ ಪ್ರಯೋಜನ ಪಡೆಯಲು ಅವಕಾಶ ಕಲ್ಪಿಸಲಾಯಿತು. ಅಂ–ದರೆ ಬೇಳೆ ಕಾಳುಗಳ ಕಳ್ಳದಾಸ್ತಾನು ಮಾಡಿ, ಬೇಡಿಕೆ ಹೆಚ್ಚಿದಾಗ ದುಬಾರಿ ಬೆಲೆಗಳಿಗೆ ಮಾರಲು 'ಮುಕ್ತ ಅವಕಾಶ'ದ ಮೂಲಕ ಖಾಸಗಿ ಖಜಾನೆಗಳನ್ನು ತುಂಬಿಸಿಕೊಳ್ಳುವುದು

ನಮ್ಮ ಪ್ರಧಾನಿಗಳ ನಿಕಟ ಮಿತ್ರ ಅದಾನಿಯವರು ಸಿಂಗಪುರದ ವಿಲ್ಮರ್ ಕಂಪನಿಯೊಂದಿಗೆ ಸೇರಿಕೊಂಡು 2014ರಲ್ಲಿ ರಚಿಸಿದ ಅದಾನಿ ವಿಲ್ಮರ್ ಆಹಾರ ಕಂಪನಿ 100 ಲಕ್ಷ ಟನ್ ಧಾನ್ಯ ಸಂಗ್ರಹಿಸಿ ಈ ಪ್ರಕ್ರಿಯೆಯಲ್ಲಿ 1,90,000ಕೋಟಿ ರೂ. ಲಾಭ ಮಾಡಿಕೊಂಡಿದೆ ಎಂದು 'ಖಬರ್' ವೆಬ್ ಪತ್ರಿಕೆ ಲೆಕ್ಕ ಹಾಕಿದೆ.

***

ಈ ಎರಡು ವರ್ಷಗಳಲ್ಲಿ ಬಯಲಾಗಿರುವ ಮೋದಿ ಸರಕಾರದ ಜನ–ವಿರೋಧಿ ನಿಲುವಿನ ಇನ್ನೊಂದು ಜ್ವಲಂತ ಉದಾಹರಣೆ–ಅಂತರ್ರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕಚ್ಚಾತೈಲದ ಬೆಲೆಗಳು ದೊಡ್ಡಪ್ರಮಾಣದಲ್ಲಿ ಕುಸಿಯುತ್ತಿದ್ದರೂ ಅದರ ಪೂರ್ಣ ಪ್ರಯೋಜನ ಬಳಕೆದಾರರಿಗೆ ತಲುಪದಂತೆ ಮಾಡಿದ ಸರಕಾರ ಈಗ ಕಚ್ಚಾತೈಲದ ಬೆಲೆಗಳು ತುಸುವಾಗಿ ಏರುತ್ತಿರುವಾಗ ಅದರ ಪೂರ್ಣ ಹೊರೆಯನ್ನು ಬಳಕೆದಾರರ ಹೆಗಲ ಮೇಲೆ ದಾಟಿಸುತ್ತಿದೆ.

ಅಂತರ್ರಾಷ್ಟ್ರೀಯ ಬೆಲೆಗಳ ಇಳಿಕೆಯಿಂದ ಭಾರತಕ್ಕೆ 2.14ಲಕ್ಷ ಕೋಟಿರೂ.ಗಳ ಉಳಿಕೆಯಾಗಿದೆ. ಆದರೆ ಇದನ್ನು ಮೋದಿ ಸರಕಾರ ಐದು ಬಾರಿ ಅಬಕಾರಿ ಸುಂಕವನ್ನು ಏರಿಸಿ ಬಳಕೆದಾರರಿಂದ ಕಿತ್ತುಕೊಂಡಿದೆ. ಈ ಸರಕಾರದ ಎರಡು ವರ್ಷಗಳಲ್ಲಿ ಈಗ ಜೂನ್ 1ರಂದು 16ನೇ ಬಾರಿ ಪೆಟ್ರೋಲ್ ಬೆಲೆ, 19ನೇ ಬಾರಿ ಡೀಸೆಲ್ ಬೆಲೆ ಏರಿದೆ.

ಗರಿಷ್ಟ ಭಾಷಣ-ಕನಿಷ್ಟ ಶಾಸನ # 2_ವರ್ಷ_ತರಲಿಲ್ಲ_ಹರ್ಷ

ಕಾರ್ಮಿಕ ವರ್ಗಕ್ಕೆ ತ್ರಿಶೂಲ ತಿವಿತ



ವೈಭವೋಪೇತ ವಾರ್ಷಿಕಾಚರಣೆಯ ಪ್ರದರ್ಶನಗಳ ಥಳಕುಬೆಳಕಿನಲ್ಲಿ ಎಲ್ಲ ಕಾರ್ಪೊರೇಟ್ ಸಿಇಒಗಳು, ಬಾಲಿವುಡ್ ತಾರೆಗಳು ಮತ್ತು ಆಳುವ ಮಂದಿಗಳ ಭಟ್ಟಂಗಿಗಳು. ನಡುವೆ ಸಹಜವಾಗಿಯೇ ದೇಶದ 50 ಕೋಟಿ ದುಡಿಮೆಗಾರರಿಗೆ ಸ್ಥಾನವಿಲ್ಲ. ಸ್ಥಾನವಿಲ್ಲ, ಮಾತ್ರವಲ್ಲ ಈ ಎರಡು ವರ್ಷಗಳಲ್ಲಿ ಮೂರು ವಿಧಗಳ ದಾಳಿಗಳ ತ್ರಿಶೂಲ ಅವರನ್ನು ತಿವಿಯುತ್ತಿದೆ.

ಮೊದಲನೆಯದಾಗಿ, ಉದ್ದಿಮೆಗಳ ಕ್ಲೋಶರ್, ರಿಟ್ರೆಂಚ್‌ಮೆಂಟ್‌ಗಳ ಮೂಲಕ ಉದ್ಯೋಗಗಳ ಮೇಲೆ ದಾಳಿ, ಎರಡನೆಯದಾಗಿ ಅವರ ಸಂಬಳ-ಸೌಲಭ್ಯಗಳ ಮೇಲೆ ದಾಳಿ ಮತ್ತು ಮೂರನೆಯದಾಗಿ ಅವರಿಗೆ ಸ್ವಲ್ಪವಾದರೂ ರಕ್ಷಣೆ, ಹಕ್ಕುಗಳನ್ನು ಕೊಟ್ಟಿರುವ ಕಾರ್ಮಿಕ ಕಾನೂನುಗಳ ಮೇಲೆಯೇ ದಾಳಿ.

ವರ್ಷಕ್ಕೆ ಎರಡು ಕೋಟಿ ಉದ್ಯೋಗಗಳನ್ನು ನಿರ್ಮಿಸುವ ಭರವಸೆ ನೀಡಿದ್ದ ಸರಕಾರ ಅದರಲ್ಲಿ ಶೋಚನೀಯವಾಗಿ ವಿಫಲವಾಗಿರುವುದು ಮಾತ್ರವಲ್ಲ, ಉಕ್ಕು, ವಿದ್ಯುತ್, ಜವಳಿ, ಗಾರ್ಮೆಂಟ್ಸ್, ವಾಹನಗಳು ಇತ್ಯಾದಿ ಉತ್ಪಾದನಾ ಕೈಗಾರಿಕೆಗಳಲ್ಲೂ, ಸೇವಾರಂಗದಲ್ಲೂ ಕ್ಲೋಶರ್, ರಿಟ್ರೆಂಚ್‌ಮೆಂಟ್‌ಗಳ ಮೂಲಕ ಸಾವಿರಾರು ಉದ್ಯೋಗಗಳ ಸಂಹಾರವಾಗುತ್ತಿದೆ. ಇದಕ್ಕೆಲ್ಲ ಮೋದಿ ಸರಕಾರ ಹೇಗೆ ಹೊಣೆಯಾಗುತ್ತದೆ ಎಂಬ ಪ್ರಶ್ನೆ ಕೇಳಬಹುದು.. ಎರಡು ರೀತಿಗಳಲ್ಲಿ ಹೊಣೆಯಾಗುತ್ತದೆ. ಮೊದಲನೆಯದಾಗಿ, ಇಂತಹ ಸಮಸ್ಯೆಗಳಿಂದ ಕಾರ್ಮಿಕರಿಗೆ ರಕ್ಷಣೆ ಕೊಡುವ ಕ್ರಮಗಳ ಬಗ್ಗೆ ಅದು ಯೋಚಿಸುತ್ತಿಲ್ಲ. ಎರಡನೆಯದಾಗಿ, ದೇಶದ ಆಂತರಿಕ ಮಾರುಕಟ್ಟೆಯನ್ನು ಬೆಳೆಸದೆ, ಅದಕ್ಕಾಗಿ ಜನಸಾಮಾನ್ಯ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ ಧೋರಣೆಯನ್ನು ಅನುಸರಿಸದೆ, ರಫ್ತು-ಆಧಾರಿತ ಬೆಳವಣಿಗೆಯ ದಾರಿಯನ್ನೇ ಹಿಡಿದು ಭಾರತೀಯ ಉತ್ಪಾದನಾ ರಂಗವನ್ನು ಅಂತರ್ರಾಷ್ಟ್ರೀಯ ಮಾರುಕಟ್ಟೆಗಳಿಗೆ, ಹೂಡಿಕೆಗಳಿಗೆ ತೆರೆಯುವ ಈಗಾಗಲೇ ವಿಫಲವಾಗಿರುವ ಹಳಸಲು ದಾರಿಯನ್ನೇ ಹಿಡಿದಿದೆ. 'ಮೇಕ್ ಇನ್ ಇಂಡಿಯಾ' ಇಂತಹ ಒಂದು ಕುಖ್ಯಾತ ವಿಫಲ ಯೋಜನೆ.

ಎರಡನೆಯದಾಗಿ, ನೇರವಾಗಿ ಸಾಮಾಜಿಕ ಸೌಲಭ್ಯಗಳ ಕಡಿತ ಮತ್ತು ಪರೋಕ್ಷವಾಗಿ ಬೆಲೆಯೇರಿಕೆಗಳ ಮೂಲಕ ಕಾರ್ಮಿಕರ ಆದಾಯಗಳ ಮೇಲೆ ದಾಳಿ ನಡೆದಿದೆ. ನವಂಬರ್ 2015ರಲ್ಲಿ ಮೋದಿ ಸರಕಾರ ದಿನಕ್ಕೆ 273 ರೂ. ಅಥವ ತಿಂಗಳಿಗೆ ರೂ.7100 ರಾಷ್ಟ್ರೀಯ ಕನಿಷ್ಟ ಕೂಲಿ ಎಂದು ಸೂಚಿಸುವ ಆಶಯವನ್ನು ವ್ಯಕ್ತಪಡಿಸಿತ್ತು. ವಾಸ್ತವವಾಗಿ ಸುಪ್ರಿಂ ಕೋರ್ಟ್ ನೀಡಿರುವ ನಿರ್ದೇಶನ ಸೂತ್ರಗಳು ಮತ್ತು 1957ರಲ್ಲಿ ಅಧಿಕೃತ ತ್ರಿಪಕ್ಷೀಯ ಸಂಘಟನೆಯಾದ ಭಾರತೀಯ ಕಾರ್ಮಿಕ ಸಮ್ಮೇಳನವೇ ಸೂಚಿಸಿದ ಸೂತ್ರಗಳ ಪ್ರಕಾರ 15,000ರೂ. ಆಗಬೇಕು.

ಕಾರ್ಮಿಕರ ಭವಿಷ್ಯ ನಿಧಿಯ ಮೇಲೆ ಮಿತಿಗಳನ್ನು ಹೇರಲು, ಬಡ್ಡಿದರವನ್ನು ಇಳಿಸಲು ಅದು ಮಾಡಿರುವ ಪ್ರಯತ್ನಗಳು ಇತ್ತೀಚಿನ ಉದಾಹರಣೆಗಳು. ಘನತೆಯ ಬದುಕು ಸಾಗಿಸಲು ಅಗತ್ಯವಾದ ಆದಾಯವಿಲ್ಲದ, ಸಾಮಾಜಿಕ ಭದ್ರತೆಗಳಿಲ್ಲದ ಭಾರತದ ಅಗ್ಗದ ಶ್ರಮಶಕ್ತಿಯೇ ಈ ಸರಕಾರಕ್ಕೆ ವಿದೇಶಿ ಹೂಡಿಕೆಗಳನ್ನು ಆಕರ್ಷಿಸುವ ಪ್ರಮುಖ ಅಂಶ ಎಂಬ ನಾಚಿಕೆಗೇಡಿನ ಸಂಗತಿಯನ್ನು ಗಮನಿಸಬೇಕು.

ಕಾರ್ಮಿಕ ಕಾನೂನುಗಳ ರಕ್ಷಣೆಯನ್ನು ಇಲ್ಲದಂತೆ ಮಾಡುವುದು, ಆಮೂಲಕ ಹೆಚ್ಚಿನ ಶೋಷಣೆಗೆ ಮತ್ತು ಮಾಲಕರಿಗೆ ಹೆಚ್ಚಿನ ಲಾಭಕ್ಕೆ ಅವಕಾಶ ಕಲ್ಪಿಸುವುದು, ಖಾಯಂ ನೌಕರಿಯನ್ನು ಕಡಿಮೆ ಮಾಡಿ ಕಾಂಟ್ರಾಕ್ಟ್ ವ್ಯವಸ್ಥೆಯನ್ನು ವಿಸ್ತರಿಸುವುದೇ ಕಾರ್ಮಿಕರಂಗದಲ್ಲಿ ಮೋದಿ ಸರಕಾರದ ಪರಮ ಗುರಿಯಿರುವಂತೆ ಕಾಣುತ್ತಿದೆ. ಇದಕ್ಕಾಗಿ ಈಗಿರುವ ಸುಮಾರು 40 ಕಾನೂನುಗಳನ್ನೆಲ್ಲ ತೆಗೆದು ಹಾಕಿ ಕೇವಲ 5 ಕಾನೂನುಗಳಾಗಿ ಮಾಡಲು 5 ಮಸೂದೆಗಳನ್ನು ಅದು ತಯಾರಿಸಿದೆ. ಕಾರ್ಮಿಕ ಕಾನೂನುಗಳು ರಾಜ್ಯ ಸರಕಾರಗಳ ಸಹಮತಿಯೂ ಬೇಕಾದ ಸಮವರ್ತಿ ಪಟ್ಟಿಯಲ್ಲಿರುವುದರಿಂದ ಬಿಜೆಪಿ ನೇತೃತ್ವದ ಸರಕಾರಗಳ ಈ ಮೂಲಕ ಇಂತಹ 'ಕಾರ್ಮಿಕ ಸುಧಾರಣೆ'ಗಳನ್ನು ತರುವ ಪ್ರಯತ್ನ ನಡೆದಿದೆ.

ಈ ನಡುವೆ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ, ಕೃಷಿ ಕೂಲಿಕಾರರಿಗೆ ಕನಿಷ್ಟ ಕೂಲಿ ಮತ್ತು ಸರಕಾರದ ಯೋಜನೆಗಳಲ್ಲಿ ಕೆಲಸ ಮಾಡುತ್ತಿರುವ ಅಂಗನವಾಡಿ, ಬಿಸಿಯೂಟ, ಆಶಾ ಮುಂತಾದ ನೌಕರರಿಗೆ ಹೆಚ್ಚಿನ ಸಂಬಳ ಮತ್ತು ಹೆಚ್ಚಿನ ಉದ್ಯೋಗ ಭದ್ರತೆಯ ಬೇಡಿಕೆಗಳನ್ನಂತೂ ಈ ಸರಕಾರ ಸಂಪೂರ್ಣವಾಗಿ ಉಪೇಕ್ಷಿಸಿದೆ.



ಬಹುಪಾಲು ಭಾರತೀಯ ಜನತೆಯ ಪಾಲಿಗೆ ಬಂದಿರುವುದು ಒಂದು ಆರ್ಥಿಕ ವಿಪತ್ತು ಮಹೋತ್ಸವ ಆಚರಿಸಲು ಯಾವುದೇ ಕಾರಣವಿಲ್ಲ,

-ಸಿಪಿಐ(ಎಂ) ಪೊಲಿಟ್‌ಬ್ಯುರೋ

* ಎಂಟು ಶ್ರಮ ಹೆಚ್ಚಾಗಿ ಬೇಕುವ ಉದ್ದಿಮೆಗಳಲ್ಲಿ ನಿರ್ಮಾಣವಾದ ಉದ್ಯೋಗಗಳ ಸಂಖ್ಯೆ ಇತ್ತೀಚಿನ ಆರು ವರ್ಷಗಳಲ್ಲೇ ಅತಿ ಕಡಿಮೆ. ವರ್ಷಕ್ಕೆ ಎರಡು ಕೋಟಿ ಉದ್ಯೋಗ ನಿರ್ಮಾಣದ ವಚನದ ಬದಲಿಗೆ 2015ರಲ್ಲಿ ಕಂಡಿದ್ದು ಕೆಲವೇ ಹೊಸ ಉದ್ಯೋಗಗಳು.
* ರಫ್ತುಗಳಲ್ಲಿ ಕಳೆದ 63 ವರ್ಷಗಳಲ್ಲೇ ಅತಿ ಕೆಟ್ಟ ಇಳಿಕೆ, ಸತತ 17 ತಿಂಗಳಲ್ಲಿ ಇಳಿಕೆ
* ಒಟ್ಟು ಹಣದುಬ್ಬರ ದರ 6.8ಶೇ. ಬೇಳೆ ಬೆಲೆಗಳಲ್ಲಿ 30ಶೇ. ಹೆಚ್ಚಳ
* ಪ್ರಧಾನ ಕೈಗಾರಿಕಾ ವಲಯದ ಬೆಳವಣಿಗೆ ಕೇವಲ 2.7ಶೇ.-ಈ ದಶಕದಲ್ಲೇ ಅತಿ ಕಮ್ಮಿ.
* 2015ರಲ್ಲಿ 2997 ರೈತರ ಆತ್ಮಹತ್ಯೆ. ಈ ವರ್ಷದ ಮೊದಲ 3 ತಿಂಗಳಲ್ಲಿ 116.
* ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ- ಕೂಲಿ ಬಾಕಿ, ಸುಪ್ರಿಂ ಕೋರ್ಟ್ ಆದೇಶದ ನಂತರವೇ ಪಾವತಿ
* ಗ್ರಾಮೀಣ ನಿಜಕೂಲಿಗಳಲ್ಲಿ ಇಳಿಕೆ
* ಬ್ಯಾಂಕ್ ಉಳಿತಾಯ ಠೇವಣಿಗಳ ಬೆಳವಣಿಗೆ ದರ-53ವರ್ಷಗಳಲ್ಲೇ ಅತಿ ಕಡಿಮೆ
* ಬ್ಯಾಂಕ್‌ಗಳ ಘುಸ್ತಿ ಸಾಲಗಳ ಮೊತ್ತ 13ಲಕ್ಷ ಕೋಟಿ ರೂ.
* ಜನಧನ ಖಾತೆಗಳಲ್ಲಿ 27ಶೇ.ದಲ್ಲಿ ರುವ ಹಣ ಸೊನ್ನೆ. 33 ಶೇ. ಡೂಪ್ಲಿಕೇಟ್
* ಹೊಸ-ಹೊಸ ತೆರಿಗೆಗಳು, ಸೆಸ್‌ಗಳು-ಎಲ್ಲವೂ ಬಡವರ ಬಳಕೆಯ ವಸ್ತುಗಳ ಮೇಲೆ.
* ಕೃಷಿ ಮತ್ತು ಸಂಬಂಧಿತ ವಲಯದ ಬೆಳವಣಿಗೆ 2014-15ರಲ್ಲಿ -0.2ಶೇ. ಅಂದರೆ ಇಳಿಕೆ, 2015-16ರಲ್ಲಿ 1.1ಶೇ.
* ಹಲವು ಬೆಳೆಗಳಲ್ಲಿ ಲಾಭಾಂಶದಲ್ಲಿ ಇಳಿಕೆ- ಉತ್ಪಾದನಾ ವೆಚ್ಚ+50ಶೇ.ದ ವಚನದ ಬಗ್ಗೆ ದಿವ್ಯಮೌನ
* ಸುಪ್ರಿಂ ಕೋರ್ಟ್ ಆದೇಶದ ನಂತರವೇ 12 ರಾಜ್ಯಗಳಲ್ಲಿ ಬರ ಪರಿಸ್ಥಿತಿ ಘೋಷಣೆ- 13 ರಾಜ್ಯಗಳಲ್ಲಿ 54 ಕೋಟಿ ಜನ ಬರದ ಬವಣೆಯಲ್ಲಿ.
* 25ಶೇ. ಗ್ರಾಮವಾಸಿಗಳಿಗೆ ಕುಡಿಯುವ ನೀರಿಲ್ಲ.

ಭಾಷಣವೀರನ ದಿವ್ಯಮೌನ- 'ಅಭಿವೃದ್ಧಿ' ಮಂತ್ರದಿಂದ ಮರೆಮಾಚಲಾಗದ ಕೋಮು ಧ್ರುವೀಕರಣದ ಸಿದ್ಧ ಸೂತ್ರ

ಮೇ 2014ರ ಕೊನೆಯಲ್ಲಿ 'ಸಬ್ ಕೇ ಸಾಥ್, ಸಬ್ ಕಾ ವಿಕಾಸ್'ಎಂದು ಹೇಳುತ್ತ ಮೋದಿ ಸರಕಾರ ಅಧಿಕಾರ ಸ್ವೀಕರಿಸಿದ ಕೆಲವೇ ದಿನಗಳಾಗಿದ್ದವು. ಪುಣೆಯಲ್ಲಿ ಮುಸ್ಲಿಮರ ಅಂಗಡಿಗಳು, ಆಸ್ತಿಗಳ ಮೇಲೆ ಜನಜಂಗುಳಿ ದಾಳಿ ನಡೆಸಿದವು. ಇದರಲ್ಲಿ ಯುವ ಇಂಜಿನಿಯರ್ ಹಿಂದುತ್ವ ಮಂದಿಯ ನಿರೂಪಣೆಯ ಪ್ರಕಾರವೇ ಒಬ್ಬ 'ಒಳ್ಳೆ ಮುಸಲ್ಮಾನ' ಮೊಹಿಸಿನ್ ಶೇಖ್ ಕೊಲೆಯಾದ. ದಲಿತ ಹುಡುಗಿಯನ್ನು ಮುಸ್ಲಿಮ್ ಹುಡುಗರು ಚುಡಾಯಿಸಿದ್ದರಿಂದ, ಶಿವಾಜಿ ಪುತ್ಥಳಿಯನ್ನು ಅಪವಿತ್ರಗೊಳಿಸಿದ್ದರಿಂದ ಉಂಟಾದ ಆಕ್ರೋಶದಲ್ಲಿ ಇದು ನಡೆಯಿತು ಎಂಬ ಪುಕಾರು ಶುದ್ಧ ಸುಳ್ಳು ಎಂದು ತಿಳಿದು ಬಂತು.

* 2015 ರಲ್ಲಿ ಜಮಶೇದಪುರದಲ್ಲಿ ಕೂಡ ಇಂತಹುದೇ ಸುಳ್ಳು ಸುದ್ದಿ ಹರಡಿ ಹಲವು ದಿನಗಳ ಕರ್ಫ್ಯೂಹಾಕಲಾಯಿತು.

2015ರಲ್ಲಿ ಕೋಮು ಹಿಂಸಾಚಾರಗಳ ಘಟನೆಗಳ ಸಂಖ್ಯೆ 2014ಕ್ಕೆ ಹೋಲಿಸಿದರೆ 17ಶೇ.ದಷ್ಟು ಹೆಚ್ಚಿತು ಎನ್ನಲಾಗಿದೆ. ಹೆಚ್ಚಿನ ಇಂತಹ ಘಟನೆಗಳಲ್ಲಿ ಯಾವುದೋ ಒಂದು ಘಟನೆಗೆ ಕೋಮು ಬಣ್ಣ ಕೊಟ್ಟದ್ದ-ರಿಂದ, ಅಥವ ಶುದ್ಧ ಸುಳ್ಳು ಸುದ್ದಿಯ ಮೇಲೆ ಇಂತಹ ಗಲಭೆಗಳು ನಡೆದಿವೆ ಎಂದು ಈಗ ದಾಖಲಾಗಿದೆ.


ಇಂತಹ ಗಲಭೆಗಳಲ್ಲಿ ಹೆಚ್ಚಿನವು ನಡೆದದ್ದು ಉತ್ತರ ಪ್ರದೇಶದಲ್ಲಿ. ಲೋಕಸಭಾ ಚುನಾವಣೆಗಳಲ್ಲಿ ಮುಝಫ್ಫರ್‌ನಗರ ಮುಂತಾದೆಡೆಗಳಲ್ಲಿ ಕೋಮುಧ್ರುವೀಕರಣದ ತಂತ್ರದ ಭಾರೀ ಯಶಸ್ಸಿನ ರುಚಿ ಕಂಡ ಕೋಮುವಾದಿ ಶಕ್ತಿಗಳು ಮುಂದೆ ಅಲ್ಲಿ ನಡೆಯಲಿದ್ದ ಉಪಚುನಾವಣೆಗಳ ಹಿನ್ನೆಲೆಯಲ್ಲೂ ಅದೇ ತಂತ್ರ ಬಳಸಿದರು. ಆದರೆ ಅದು ಬಹಳೇನೂ ಯಶಸ್ವಿಯಾಗಲಿಲ್ಲ. ಈಗ 2017ರಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗಳ ಹಿನ್ನೆಲೆಯಲ್ಲಿ ಈ ಪ್ರಯತ್ನ ಮುಂದುವರೆದಿದೆ.

ಬೇರೆಡೆಗಳಲ್ಲೂ ಹರ್ಯಾಣ, ದಿಲ್ಲಿ ,ರಾಜಸ್ತಾನ, ಹೈದರಾಬಾದ್, ಗುಜರಾತ್, ಬಿಹಾರಗಳಲ್ಲೂ ಇಂತಹ ಗಲಭೆಗಳು ನಡೆದಿವೆ.

ಆದರೆ ಈ ರೀತಿ ಗಲಭೆಗಳನ್ನು ಸೃಷ್ಟಿಸುವದಷ್ಟೇ ಕೋಮು ಧ್ರುವೀಕರಣದ ಏಕಮಾತ್ರ ತಂತ್ರವಲ್ಲ. ಕೋಮುವಾದಿ ಶಕ್ತಿಗಳು ಈ ಎರಡು ವರ್ಷಗಳಲ್ಲಿ ಇನ್ನೂ ಹಲವಾರು ತಂತ್ರಗಳನ್ನು ಬಳಸಿದ್ದಾರೆ.

ಲವ್ ಜಿಹಾದ್, ಮತಾಂತರ, ಘರ ವಾಪಸಿ, ಗೋರಕ್ಷೆ, ಭಾರತ್ ಮಾತಾಕೀ ಜೈ ಇವೆಲ್ಲವುಗಳ ಗುರಿ ಅಲ್ಪಸಂಖ್ಯಾತರೇ, ಮುಖ್ಯವಾಗಿ ಮುಸ್ಲಿಮರು, ಈ ಮೂಲಕ ದೇಶದ ಸಂವಿಧಾನದ ಬುನಾದಿಯಾದ ಜಾತ್ಯಾತೀತತೆಯ ಮೇಲೆ ದಾಳಿ ನಡೆಸಿ ಹಿಂದೂರಾಷ್ಟ್ರ ಪರಿಕಲ್ಪನೆಯತ್ತ ಸಾಗುವುದು.

ಇದರ ಜೊತೆಗೆ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳ ಕೇಸರೀಕರಣದ ಪ್ರಯತ್ನ. ಇತ್ತೀಚಿನ ಇಂತಹ ಪ್ರಯತ್ನಗಳೆಂದರೆ ರಾಜಸ್ತಾನದ ಪಠ್ಯ ಪುಸ್ತಕಗಳಲ್ಲಿ ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಹೆಸರನ್ನು ಕೈ ಬಿಟ್ಟಿರುವುದು, ಮಾಲೆಗಾಂವ್ ಭಯೋತ್ಪಾದನಾ ಕೃತ್ಯದಲ್ಲಿ ವಿಚಾರಣೆಯನ್ನು ಸಡಿಲಗೊಳಿಸುವ ಪ್ರಯತ್ನ ಒಂದು ವರ್ಷದ ಹಿಂದೆ ಬಯಲಾದ ಮೇಲೂ ಈಗ ಪ್ರಮುಖ ಆಪಾದಿತೆ ಸಾಧ್ವಿ ಪ್ರಜ್ಞಾ ಸಿಂಗ್ ಮತ್ತಿತರರನ್ನು ಭಯೋತ್ಪಾದನೆಯ ಆಪಾದನೆಯಿಂದ ಮುಕ್ತಗೊಳಿಸಿದ ರೀತಿ ಹಲವು ಪ್ರಶ್ನೆಗಳನ್ನೆತ್ತಿದೆ.




ಸಂಘ ಪರಿವಾರ ತನ್ನ ರಾಜಕೀಯ ಯಶಸ್ಸಿಗೆ ಮುಖ್ಯವಾಗಿ ಅನುಸರಿಸುವುದು ಕೋಮುವಾದಿ ಧ್ರುವೀಕರಣದ ತಂತ್ರವನ್ನೇ. ಆದರೆ ಮೋದಿಯವರ 'ಅಭಿವೃದ್ಧಿ' ಮಂತ್ರದಿಂದ ಪುಳಕಿತರಾಗಿರುವ ಮಂದಿ ಇದು 2014ರ 'ಮಹಾವಿಜಯ'ದ 'ನಂತರ ಬದಲಾಗಿದೆ ಎಂದು ನಂಬಿದ್ದರು. ಅದು ಶುದ್ಧ ಭೋಳೆತನ ಎಂದು ಈ ಎರಡು ವರ್ಷಗಳಲ್ಲಿ ಸಾಬೀತಾಗುತ್ತಿದೆ. ಇತ್ತೀಚಿನ ಅಸ್ಸಾಂ ಚುನಾವಣೆಗಳಲ್ಲೂ ಬಿಜೆಪಿಯ ಭಾರೀ ಗೆಲವಿಗೆ ಮೈತ್ರಿಗಳು ಮಾತ್ರವೇ ಕಾರಣವಲ್ಲ, ಹಲವು ವರ್ಷಗಳಿಂದ ಬಿಜೆಪಿ ಬಾಂಗ್ಲಾದೇಶಿ ಮುಸ್ಲಿಮರ ವಿರುದ್ಧ ನಡೆಸಿಕೊಂಡು ಬಂದಿರುವ ಪ್ರಚಾರದ ಕೊಡುಗೆ ಬಹಳ ಮಹತ್ವದ್ದಾಗಿದೆ.

ನಿಜ, ಈ ಎರಡು ವರ್ಷಗಳಲ್ಲಿ ಪ್ರತಿ ಎರಡು ದಿನಕ್ಕೆ ಒಂದರಂತೆ ಭಾಷಣಗಳನ್ನು ಮಾಡಿರುವ ಪ್ರಧಾನಿಗಳು ಈ ಯಾವ ಘಟನೆಯ ಬಗ್ಗೆಯೂ ಚುಟಿಪಿಟಿಕ್ಕೆಂದಿಲ್ಲ, ಗೋಹತ್ಯೆಯ ಕಾರಣ ಕೊಟ್ಟು ದಾದ್ರಿಯಲ್ಲಿ ಮಹಮ್ಮದ್ ಅಖ್ಲಾಕ್‌ನನ್ನು ನಡುಬೀದಿಗೆಳೆದು ಕೊಚ್ಚಿ ಹಾಕಿದಾಗಲೂ, ಇತ್ತೀಚೆಗೆ ಜಾನುವಾರು ಜಾತ್ರೆಗೆ ದನಗಳನ್ನು ಒಯ್ಯುತ್ತಿದ್ದ ಇಬ್ಬರನ್ನು ಬಡಿದು ಸಾರ್ವಜನಿಕವಾಗಿ ನೇಣಿಗೇರಿಸಿ ಸಾಯಿಸಿದಾಗಲೂ ದಿವ್ಯಮೌನ ತಳೆದಿರುವುದು ಏನನ್ನು ಸೂಚಿಸುತ್ತದೆ? ಮೋದಿಯವರ 'ಅಭಿವೃದ್ಧಿ' ಮಂತ್ರವನ್ನು ನಂಬಿದವರ ಬಳಿ ಇದಕ್ಕೆ ಉತ್ತರವಿಲ್ಲ.

ಗರಿಷ್ಟ ಭಾಷಣ-ಕನಿಷ್ಟ ಶಾಸನ

ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ



ಕೊಟ್ಟ ಭಾಷೆ ಮುರಿದು ರೈತರ ಜೀವನವನ್ನು ಜಟಿಲಗೊಳಿಸಿದ್ದೇ 'ಸಾಧನೆ'

ಲೋಕ ಸಭಾ ಚುನಾವಣಾ ಪ್ರಚಾರದಲ್ಲಿ "ಒಳ್ಳೆಯ ದಿನಗಳು ಬರಲಿವೆ"ಎಂದು ನೀಡಿದ್ದ ಭರವಸೆಯು ಮೋದಿ ಸರ್ಕಾರದ ಮೊದಲ ವರ್ಷದಲ್ಲೇ ರೈತರ ಪಾಲಿಗೆ ಹುಸಿಯಾಗಿತ್ತು. ಎರಡನೇ ವರ್ಷ ತುಂಬುವುದರೊಳಗೆ ಆ ಭರವಸೆ ಸಮಾಧಿಯಾಗಿದೆ. 300 ಜಿಲ್ಲೆಗಳಿಗೆ ಸೇರಿದ ಮೂರು ಲಕ್ಷ ಹಳ್ಳಿಗಳಲ್ಲಿರುವ 33 ಕೋಟಿ ಜನರಿಗೆ ಭೀಕರ ಬರಗಾಲ ಎದುರಾಗಿದೆ. ಬೆಳೆ ನಾಶದ ಜೊತೆಗೆ ನೀರಿಗೂ ಗತಿಇಲ್ಲದಂತಾಗಿದೆ. ಇಂತಹ ಪರಿಸ್ಥಿತಿಯನ್ನು ಎದುರಿಸಲು ಅಗತ್ಯವಾದ ತುರ್ತು ಕ್ರಮಗಳನ್ನು ಕೈಗೊಳ್ಳುವಲ್ಲಿ ಮೋದಿ ಸರ್ಕಾರ ವಿಫಲವಾಗಿದೆ. ಬಾಯಾರಿದ್ದ ಲಾಟೂರಿಗೆ ಕೇಂದ್ರವು ವಿಶೇಷ ರೈಲಿನಲ್ಲಿ ನೀರು ಸರಬರಾಜು ಮಾಡಿದ ಬಾಬ್ತು ರಾಜ್ಯ ಸರ್ಕಾರಕ್ಕೆ ನಾಲ್ಕು ಕೋಟಿ ರೂಗಳ ಬಿಲ್ ಕಳಿಸಿದೆ! ರೈತ ಮರಣಾವಸ್ಥೆಯಲ್ಲಿರುವ ಸಮಯದಲ್ಲಿ ಮೋದಿಯವರು ತಮ್ಮ ಪ್ರತಿಕೃತಿಯನ್ನು ಮೇಣದಲ್ಲಿ ಎರಕ ಹೊಯ್ಯುವವರೊಂದಿಗೆ ಕುಳಿತಿರುವುದು ಅವರು ರೈತರಿಗೆ ಮತ್ತು ಕೃಷಿಗೆ ತೋರುತ್ತಿರುವ ಅಸೂಕ್ಷ್ಮತೆಯ ಪ್ರತೀಕವಾಗಿದೆ.

ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ರೈತರ ಆತ್ಮ ಹತ್ಯೆಗಳನ್ನು ಕೊನೆಗೊಳಿಸುವುದಾಗಿ ಭಾಜಪ ಭರವಸೆಕೊಟ್ಟಿತ್ತು. ಅದು ಸರ್ಕಾರ ನಡೆಸಿದ ಎರಡು ವರ್ಷಗಳಲ್ಲಿ ಆತ್ಮ ಹತ್ಯೆಗಳು ಹೆಚ್ಚಿವೆ. ವಿಶ್ಲೇಷಕರು ಲೆಕ್ಕ ಹಾಕಿರುವಂತೆ, ಕಳೆದ ಎರಡು ದಶಕಗಳಲ್ಲಿ, ಪ್ರತಿ ದಿನ 42 ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈಗ ಅದು 52ಕ್ಕೆ ಏರಿದೆ. ಭಾಜಪದ ಆಡಳಿತವಿರುವ ಮಹಾರಾಷ್ಟ್ರದಲ್ಲಿ 2014ರಲ್ಲಿ 2568 ಮಂದಿ ಮತ್ತು 2015ರಲ್ಲಿ 3228 ಮಂದಿ ಆತ್ಮ ಹತ್ಯೆಮಾಡಿಕೊಂಡಿದ್ದಾರೆ. ಈ ಸಂಖ್ಯೆಗಳಲ್ಲಿ 1436 ಮಂದಿ ಕೂಲಿಕಾರರನ್ನು ಸೇರಿಸಿಲ್ಲ. 2015ರಲ್ಲಿ ಕರ್ನಾಟಕದಲ್ಲಿ 1336 ಮಂದಿ ರೈತರು ಆತ್ಮ ಹತ್ಯೆ ಮಾಡಿಕೊಂಡಿದ್ದಾರೆ.ಪಂಜಾಬ್, ಹರ್ಯಾಣ, ಆಂಧ್ರ ಪ್ರದೇಶ, ತೆಲಂಗಾಣ, ಛತ್ತೀಸ್‌ಘಢ, ಗುಜರಾತ್, ಪಶ್ಚಿಮ ಬಂಗಾಳ ಮತ್ತು ಇತರ ಕೆಲವು ರಾಜ್ಯಗಳಲ್ಲಿಯೂ ಈ ಪ್ರವೃತ್ತಿ ಹೆಚ್ಚುತ್ತಿದೆ. ಅಷ್ಟಾಗಿಯೂ, ಈ ಮಾನವ ದುರಂತ ನಡೆದೇ ಇಲ್ಲ ಎನ್ನುವ ರೀತಿಯಲ್ಲಿ ಭಾಜಪ ಸರ್ಕಾರ ವರ್ತಿಸುತ್ತಿದೆ.

ಸ್ವಾಮಿನಾಥನ್ ಆಯೋಗದ ಶಿಫಾರಿಸಿನಂತೆ ಬೆಳೆ ಉತ್ಪಾದಿಸಲು ರೈತರಿಗೆ ತಗಲುವ ವೆಚ್ಚಕ್ಕೆ ಶೇ.50 ಭಾಗ ಸೇರಿಸಿ ರೈತರಿಗೆ ಕೊಡಲಾಗುವುದು ಎಂದು ಭಾಜಪ ವಚನ ಕೊಟ್ಟಿತ್ತು. ಈಗ ಅದನ್ನುಕೊಡಲು ಸಾಧ್ಯವಾಗುವುದಿಲ್ಲ ಏಕೆಂದರೆ ಅದು ಮಾರುಕಟ್ಟೆಯನ್ನು ವಿಕೃತಗೊಳಿಸುತ್ತದೆ ಎಂಬುದಾಗಿ ಈ ವಚನ ಭ್ರಷ್ಟ ಸರ್ಕಾರವು ಸುಪ್ರೀಂಕೋರ್ಟ್ ಮುಂದೆ ಪ್ರಮಾಣ ಪತ್ರಸಲ್ಲಿಸಿದೆ. ಗಾಯದ ಮೇಲೆ ಬರೆ ಹಾಕುವ ರೀತಿಯಲ್ಲಿ, ಸರ್ಕಾರವು ತಾನು ನಿಗದಿಪಡಿಸಿರುವ ಕನಿಷ್ಠ ಬೆಂಬಲ ಬೆಲೆಗಿಂತ ಹೆಚ್ಚಿನ ಮೊತ್ತವನ್ನು ರಾಜ್ಯ ಸರ್ಕಾರಗಳು ಯಾವುದೇ ರೂಪದಲ್ಲಿ ರೈತರಿಗೆ ಕೊಟ್ಟರೂ ಅದು ಮಾರುಕಟ್ಟೆಯನ್ನು ವಿಕೃತಗೊಳಿಸುತ್ತದೆ ಎನ್ನುತ್ತಿದೆ ಮತ್ತು ಅಂತಹ ರಾಜ್ಯಗಳಿಂದ ಧಾನ್ಯಖರೀದಿ ಮಾಡುವುದಿಲ್ಲವೆಂಬ ಆಜ್ಞೆ ಹೊರಡಿಸಿದೆ. ಧಾನ್ಯಖರೀದಿಯ ಬೆಲೆಗಳನ್ನು ಉತ್ಪಾದನಾ ವೆಚ್ಚಕ್ಕಿಂತಲೂ ಕೆಳ ಮಟ್ಟದಲ್ಲಿ ನಿಗದಿಪಡಿಸಿದೆ. ಆ ಬೆಲೆಗಳಲ್ಲಿಯೂ ಧಾನ್ಯಖರೀದಿ ಮಾಡುತ್ತಿಲ್ಲ. ವಿಶ್ವ ವ್ಯಾಪಾರ ಸಂಘಟನೆಯೊಂದಿಗಿನ ಮಾತುಕತೆಗಳಲ್ಲಿ ಬಲಿಷ್ಠ ದೇಶಗಳ ಒತ್ತಡಕ್ಕೆ ಮಣಿದು ನಮ್ಮ ದೇಶದ ಹಿತಬಲಿ ಕೊಟ್ಟ ಪರಿಣಾಮವಾಗಿ ಈ ವಿದ್ಯಮಾನಗಳು ಜರುಗುತ್ತಿವೆ. ರೈತರು ಮತ್ತು ಹಸಿದವರು ಬಲಿ ಪಶುಗಳಾಗಿದ್ದಾರೆ.

ರೈತರು ಮತ್ತು ಬಳಕೆದಾರರು ಇಬ್ಬರಿಗೂ ಮಧ್ಯವರ್ತಿಗಳು ಮತ್ತು ದೊಡ್ಡ ಕಂಪೆನಿಗಳು ಹೇಗೆ ಮೋಸಮಾಡುತ್ತವೆ ಎಂಬುದನ್ನು ಬೇಳೆಕಾಳುಗಳ ಬೆಲೆಗಳು ಸ್ವಾರಸ್ಯಕರವಾದ ವಿವರಣೆ ಒದಗಿಸುತ್ತವೆ. ಬೇಳೆಯ ವರ್ತಕರಿಗೆ ಅನುಸಾರವಾಗಿ ರೈತರಿಗೆಕೆ.ಜಿ.ಗೆ ಹೆಚ್ಚೆಂದರೆ 30–40ರೂ ಸಿಗುತ್ತದೆ.ಬೇಳೆಯ ಬೆಲೆ 200–220ರೂ ಮಟ್ಟದಲ್ಲಿದ್ದ ಎರಡು ತಿಂಗಳಲ್ಲಿ ಕನಿಷ್ಠ ನಲವತ್ತು ಲಕ್ಷ ಟನ್ ಬೇಳೆ ಬಳಕೆಯಾಗಿದೆ. ಕೆಜಿಗೆ ಬರಿ ನೂರು ರೂಗಳ ಲಾಭದಲೆಕ್ಕ ಹಾಕಿದರೂ ಅದಾನಿ, ಅಂಬಾನಿ, ರಿಲೈಯನ್ಸ್, ಟಾಟಾ, ಬಿರ್ಲಾ ಮತ್ತು ಐಟಿಸಿಯಂತಹ ದೊಡ್ಡ ಧಾನ್ಯವ್ಯಾಪಾರಗಾರರು ಕಡಿಮೆ ಎಂದರೂ ನಲವತ್ತು ಸಾವಿರಕೋಟಿ ರೂಗಳ ಲಾಭ ಮಾಡಿಕೊಂಡಿದ್ದಾರೆ.ಭಾಜಪ ಸರ್ಕಾರದ ಕೃಪಾಕಟಾಕ್ಷದಿಂದಾಗಿ ಇವರಿಗೆ ಈ ಮಟ್ಟದ ಲೂಟಿ ಸಾಧ್ಯವಾಗಿದೆ. ಹಿಂದಿನ ವರ್ಷ ಬೇಳೆಯ ಫಸಲು ಕಡಿಮೆಯಾಗಿತ್ತು.ಅದರ ಅರಿವಿದ್ದೂ ಸರ್ಕಾರ ಬೇಳೆ ಕಾಳುಗಳನ್ನು ಸಕಾಲದಲ್ಲಿ ಆಮದುಮಾಡಿಕೊಳ್ಳಲಿಲ್ಲ. ಹಾಗಾಗಿ, ವ್ಯಾಪಾರಿಗಳು ಹೇರಳವಾಗಿ ಲಾಭ ಮಾಡಿಕೊಂಡರು.

ಸರ್ಕಾರವು ಅನುಸರಿಸುತ್ತಿರುವ ನೀತಿಗಳಿಂದಾಗಿ, ರೈತನ ಕುಟುಂಬವು ಸ್ವಂತಕ್ಕೆ ಬಳಸಿಕೊಂಡ ಧಾನ್ಯಗಳ ಮೌಲ್ಯವನ್ನು ಸೇರಿಸಿಕೊಂಡರೂ ಒಬ್ಬ ರೈತನ ಕೃಷಿ ಮೂಲದ ಸರಾಸರಿ ವರಮಾನ, ವಾರ್ಷಿಕ 20,000 ರೂ ಮೀರುವುದಿಲ್ಲ. ಅಂದರೆ, ರೈತನ ಮಾಸಿಕ ಆದಾಯ 1,666 ರೂ ಮಾತ್ರ, ಆಹಾರ ಧಾನ್ಯಗಳ ಮತ್ತು ಅಗತ್ಯ ವಸ್ತುಗಳ ಬೆಲೆಗಳು ಏರುತ್ತಿರುವಾಗ, ಆರೋಗ್ಯ ಮತ್ತು ಶಿಕ್ಷಣದ ವೆಚ್ಚಗಳು ದುಬಾರಿಯಾಗಿರುವಾಗ ರೈತ ಗಳಿಸುವ ಮಾಸಿಕ ಆದಾಯ 1,666 ಎಂಬುದನ್ನು ಗಮನಿಸಬೇಕು. 2022ರ ವೇಳೆಗೆ ರೈತನಆದಾಯವನ್ನು ದ್ವಿಗುಣಗೊಳಿಸುವ ಮಾತಾಡುತ್ತಿರುವ ಸರ್ಕಾರವು ರೈತನ ಉತ್ಪಾದಕತೆ ಮತ್ತು ಲಾಭದಾಯಕತೆ ಹೆಚ್ಚಿಸುವಂತಹ ಯಾವ ಕ್ರಮಗಳನ್ನೂ ಕೈಗೊಂಡಿಲ್ಲ. ಈಗಿನ ನಿಕೃಷ್ಟ ವರವಮಾನವನ್ನು ದ್ವಿಗುಣಗೊಳಿಸಬೇಕೆಂದರೂ ಕೃಷಿಯ ಬೆಳವಣಿಗೆಯ ದರವು ಶೇ.15 ಕ್ಕಿಂತ ಹೆಚ್ಚಿರಬೇಕೆಂದು ತಜ್ಞರು ಹೇಳುತ್ತಾರೆ.ಆದರೆ, 2013–14ರಲ್ಲಿ ಶೇ.4.2ರಷ್ಟಿದ್ದ ಕೃಷಿಯ ಬೆಳವಣಿಗೆಯ ದರವು ಭಾಜಪ ಸರ್ಕಾರ ಅಧಿಕಾರಕ್ಕೆ ಬಂದ ನಂತರ 2014–15ರಲ್ಲಿ ಶೇ.(–) 0.2 ಮತ್ತು 2015–16ರಲ್ಲಿ ಶೇ. (+)1.1ರಮಟ್ಟಕ್ಕೆ ಇಳಿದಿದೆ.

ಬೇಸಾಯಕ್ಕೆ ಬಳಸುವ ಸಾಮಗ್ರಿಗಳ ಬೆಲೆ ಏರುತ್ತಿದೆ. ಬೆಳೆದ ಫಸಲಿಗೆ ಸಿಗುವ ಬೆಲೆ ಲಾಭದಾಯಕವಾಗಿಲ್ಲ. ಹಾಗಾಗಿ, ರೈತನ ವರಮಾನ ಇಳಿಯುತ್ತಿದೆ ಮತ್ತು ಸಾಲದ ಹೊರೆ ಹೆಚ್ಚುತ್ತಿದೆ.ಇತ್ತೀಚಿನ NSSO ವರದಿಯ ಪ್ರಕಾರ,ಶೇ.31 ಗ್ರಾಮೀಣ ಕುಟುಂಬಗಳು ಸಾಲದಲ್ಲಿವೆ. ಉಳುಮೆ ಮಾಡುವವರ ಪೈಕಿ ಶೇ.52 ಕುಟುಂಬಗಳು ಸಾಲದಲ್ಲಿವೆ. ಆಂಧ್ರ ಪ್ರದೇಶದಲ್ಲಿ ಶೇ.93 ಕುಟುಂಬಗಳು ಸಾಲದಲ್ಲಿ ಮುಳುಗಿವೆ. ಸುಲಭ ಬಡ್ಡಿದರದಲ್ಲಿ ಸಾಲ ಒದಗಿಸುವೆವು ಎಂಬ ತನ್ನ ಚುನಾವಣಾ ಭರವಸೆಯನ್ನು ಭಾಜಪ ಸರ್ಕಾರ ಈಡೇರಿಸಿಲ್ಲ. ಪಂಜಾಬಿನಲ್ಲಿ ಕೈಗೊಂಡ ಒಂದು ಅಧ್ಯಯನದ ಪ್ರಕಾರ ರೈತ ಕುಟುಂಬದ ಸರಾಸರಿ ಸಾಲ 5,52,064 ರೂಗಳಷ್ಟಿದೆ. ರಾಜ್ಯದ ರೈತರ ಒಟ್ಟು ಸಾಲ 69,355 ಕೋಟಿ ರೂಗಳಷ್ಟಿದೆ. ಅದಾನಿ ಸಮೂಹ ಕಂಪೆನಿಗಳ ಬ್ಯಾಂಕ್ ಸಾಲ 72,000 ಕೋಟಿರೂ ದಾಟಿದೆ.ದೊಡ್ಡ ಕಂಪೆನಿಗಳು ಸಾರ್ವಜನಿಕ ವಲಯದ ಬ್ಯಾಂಕ್‌ಗಳಿಂದ ಐದು ಲಕ್ಷಕೋಟಿ ರೂಗಳಿಗೂ ಅಧಿಕ ಸಾಲ ಪಡೆದಿವೆ. ಅದರಲ್ಲಿ ಹೆಚ್ಚಿನ ಪಾಲು ವಸೂಲಾಗದ ಸಾಲಗಳಾಗಿವೆ. ಅದಾನಿ, ಅಂಬಾನಿ ಮುಂತಾದ ಕಂಪೆನಿಗಳು ಸರ್ಕಾರದಿಂದ ತೆರಿಗೆ ರಿಯಾಯ್ತಿ ಪಡೆದ ನಂತರವೂ ಸಾಲ ತೀರಿಸುತ್ತಿಲ್ಲ. ಇದೊಂದು ಕಾರ್ಪೊರೇಟ್‌ಗಳ ಸರ್ಕಾರ.

ವಾಣಿಜ್ಯ ಬೆಳೆಗಳ ಬೆಲೆಗಳು ನೆಲ ಕಚ್ಚುತ್ತಿವೆ. ಆದರೂ, ಬೆಲೆಗಳನ್ನು ಸ್ಥಿರಗೊಳಿಸುವುದಕ್ಕಾಗಲಿ ಅಥವಾ ರೈತರರಕ್ಷಣೆಗಾಗಲಿ ಸರ್ಕಾರ ಮುಂದಾಗುತ್ತಿಲ್ಲ. ಬದಲಿಗೆ ಅದು ಮುಕ್ತ ವ್ಯಾಪಾರ ಒಪ್ಪಂದಗಳಿಗೆ ಮುಂದಾಗುತ್ತಿದೆ. ಇದರಿಂದಾಗಿ ರೈತರಿಗೆ ಭಾರಿ ಹೊಡೆತ ಬಿದ್ದಿದೆ.ಉದಾ: ರಬ್ಬರ್ ಬೆಳೆಯುವ ರೈತರು ಸಂಕಷ್ಟಕ್ಕೊಳಗಾಗಿದ್ದಾರೆ. ರಬ್ಬರ್ ಬೆಲೆ 35 ವರ್ಷಗಳ ಹಿಂದೆ ಇದ್ದದ್ದಕ್ಕಿಂತಲೂ ಈಗ ಕಡಿಮೆ ಯಾಗಿದೆ. ಒಂದು ಕೆ.ಜಿ.ಗೆ 2011ರಲ್ಲಿ 239 ರೂ ಇದ್ದ ಬೆಲೆ 2016ರಲ್ಲಿ 94 ರೂಗೆ ಇಳಿದಿದೆ. ಇದರಿಂದಾಗಿ, ಕಳೆದ ಎರಡು ವರ್ಷಗಳಲ್ಲಿ ರೈತರಿಗೆ 27,409 ಕೋಟಿ ರೂ ನಷ್ಟವಾಗಿದೆ. ಇದೇ ಅವಧಿಯಲ್ಲಿ ಟೈರ್ ತಯಾರಿಸುವ MRFಕಂಪೆನಿಯ ಲಾಭ ಶೇ.74 ಹೆಚ್ಚಾಗಿದೆ. ರೇಷ್ಮೆ, ಸಾಂಬಾರ ಮತ್ತು ಇತರ ವಾಣಿಜ್ಯ ಬೆಳೆಗಳ ಕತೆಯೂ ಸುಮಾರು ಇದೇ ರೀತಿಯಲ್ಲಿದೆ.

ಕಾರ್ಪೊರೇಟ್‌ಗಳಿಗೆ ಮತ್ತು ರಿಯಲ್‌ಎಸ್ಟೇಟ್ ಧೂಪರುಗಳಿಗೆ ಲಾಭ ಮಾಡಿಕೊಡುವ ಉದ್ದೇಶದಿಂದ ಬಲವಂತವಾಗಿ ಭೂ ಸ್ವಾಧೀನ ಮಾಡಿಕೊಳ್ಳುವ ಕಠೋರ ಸುಗ್ರೀವಾಜ್ಞೆಯನ್ನು ಸರ್ಕಾರವು ಮೂರು ಬಾರಿ ಹೊರಡಿಸಿತು.ಆಹಾರ ಭದ್ರತೆ, ಜಮೀನು ಮಾಲೀಕರ ಸಮ್ಮತಿ ಮತ್ತು ಸಾಮಾಜಿಕ ಪರಿಣಾಮಗಳಿಗೆ ಯಾವ ಬೆಲೆಯೂ ಇಲ್ಲ ಎಂಬಂತೆ ಭೂ ಸ್ವಾಧೀನಮಾಡಿಕೊಳ್ಳಲು ಬಯಸಿತ್ತು. ಉದಾಹರಣೆಗೆ, ಡೆಲ್ಲಿ–ಮುಂಬೈ ಕೈಗಾರಿಕಾ ಕಾರಿಡಾರ್ ಸ್ಥಾಪಿಸಲು ರಾಷ್ಟ್ರೀಯ ಹೆದ್ದಾರಿಯ ಇಕ್ಕೆಲಗಳಲ್ಲೂ ಒಂದು ಕಿಲೋ ಮೀಟರ್ ಅಗಲದ, 4,36,486 ಚದರ ಕಿಲೋ ಮೀಟರ್ ವಿಸ್ತೀರ್ಣದ (ಅಂದರೆ, ದೇಶದ ಭೂ ಪ್ರದೇಶದ ಶೇ.13.8ರಷ್ಟು) ಭೂಮಿಯನ್ನು ಸ್ವಾಧೀನಪಡಿಕೊಳ್ಳಲು ಹೊರಟಿತ್ತು. ಸ್ಮಾರ್ಟ್ ಸಿಟಿಗಳು, ಕೈಗಾರಿಕಾ ಪ್ರದೇಶಗಳು ಮತ್ತು ಹೂಡಿಕೆಯ ಪ್ರದೇಶಗಳ ಹೆಸರಿನಲ್ಲಿ ದೇಶದ ಉದ್ದಗಲಕ್ಕೂ ಇರುವ ಒಂದಕ್ಕಿಂತ ಹೆಚ್ಚಿನ ಬೆಳೆ ತೆಗೆಯುವ ಭೂಮಿಯನ್ನೂ ಸ್ವಾಧೀನಪಡಿಸಿಕೊಳ್ಳಲು ಬಯಸಿತ್ತು. ಒಂದು ಬೃಹತ್ ಪ್ರಮಾಣದ ಐಕ್ಯ ಹೋರಾಟಕ್ಕೆ ಮಣಿದು ಸುಗ್ರೀವಾಜ್ಞೆಯನ್ನು ಹಿಂಪಡೆದಿದ್ದ ಸರ್ಕಾರವು ಈಗ ರಾಜ್ಯಗಳ ಮೂಲಕ ಅಂತಹ ಕೆಲಸಮಾಡಿಸಲು ಪ್ರಯತ್ನಿಸುತ್ತಿದೆ.

ಕಾರ್ಮಿಕ ಸುಧಾರಣೆಗಳ ಹೆಸರಿನಲ್ಲಿ ಭಾಜಪ ಸರ್ಕಾರವು ಕಾರ್ಮಿಕರ ಮೇಲೆ ತನ್ನ ಮೊದಲ ದಾಳಿ ಆರಂಭಿಸಿತು. ನಂತರ ಅದರ ಕೆಂಗಣ್ಣು ಉದ್ಯೋಗ ಖಾತ್ರಿ ಯೋಜನೆಯ(MGNREGA)ಮೇಲೆ ಬಿತ್ತು. ವಾಸ್ತವವಾಗಿ, ಈ ಯೋಜನೆಗೆ 65,000ಕೋಟಿ ರೂಗಳನ್ನು ನಿಗದಿಪಡಿಸುವ ಅವಶ್ಯಕತೆ ಇದ್ದರೂ ಸರ್ಕಾರ ಈ ವರ್ಷದ ಬಜೆಟ್‌ನಲ್ಲಿ ಕೇವಲ 38,500 ಕೋಟಿ ರೂಗಳನ್ನು ನಿಗದಿಪಡಿಸುವ ಮೂಲಕ ಗ್ರಾಮೀಣ ಬಡಜನತೆಯ ಮೇಲೆ ಯುದ್ಧ ಸಾರಿದೆ. ಕಾನೂನಿನಲ್ಲಿ 100ರಿಂದ 200 ದಿನಗಳ ಉದ್ಯೋಗ ಒದಗಿಸುವ ಅವಕಾಶವಿದ್ದರೂ ಅದನ್ನು ಸರಾಸರಿ 36 ದಿಗಳಿಗೆ ಇಳಿಯುವಂತೆ ನೋಡಿಕೊಂಡಿರುವುದು ಗ್ರಾಮೀಣ ಬಡಜನತೆಯ ಮೇಲೆ ಸರ್ಕಾರಕ್ಕಿರುವ ತಿರಸ್ಕಾರವನ್ನು ಸೂಚಿಸುತ್ತದೆ.

ಯಾವ ಸಾಮಾಜಿಕ ಭದ್ರತೆಯೂ ಇಲ್ಲದ ರೈತಾಪಿ ಜನರತ್ತ ಮತ್ತು ಗ್ರಾಮೀಣ ಕೃಷಿ ಕಾರ್ಮಿಕರತ್ತ ಸರ್ಕಾರ ಸ್ವಲ್ಪವೂ ಗಮನ ಹರಿಸಿಲ್ಲ. ಪ್ರಕೃತಿ ವಿಕೋಪಗಳಿಂದ ಉಂಟಾಗುವ ಬೆಳೆ ನಷ್ಟವನ್ನು ತುಂಬಿಕೊಡುವ ವಿಮಾ ಯೋಜನೆಯು ರೈತರಿಗೆ ಅನುಕೂಲವಾಗುವುದರ ಬದಲು ಬಹುರಾಷ್ಟ್ರೀಯ ವಿಮಾ ಕಂಪೆನಿಗಳಿಗೆ ಲಾಭ ಹೆಚ್ಚಿಸಿಕೊಳ್ಳುವ ಸಾಧನವಾಗಿದೆ.

ಕೋಟ್ಯಾಂತರ ಮಂದಿ ಉದ್ಯೋಗ ಕಳೆದುಕೊಳ್ಳುತ್ತಾರೆ ಎನ್ನುವ ಕಾರಣದ ಮೇಲೆ ಚಿಲ್ಲರೆ ವ್ಯಾಪಾರ, ಕೃಷಿ ಉತ್ಪನ್ನಗಳ ಸಂಸ್ಕರಣೆ, ಪ್ಲಾಂಟೇಷನ್ ಮುಂತಾದ ಚಟುವಟಿಕೆಗಳಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ಚುನಾವಣೆಗಿಂತ ಮುಂಚೆ ವಿರೋಧಿಸಿದ್ದ ಭಾಜಪವು ಅಧಿಕಾರ ಹಿಡಿದ ನಂತರ ತನ್ನ ಹಿಂದಿನ ನಿಲುವುಗಳಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ಭಾಜಪ ಸರ್ಕಾರದ ರೈತ ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ವಿಶಾಲ ತಳಹದಿಯ ಐಕ್ಯ ಹೋರಾಟಗಳು ರೂಪುಗೊಳ್ಳುತ್ತಿವೆ.

'ತಿನ್ನಲು ಬಿಡಲಾರೆ' !–ಆಗಲೇ ಬಟ್ಟ ಬಯಲಾಗಿದೆ

ಪುಟ 9 ರಿಂದ

ಲೋಕಪಾಲರ ಮಂಜೂರಾತಿಯ ನಂತರವೇ ಯಾವುದೇ ಸರಕಾರೀ ನೌಕರನನ್ನು ವಿಚಾರಣೆಗೆ ಒಳಪಡಿಸಲು ಸಾಧ್ಯ ಎಂಬ ತಿದ್ದುಪಡಿಯನ್ನು ತಂದಿದ್ದು, ಲೋಕಪಾಲರೇ ಇಲ್ಲವಾದ್ದರಿಂದ ಈ ಕಾನೂನಿಗೆ ಕೂಡ ತಡೆಯಾಗಿದೆ.

* ಶಿಳ್ಳೆ ಊದುವವರ ರಕ್ಷಣೆಯ ಕಾನೂನು– ಒಂದು ಸಂಸ್ಥೆಯ ಒಳಗಿನವರೇ ಭ್ರಷ್ಟಾಚಾರದ ಸುಳಿವು ನೀಡಿದಾಗ ಅವರನ್ನು ಬಲಿ ಹಾಕದಂತೆ ರಕ್ಷಣೆ ಕೊಡುವ ಈ ಕಾನೂನಿಗೆ ತಿದ್ದುಪಡಿ ತಂದು ಭ್ರಷ್ಟಾಚಾರದ ಸುಳಿವು ನೀಡುವುದನ್ನು ರಾಷ್ಟ್ರೀಯ ಹಿತಾಸಕ್ತಿ ಇತ್ಯಾದಿ ಹೆಸರುಗಳಲ್ಲಿ ನಿರುತ್ತೇಜಿತಗೊಳಿಸಲಾಗಿದೆ.

ಕಪ್ಪು ಹಣ

* ವಿದೇಶಗಳಲ್ಲಿರುವ ಕಪ್ಪು ಹಣವನ್ನು 100ದಿನಗಳ ಒಳಗೆ ತರುವ, ಪ್ರತಿಯೊಬ್ಬ ಬಡವನ ಖಾತೆಗೆ 15ಲಕ್ಷ ರೂ. ಸೇರಿಸುವ ' ಭರವಸೆ ಈಡೇರಿಕೆಗೆ ಏನೂ ಕ್ರಮ ಕೈಗೊಂಡಿಲ್ಲ ಮಾತ್ರವಲ್ಲ, ದೇಶಕ್ಕೆ ವಂಚನೆ ಮಾಡಿ ವಿದೇಶಗಳಲ್ಲಿ ಹಣ ಬಚ್ಚಿಟ್ಟವರ ಹೆಸರುಗಳನ್ನು ಪ್ರಕಟಿಸಲು ಕೂಡ ಹಿಂದಿನ ಸರಕಾರಗಳಂತೆ ಈ ಸರಕಾರವೂ ನಿರಾಕರಿಸುತ್ತಿದೆ.
* ಕಪ್ಪು ಹಣ ಕುರಿತು ಸುಪ್ರಿಂ ಕೋರ್ಟ್ ತಾನಾಗಿಯೇ ವಿಶೇಷ ತನಿಖಾ ತಂಡ ನೇಮಿಸಬೇಕಾಗಿ ಬಂದಿದೆ.
* ಪನಾಮ ಪೇಪರ್‌ಗಳು ಎಂದು ಇತ್ತೀಚೆಗೆ ಬಯಲಿಗೆ ಬಂದ ಕಪ್ಪು ಹಣ ಇರುವವರ ಪಟ್ಟಿಯಲ್ಲಿರುವ ನೂರಾರು ಮಂದಿಯ ಮೇಲೂ ಕ್ರಮ ಕೈಗೊಳ್ಳಲು ಈ ಸರಕಾರ ಮುಂದಾಗಿಲ್ಲ.
* ಕಪ್ಪು ಹಣವನ್ನು ತಿಳಿಸಿದರೆ ಅಂತವರಿಗೆ ಶಿಕ್ಷೆ ಮಾಫಿ ಮಾಡುವ ಯೋಜನೆಯಲ್ಲಿ ಸಂಗ್ರಹವಾದದ್ದು ಒಟ್ಟು 1ಲಕ್ಷಕೋಟಿ ರೂ. ಎಂದು ಅಂದಾಜು ಮಾಡಿರುವ ಕಪ್ಪು ಹಣದಲ್ಲಿ ಕೇವಲ 3770 ಕೋಟಿ ರೂ.ಗಳು.

ತಿನ್ನಲು ಬಿಡಲ್ಪಟ್ಟ ಆಳುವ ಪಕ್ಷದ ಮುಖಂಡರು

* ಮೇ 1, 2015ರಂದು ಸಂಸತ್ತಿನಲ್ಲಿ ಮಂಡಿಸಿದ ಸಿಎಜಿ ವರದಿ ಸರಕಾರದ ಮಾರ್ಗದರ್ಶಕ ಸೂತ್ರಗಳನ್ನು ಉಲ್ಲಂಘಿಸಿದವರಲ್ಲಿ ನಿತಿನ್ ಗಡ್ಕರಿಯವರ ಹೆಸರನ್ನು ಪ್ರಸ್ತಾಪಿಸಿರುವುದರೊಂದಿಗೆ ಅವರ ಮೇಲಿನ ಗಂಭೀರ ಆಪಾದನೆಗಳು ಮುಂಚೂಣಿಗೆ ಬಂದಿವೆ.
* ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಚೌಹಾಣ್‌ರವರನ್ನು ಒಳಗೊಂಡ ವ್ಯಾಪಕವಾದ 'ವ್ಯಾಪಂ' ಹಗರಣ ಬಯಲಿಗೆ ಬಂದಿದೆ.
* ಲಲಿತ್ ಮೋದಿ ಹಗರಣದಲ್ಲಿ ಕೇಂದ್ರ ಮಂತ್ರಿ ಸುಷ್ಮಾ ಸ್ವರಾಜ್ ಮತ್ತು ಮಧ್ಯಪ್ರದೇಶದ ಮುಖ್ಯಮಂತ್ರಿ ವಸುಂಧರಾ ರಾಜೇ ಸಿಂಧ್ಯಾ ಹೆಸರು ಪ್ರಸ್ತಾಪಗೊಂಡಿದೆ.
* ಮಹಾರಾಷ್ಟ್ರದ ಮಂತ್ರಿ ಮಂಡಲದ ಸದಸ್ಯೆ ಪಂಕಜಾ ಮುಂಡೆಯವರ ಮೇಲೆ ಐಸಿಡಿಎಸ್‌ನ ಬಡ ಮಕ್ಕಳ ಆಹಾರದಲ್ಲೂ ಹಣ ಮಾಡಿಕೊಂಡ ಆಪಾದನೆ ಬಂದಿದೆ.
* ಮಹಾರಾಷ್ಟ್ರದ ಇನ್ನೊಬ್ಬ ಮಂತ್ರಿ ಏಕನಾಥ ಖಡ್ಸೆಯವರ ಮೇಲೆ ಜಮೀನು ವ್ಯವಹಾರಗಳಲ್ಲಿ ಗೋಲ್‌ಮಾಲ್ ಮಾಡಿದ ಆಪಾದನೆ ಬಂದಿದೆ.
* ಕರ್ನಾಟಕದಲ್ಲಿ ಯೆಡ್ಯೂರಪ್ಪನವರನ್ನೇ ಬಿಜೆಪಿ ರಾಜ್ಯ ಅಧ್ಯಕ್ಷರಾಗಿ ಮಾಡಿರುವುದು ಸಾರ್ವಜನಿಕ ಜೀವನದಲ್ಲಿ ಋಜುತ್ವದ ಬಗ್ಗೆ ಈ ಸರಕಾರಕ್ಕೆ ಮತ್ತು ಅವರ ಗುರುಗಳಿಗೆ ಎಳ್ಳಷ್ಟೂ ಗೌರವ ಇಲ್ಲ ಎಂಬುದನ್ನು ಸಾಬೀತು ಪಡಿಸಿದೆ.

ತಿಥಿ : ಹಲವು ಆಯಾಮಗಳು ಪದರಗಳು

– ಜಿ.ಎನ್. ನಾಗರಾಜ್



"ತಿಥಿ" ಕನ್ನಡ ಚಲನಚಿತ್ರ ರಂಗ ಮಾತ್ರವಲ್ಲ ಭಾರತದ ಚಲನಚಿತ್ರ ರಂಗದಲ್ಲಿಯೇ ಹೊಸ ಹಾದಿ ತೆರೆದ ವಿಶಿಷ್ಟ ಕೊಡುಗೆ. ಅನೇಕ ಪ್ರಸಿದ್ಧ ನಿರ್ದೇಶಕರಿಂದ, ತಂತ್ರಜ್ಞರಿಂದ ಬಹಳ ಮೆಚ್ಚುಗೆ ಪಡೆದ ಈ ಚಿತ್ರದ ಬಗ್ಗೆ ಭಿನ್ನ, ಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿವೆ. ಈ ಚಿತ್ರವನ್ನು ಹಲವು ಆಯಾಮಗಳಿಂದ ಅವಲೋಕಿಸಬಹುದು.

ಒಂದು ಇಂದಿನ ವಾಣಿಜ್ಯ ಚಲನಚಿತ್ರ ರಂಗದ ಬರಡು ಸ್ಥಿತಿಯ ಕೋನ. ಎಲ್ಲ ಮಸಾಲೆಯ ಸೂತ್ರಗಳು, ಹೀರೋ ಸಂಸ್ಕೃತಿ, ಭ್ರಮಾಲೋಕದ ಮೋಸದಿಂದ ನಮ್ಮನ್ನು ಹೊರ ಸೆಳೆಯುವ. 'ಅವನಲ್ಲ, ಅವಳು', 'ಕಿರಗೂರಿನ ಗಯ್ಯಾಳಿಗಳು' ರೀತಿಯ ಇತ್ತೀಚಿನ ಕೆಲ ಚಿತ್ರಗಳ ದಾರಿಯಲ್ಲಿ ಮತ್ತೊಂದು ಮೈಲಿಗಲ್ಲು ಎಂದು.

ಎರಡು, ಭಾರತದ ಚಿತ್ರರಂಗದ ಇತಿಹಾಸಕ್ಕೊಂದು ಅಪೂರ್ವ ಕೊಡುಗೆಯಾದ ಚೋಮನದುಡಿ, ಕಾಡು ಮೊದಲಾದ ಹೊಸ ಅಲೆಯ ಪರಂಪರೆಯ 21 ನೇ ಶತಮಾನದ ಅವತರಣಿಕೆಯಾಗಿ. ಆ ಪರಂಪರೆಯ ಅನುಕರಣವಾಗದೆ ಅದನ್ನು ಬೆಳೆಸುವ ಮನಸ್ಸಿನ ಸೃಷ್ಟಿಯಾಗಿ. ಹೊಸ ಬಗೆಯ ಪ್ರೇಕ್ಷಕರನ್ನು ಸೃಷ್ಟಿಸುವ, ಆ ಮೂಲಕ ಇಂತಹ ಅನೇಕ ಚಿತ್ರ ನಿರ್ಮಾಣಕ್ಕೆ ಉತ್ತೇಜಕವಾಗಿ.

ಮೂರನೆಯದು ಕಥಾ ವಸ್ತುವಿನ ದೃಷ್ಟಿಯಿಂದ. ಗ್ರಾಮೀಣ ಭಾಗದ ಜೀವನದ ಅತ್ಯಂತ ಸಹಜ, ಸರಳ ಚಿತ್ರಣವೊಂದು ಹೊಸ ಅಲೆಯ ಚಿತ್ರಗಳಂತೆ ಬೋರು ಹೊಡೆಸದೆ ನೋಡಿಸಿಕೊಳ್ಳುವ ಸಾಮರ್ಥ್ಯ ಪಡೆದಿದೆ ಎನ್ನುವುದೇ ಒಂದು ವಿಶೇಷ. ಜೊತೆಗೆ ಇಂದಿನ ಹಳ್ಳಿಗಳ ಜೀವನದ ಕೆಲವು ಮುಖಗಳನ್ನು ನಮ್ಮ ಮುಂದೆ ತೆರೆದಿಡುತ್ತದೆ. ಕಾಮ, ಪ್ರೇಮ, ನೈತಿಕತೆ ಕೌಟುಂಬಿಕ ಸಂಬಂಧಗಳು, ಸರಳತೆ, ಆಪ್ತತೆಯನ್ನು ಕಳೆದುಕೊಂಡು ಪಡೆಯುತ್ತಿರುವ ನಿರ್ಲಿಪ್ತತೆ, ಬೇಜವಾಬ್ದಾರಿತನ, ಹೆಣ್ಣು ಜೀವನದ ಸಂಕೀರ್ಣ ಸ್ಥಿತಿ ಮೊದಲಾದವುಗಳ ಜೊತೆಗೆ ಭೂಮಿ ರಿಯಲ್ ಎಸ್ಟೇಟ್ ಆಗುತ್ತಿರುವ ಪ್ರಕ್ರಿಯೆ, ಮಾರಾಟ, ಭೂ ದಾಖಲೆಗಳ ಸಮಸ್ಯೆ, ಕೆಳಹಂತದ ಅಧಿಕಾರಶಾಹಿಯ ಭ್ರಷ್ಟಾಚಾರ, ಬಡ್ಡಿ ಹೀಗೆ ಹಲವು ಪದರುಗಳನ್ನು ನೋಡಬಹುದು. ಈ ಚಿತ್ರದ ಸಹಜತೆಯೇ ಇದರ ಸಾಮರ್ಥ್ಯವಾಗಿರುವಂತೆ ಅದರ ದೌರ್ಬಲ್ಯವೂ ಹೌದು. ಹಳ್ಳಿಗಳ ಬದುಕಿನಿಂದ ದೂರವಾದ ನಗರವಾಸಿಗಳಿಗೆ, ವಿದೇಶೀಯರಿಗೆ ನಮ್ಮ ಹಳ್ಳಿಗಳ ಜೀವನದ ಕೆಲ ಮುಖಗಳನ್ನು ತೆರೆದು ತೋರುವಂತೆ ಹಳ್ಳಿಗಳಲ್ಲಿಯೇ ಬೆಳೆದವರಿಗೆ ಇದರಲ್ಲಿ ಹೊಸದೇನಿದೆ ಎನ್ನಿಸದಿರಲಾರದು.

ಚಿತ್ರಕಥೆಯ ನೇಯ್ಗೆ ಸರಳವಾಗಿಯೇ ಕಲಾತ್ಮಕವಾಗಿದೆ. ತೇಜಸ್ವಿ, ಆಲನಹಳ್ಳಿ ಕೃಷ್ಣ ಮೊದಲಾದವರ ಕಾದಂಬರಿಯ ಒಂದು ಅಡ್ಡ ಸೀಳಿಕೆಯಾಗಿ (cross section) ಆಗಿ ಕಾಣಿಸುವ ಸಂರಚನೆಯನ್ನು ಪಡೆದಿದೆ. ಆದರೆ ಅದೇ ಸಮಯದಲ್ಲಿ ಇದೇ ಚಿತ್ರದ ಮುಖ್ಯ ಕೊರತೆ ಕೂಡ. ಏನೆಂದರೆ ಚಿತ್ರ ಗ್ರಾಮೀಣ ಸಮುದಾಯದ ರೈತರ ಒಂದು ಸ್ತರಕ್ಕಷ್ಟೇ ಸೀಮಿತವಾಗಿದೆ. ಆ ಸ್ತರವಷ್ಟೇ ಗ್ರಾಮ ಎನ್ನುವ ಅಸಹಜ ಭಾವನೆಯನ್ನು ಮೂಡಿಸುತ್ತದೆ. ಇದೂ ಕೂಡ ಅಪ್ರಜ್ಞಾಪೂರ್ವಕ ನೆಲೆಯಲ್ಲಿ ಬಹಳ ಸಹಜವಾಗಿಯೇ ಆಗಿರುವ ಭ್ರಮಾ ಸೃಷ್ಟಿ. ಈ ಕಾರಣಕ್ಕಾಗಿಯೇ ಟೀಕೆಗೊಳಗಾಗಿದೆ. ಅನೇಕ ಬದಲಾವಣೆಗಳ ನಡುವೆಯೂ ಇನ್ನೂ ಕಾಣುವ ಸಂಬಂಧಗಳಲ್ಲಿನ ಆಪ್ತತೆಯ ಚಿತ್ರಣದಲ್ಲಿ ಕೂಡ ತೀವ್ರ ಕೊರತೆ ಕಾಡುತ್ತದೆ.

ನಿರ್ದೇಶಕ, ಕಥೆಗಾರರ ಮತ್ತು ತಂಡದವರೆಲ್ಲ ಹೊಸಬರೇ ಆಗಿರುವುದನ್ನು ಗಮನಕ್ಕೆ ತೆಗೆದುಕೊಂಡರೆ ಇದೊಂದು ಅಪೂರ್ವ ಪ್ರಯತ್ನ. ಇವರ ಮುಂದಿನ ಹೆಜ್ಜೆಗಳು ಮತ್ತಷ್ಟು ಅರ್ಥ ಪೂರ್ಣವಾಗಿರುತ್ತವೆ ಎಂಬ ಭರವಸೆಯನ್ನಂತೂ ಮೂಡಿಸುತ್ತದೆ.

ಕರ್ನಾಟಕದ ವಿವಿಧ ಪ್ರದೇಶಿಕ ವೈವಿಧ್ಯತೆಯನ್ನು ಒಳಕೊಂಡಂತೆ ಕನಿಷ್ಠ ಸಾವಿರ ಹಳ್ಳಿಗಳಲ್ಲಿ ಒಂದು ದಿನವಾದರೂ ಕಳೆದಿರುವ, ಟೀನೇಜಿನವರೆಗೆ ಹಳ್ಳಿಗಳಲ್ಲಿಯೇ ಬೆಳೆದ ಅನುಭವ ನನ್ನ ಈ ಮಾತುಗಳ ಹಿಂದಿದೆ.

ರೇಶನ್ ಗೆ 'ಆಧಾರ್ ಲಿಂಕ್' : ಮಹಾ ಮೋಸ

ಈಗ ಎಲ್ಲವೂ 'ಆಧಾರ'ಮಯವಾಗುತ್ತಿದೆ. ಕೇಂದ್ರದ ಯುಪಿಎ–2 ಸರ್ಕಾರ ತಂದ ಆಧಾರ್, ಮೋದಿಯ ಆಡಳಿತದಲ್ಲೂ ಮುಂದುವರಿಯುತ್ತಿದೆ. ಆಶ್ಚರ್ಯವೆಂದರೆ ಚುನಾವಣಾ ಸಂದರ್ಭದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಮರುಘಳಿಗೆಯಲ್ಲಿ ಆ ಧಾರ್ ನಿಷೇಧಿಸುವುದಾಗಿ ಉದ್ದುದ ಭಾಷಣ ಬಿಗಿದಿದ್ದ ಬಿಜೆಪಿ ನಾಯಕರು, ಅಧಿಕಾರಕ್ಕೆ ಬಂದ ನಂತರ ಉಲ್ಟಾ ಹೊಡೆದದ್ದು ಈಗ ಇತಿಹಾಸ. ಸದ್ಯ ಆಧಾರ್‌ನ್ನು ಕಾನೂನಾತ್ಮಕವಾಗಿ ಕಡ್ಡಾಯಗೊಳಿಸಲಾಗಿದೆ. ಸರ್ಕಾರ ತರುವ ಯಾವುದೇ ಯೋಜನೆಗಳ ಫಲಾನುಭವಿಗಳು ಆಧಾರ್‌ನ್ನು ಖಾತ್ರಿಪಡಿಸಲೇಬೇಕು. ಇಲ್ಲದಿದ್ದಲ್ಲಿ ಫಲಾನುಭವಿಯಾಗಲು ಸಾಧ್ಯವಿಲ್ಲ ಎಂಬರಷ್ಟರ ಮಟ್ಟಿಗೆ ಇದನ್ನು ಜಾರಿಗೊಳಿಸಲಾಗುತ್ತಿದೆ.

ರಾಜ್ಯದಲ್ಲಿ ಸದ್ಯ ರೇಷನ್ ವ್ಯವಸ್ಥೆಯಲ್ಲಿ ಆ ಧಾರ್ ಕಡ್ಡಾಯಗೊಳಿಸಲು ಸಿದ್ದರಾಮಯ್ಯ ಸರ್ಕಾರ ಈಗಾಗಲೇ ತೀರ್ಮಾನಿಸಿದೆ. ಇದು ಜುಲೈ 1 ರಿಂದ ರಾಜ್ಯದಲ್ಲಿ ಅನ್ವಯವಾಗಲಿದೆ. ಒಂದು ವೇಳೆ ನಿಮ್ಮಲ್ಲಿ ರೇಷನ್ ಕಾರ್ಡ್ ಇದ್ದು ಆಧಾರ್ ಇಲ್ಲದಿದ್ದರೆ ನಿಮಗೆ ರೇಷನ್ ಸಿಗುವುದಿಲ್ಲ. ಅಂದರೆ ರೇಷನ್ ಅಂಗಡಿಯಲ್ಲಿ ರೇಷನ್ ಪಡೆಯಲು ರೇಷನ್ ಕಾರ್ಡ್ ಜತೆಯಲ್ಲಿ ಆಧಾರ್ ಕಾರ್ಡು ಕೂಡ ಇರಬೇಕು. ಸದ್ಯಕ್ಕೆ ಬೆಂಗಳೂರು ನಗರದಲ್ಲಿ ಇದನ್ನು ಪ್ರಾಯೋಗಿಕವಾಗಿ ಜಾರಿಗೆ ತಂದು ನಂತರ ರಾಜಕ್ಕೆ ವಿಸ್ತರಿಸುವ ಯೋಜನೆ–ಯೋಚನೆ ಸರ್ಕಾರದ್ದು.

ಸರ್ಕಾರ ನೀಡುತ್ತಿರುವ ಕಾರಣಗಳೇನು?

ಬೋಗಸ್ ಕಾರ್ಡುಗಳಿಗೆ ಕಡಿವಾಣ ಹಾಕಲು ಇದರಿಂದ ಪ್ರಯೋಜನವಾಗುತ್ತದೆ. ಹೇಗೆಂದರೆ? ಒಬ್ಬರಿಗೆ ಒಂದೇ ಆಧಾರ್ ಸಂಖ್ಯೆ ಇರುವುದರಿಂದ ಒಂದು ಆಧಾರ್‌ಗೆ ಒಂದೇ ರೇಷನ್ ಕಾರ್ಡು ಹೊಂದಲು ಮಾತ್ರ ಸಾಧ್ಯವಾಗುತ್ತದೆ. ಅಕಸ್ಮಾತ್ ಎರಡು ರೇಷನ್ ಕಾರ್ಡಿನಲ್ಲಿ ಒಂದೇ ಆ ಧಾರ್ ಸಂಖ್ಯೆ ನಮೂದಿಸಿದ್ದಲ್ಲಿ ಅದು ನಿಖರವಾಗಿ ತಿಳಿಯುತ್ತದೆ. ಹೀಗಾಗಿ ಬೋಗಸ್ ಕಾರ್ಡುಗಳನ್ನು ತಡೆದು, ಅಂತಹ ಕಾರ್ಡುಗಳನ್ನು ಮುಟ್ಟುಗೋಲು ಹಾಕಿ, ಅರ್ಹರಿಗೆ ರೇಷನ್ ಕಾರ್ಡು ಒದಗಿಸಲು ಇದರಿಂದ ಸಹಾಯವಾಗುತ್ತದೆ ಎಂದು ಸರ್ಕಾರ ಹೇಳುತ್ತದೆ.

ಹಾಗೆಯೇ ಇನ್ನು ಮುಂದೆ ರೇಷನ್ ಪಡೆಯಲು ಪ್ರತಿ ಬಾರಿ ಬೆರಳಚ್ಚು ಪಡೆಯುವುದಕ್ಕೆ ಕಡಿವಾಣ ಹಾಕಿ 'ರೇಷನ್ ಕೂಪನ್'ಗಳನ್ನು ವಿತರಿಸಲಾಗುತ್ತದೆ. ಹೀಗಾಗಿ ಬೆರಳಚ್ಚು ಪಡೆಯುವಾಗ ಸರ್ವರ್ ಸಮಸ್ಯೆ, ಬೆರಳಚ್ಚು ಹೊಂದಾಣಿಕೆ ಆಗದಿರುವುದು ಇತ್ಯಾದಿ ಸಮಸ್ಯೆಗಳು ಇದರಿಂದ ದೂರವಾಗುತ್ತದೆ ಎಂದೂ ಹೇಳುತ್ತದೆ.

ಇದು ಮೇಲ್ನೋಟಕ್ಕೆ ಸರಿ ಎಂದೇ ತೋರುತ್ತದೆ. ಸೂಕ್ಷ್ಮವಾಗಿ ನೋಡಿದ್ದಲ್ಲಿ ಇದರ ಹಿಂದಿನ ಉದ್ದೇಶಗಳು ಅನುಮಾನಗಳನ್ನು ಹುಟ್ಟಿಸುತ್ತವೆ. ಸರ್ಕಾರ ನೀಡಿರುವ ವಿವರಣೆಗಳ ಮೇಲೆ ಕೆಲವು ಸಂದೇಹಗಳಿವೆ.

1. ರೇಷನ್ ಕಾರ್ಡ್ ಹೊಂದಿದ ಎಲ್ಲರೂ ಆಧಾರ್ ಕಾರ್ಡ್ ಹೊಂದಿದ್ದಾರೆಯೇ?
2. ಹಾಗೊಂದು ವೇಳೆ ಆಧಾರ್ ಕಾರ್ಡ್ ಹೊಂದದೇ ಇದ್ದಲ್ಲಿ ಎಷ್ಟು ದಿನದಲ್ಲಿ ಆಧಾರ್ ಕೊಡುತ್ತೀರಿ?
3. ಜುಲೈ 1 ರಿಂದ ಇದನ್ನು ಅನ್ವಯ ಮಾಡಲು ಇರುವ ಕಾಲಾವಧಿ ಸಾಕೇ?
4. ರೇಷನ್ ತೆಗೆದುಕೊಳ್ಳಲು ಕೂಪನ್ ವಿತರಿಸುವುದಾಗಿ ಹೇಳಿದ್ದೀರಿ, ಅದರ ವಿತರಣೆ ಹೇಗೆ?
5. ಬೆಂಗಳೂರಿನಲ್ಲಿ ಪ್ರಾಯೋಗಿಕವಾಗಿ ಜಾರಿ ಮಾಡಲು ನಿರ್ಧರಿಸಿದ್ದೀರಿ, ಒಂದು ಕೋಟಿ ಜನಸಂಖ್ಯೆ ಇರುವ ಈ ಬೃಹತ್ ನಗರದಲ್ಲಿ ಈ ಪ್ರಯೋಗ ಯಶಸ್ವಿ ಮಾಡುವುದಾದರೂ ಹೇಗೆ?
6. ರೇಷನ್ ಕೂಪನ್‌ಗಳನ್ನು ಬೆಂಗಳೂರು ಒನ್ ಕೇಂದ್ರದಲ್ಲಿ ವಿತರಿಸಲಾಗುತ್ತದೆ ಎಂದು ಹೇಳಿದ್ದೀರಿ, ನಗರದಲ್ಲಿ ಈ ಸದ್ಯ ಇರುವುದು 103 ಕೇಂದ್ರಗಳು. ಇಲ್ಲಿ ಇತರೆ ಹತ್ತು ಹಲವು ಸೇವೆಗಳನ್ನು ಒದಗಿಸಲಾಗುತ್ತದೆ. (ವಿದ್ಯುತ್, ನೀರು, ದೂರವಾಣಿ, ಇತ್ಯಾದಿ) ಈ ಎಲ್ಲಾ ಕೆಲಸಗಳ ಜತೆಗೆ ಕೂಪನ್‌ಗಳನ್ನು ವಿತರಿಸಲು ಸಾಧ್ಯವೇ?
7. ಪ್ರಯೋಗ ಮಾಡಲು ಸಣ್ಣ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡಿದ್ದರೆ, ಪ್ರಯೋಗ ಯಶಸ್ವಿ ಆಗುತ್ತಿರಲಿಲ್ಲವೇ?
8. ಒಂದು ಕೋಟಿ ಜನಸಂಖ್ಯೆ ಇರುವ ಬೃಹತ್ ನಗರವನ್ನು ಆಯ್ಕೆ ಮಾಡಿಕೊಂಡಿರುವ ಉದ್ದೇಶ ಮತ್ತು ಕಾರಣ ಏನು?

ಹೀಗೆ ಕೆಲವು ಸರಳ ಪ್ರಶ್ನೆಗಳು ಸಹಜವಾಗಿ ಮೂಡುತ್ತವೆ. ಈಗಾಗಲೇ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಆಧಾರ್ ಲಿಂಕ್ ಮಾಡಲು ಹೋಗಿ ಇನ್ನೊಂದಷ್ಟು ಸಮಸ್ಯೆಗಳು ಸೃಷ್ಟಿಯಾಗಿವೆ.

ಎಲ್.ಪಿ.ಜಿ. ಗ್ಯಾಸ್ ಬಳಕೆಗೆ ಆಧಾರ್ ಕಡ್ಡಾಯ ಮಾಡಿ, ಸಬ್ಸಿಡಿಯ ನಗದು, ಬಳಕೆದಾರರ ಖಾತೆ–ಗೆ ನೇರವಾಗಿ ವರ್ಗಾವಣೆ ಆಗುತ್ತದೆ ಎಂದು ಹೇಳಲಾಯಿತು. ಆದರೆ ಆಗಿದ್ದೇನು? ನೇರ ನಗದು ಯಾರಿಗೂ ಬಂದ ಉದಾಹರಣೆಗಳಿಲ್ಲ. ಕೆಲವೆಡೆ ಒಂದೆರಡು ಕಂತು ಕೊಟ್ಟಂತೆ ಮಾಡಿ, ನಿಧಾನಕ್ಕೆ ನಿಲ್ಲಿಸಲಾಯಿತು. ಹೀಗಾಗಿ ಇದೂ ಕೂಡ ಇದೇ ತರಹದ ಉದ್ದೇಶ ಇದ್ದ ಹಾಗೆ ಕಾಣುತ್ತಿದೆ. ಸುತ್ತಿ ಬಳಸಿ, ಸಾಕಷ್ಟು ವಿಳಂಬ ಮಾಡಿ, ಜನರು ರೇಷನ್ ಕಾರ್ಡ್‌ನ್ನೇ ಮರೆಯುವಂತೆ ಮಾಡಿ, ಭವಿಷ್ಯದಲ್ಲಿ ರೇಷನ್ ವ್ಯವಸ್ಥೆಯನ್ನೇ ಬುಡಮೇಲು ಮಾಡುವ ಸಾಧ್ಯತೆಯನ್ನು ತಳ್ಳಿಹಾಕಲಾಗದು. ರೇಷನ್ ವ್ಯವಸ್ಥೆಯಲ್ಲಿ ತಂದ ಬದಲಾವಣೆಗಳನ್ನು ಗಮನಿಸಿದಾಗ ಈ ಅನುಮಾನ ಮೂಡದೇ ಇರಲಾರದು. ಹಸಿರು ಬಣ್ಣದಿಂದ ತರಾವರಿ ಬಣ್ಣದ ಕಾರ್ಡುಗಳನ್ನು ತರಲಾಯಿತು, ಬಡತನ ರೇಖೆಯನ್ನು ಅಳೆಯುವ ಹೊಸ ಫಾರ್ಮುಲಾವನ್ನೇ ತಂದ್ದಿದಾಯ್ತು. ಇದೆಲ್ಲವನ್ನು ಸರ್ಕಾರ ಸುಧಾರಣೆ ಎಂದು ಹೇಳಿತು. ಆದರೆ ಆಗಿದ್ದು ರೇಷನ್ ಕಡಿತ.

ನಿರ್ಗತಿಕರಿಗೆ, ಬಡತನದಿಂದಾಗಿ ಅಪೌಷ್ಟಿಕತೆಯಿಂದ ಬಳಲುತ್ತಿರುವವರಿಗೆ ಈ ಯೋಜನೆ ಸಂಜೀವಿನಿಯಂತಿತ್ತು. ರೈತರಿಗೂ, ಕೃಷಿಯ ಉಳಿವಿಗೂ ಇದು ಹೆಗಲು ಕೊಟ್ಟಿತ್ತು. ಇಂತಹ ಅತ್ಯುತ್ತಮ ಯೋಜನೆಯನ್ನು ಕ್ರಮೇಣ ರೋಗಗ್ರಸ್ತಗೊಳಿಸುವ ಹುನ್ನಾರಗಳು ನಡೆಯುತ್ತಲೇ ಇವೆ. ಇದೀಗ ಆಧಾರ್ ಲಿಂಕ್ ಮಾಡುವುದು ಇದಕ್ಕೆ ಇನ್ನೊಂದು ಹೊಸ ಸೇರ್ಪಡೆಯಷ್ಟೆ. 1990ರ ನಂತರ ದೇಶದಲ್ಲಿ ಜಾರಿಯಾದ ಹೊಸ ಆರ್ಥಿಕ ನೀತಿಗಳು ಇದನ್ನೇ ಹೇಳುತ್ತಾ ಬಂದಿವೆ. ಸಾರ್ವಜನಿಕ ವೆಚ್ಚಗಳನ್ನು ಕಡಿತ ಮಾಡಬೇಕೆನ್ನುವ ಐಎಂಎಫ್, ವಿಶ್ವಬ್ಯಾಂಕಿನ ಅಣತಿಗಳನ್ನು ಎಲ್ಲಾ ಸರ್ಕಾರಗಳು ಚಾಚೂ ತಪ್ಪದೇ ಪಾಲಿಸುತ್ತಾ ಬಂದಿವೆ. ಇದುವರೆಗೂ ಆಡಳಿತ ನಡೆಸಿದ ಸರ್ಕಾರಗಳು ಈ ಪಿಡಿಎಸ್ ವಿಚಾರದಲ್ಲಿ ಜನತೆಗೆ ಹೆದರಿ ಸ್ಪೀಡ್ ಲಿಮಿಟ್‌ನಲ್ಲಿದ್ದವು. ಆದರೆ ನರೇಂದ್ರ ಮೋದಿ ಸರ್ಕಾರ ಸ್ಪೀಡ್ ಲಿಮಿಟ್ ಮೀರಿ ನಡೆಯುತ್ತಿದೆ. ಎಷ್ಟು ಸಾಧ್ಯವೋ ಅಷ್ಟು ಬೇಗನೆ ನಾಗರಿಕರಿಗೆ ಸಿಗುತ್ತಿದ್ದ ಸಬ್ಸಿಡಿ, ಸೇವೆಗಳನ್ನು ಕಟ್ ಮಾಡುತ್ತಿದೆ. ರಾಜ್ಯದಲ್ಲಿರುವ ಸಿದ್ದರಾಮಯ್ಯ ಸರ್ಕಾರ, ಕೇಂದ್ರದ ಯೋಜನೆಗಳನ್ನು ಮರು ಮಾತಿಲ್ಲದೇ ಜಾರಿ ಮಾಡುತ್ತಿದೆ. ಇದು ಅಹಿಂದ ಸರ್ಕಾರ ನಡೆ!

–ಲಿಂಗರಾಜು



ನ್ಯೂಟನ್ ರ 'ಬೀಫ್' ನಿಯಮ

ಮಟನ್ ನ್ನು ಸೃಷ್ಟಿಸಲೂ ಸಾಧ್ಯವಿಲ್ಲ, ನಾಶ ಪಡಿಸಲೂ ಸಾಧ್ಯವಿಲ್ಲ. ಸನಿಹದಲ್ಲಿರುವ ಚುನಾವಣೆ ವೇಗವರ್ಧಕವಾಗಿ ಕೆಲಸ ಮಾಡಿದಾಗ ಅದನ್ನು ಬೀಫ್ ಆಗಿ ಪರಿವರ್ತಿಸಲು ಮಾತ್ರ ಸಾಧ್ಯ.

– ಅನ್–ಅಫಿಶಿಯಲ್ ಸುಬ್ರಮಣ್ಯ ಸ್ವಾಮಿ
(ಒಂದು ಅಣಕ ಫೇಸ್ ಬುಕ್ ಅಕೌಂಟಿನಲ್ಲಿ ಇತ್ತೀಚಿನ ದಾದ್ರಿ ಫೊರೆನ್ಸಿಕ್ ವರದಿಯ ಮೇಲೆ ಅಣಕ)



ಕಾರ್ಮಿಕ ವರ್ಗಕ್ಕೆ ಅಂಬೇಡ್ಕರ್ ಕೊಡುಗೆ; ಅಧ್ಯಯನದ ಜರೂರಿದೆ – ನ್ಯಾ. ಎಚ್.ಎನ್.ನಾಗಮೋಹನ್ ದಾಸ್.

ಅಂಬೇಡ್ಕರ್‌ರನ್ನು ದಲಿತರಿಗೆ ಮಾತ್ರವೇ ಸೀಮಿತಗೊಳಿಸಿ, ಜನರನ್ನೂ ಹಾಗೆ ನಂಬಿಸಲಾಗಿದೆ. ದೇಶದ ಹಲವು ಕ್ಷೇತ್ರಗಳಿಗೆ, ಇತರೆ ಶೋಷಿತ ಸಮುದಾಯಗಳಿಗೆ ಅವರು ನೀಡಿದ ಕೊಡುಗೆಯನ್ನು ಉದ್ದೇಶಪೂರ್ವಕವಾಗಿ ಮರೆಮಾಚಲಾಗಿದೆ. ಅಂಬೇಡ್ಕರ್ ಒಬ್ಬ ವಿಶ್ವನಾಯಕ, ಕಾರ್ಮಿಕ ನಾಯಕ, ಅರ್ಥಶಾಸ್ತ್ರಜ್ಞ, ನ್ಯಾಯವಾದಿ, ಸಂವಿಧಾನ ಕರ್ತೃ, ಮಾನವತಾವಾದಿಯೂ ಹಾಗೂ ಸಮಾಜವಿಜ್ಞಾನಿಯೂ ಆಗಿದ್ದರು ಎಂಬುದನ್ನು ಅರಿಯಬೇಕಿದೆ. ಹೀಗಾಗಿಯೇ ಕೊಲಂಬಿಯಾ ವಿಶ್ವವಿದ್ಯಾನಿಲಯ ಅಂಬೇಡ್ಕರರನ್ನು 'ಪ್ರತಿಭೆಯ ಚಿಲುಮೆ' ಎಂದು ಕರೆದಿದೆ. ಆದ್ದರಿಂದ ಬಾಬಾ ಸಾಹೇಬರ ಕುರಿತು ಗಂಭೀರ ಅಧ್ಯಯನದ ಅಗತ್ಯವಿದೆ ಎಂದು ಕರ್ನಾಟಕ ಹೈಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ಹೇಳಿದರು. ಅವರು ಸಿಐಟಿಯು ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯು 'ಸಿಐಟಿಯು ಸಂಸ್ಥಾಪನಾ ದಿನ'ದ ಅಂಗವಾಗಿ ಮೇ 31 ರಂದು ಆಯೋಜಿಸಿದ್ದ 'ಕಾರ್ಮಿಕ ಕಾನೂನುಗಳು ಮತ್ತು ಅಂಬೇಡ್ಕರ್' ವಿಷಯದ ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜಾತಿ ವ್ಯವಸ್ಥೆ ಭಾರತೀಯ ಸಮಾಜಕ್ಕಂಟಿದ ಮಹಾಶಾಪ, ಹುಟ್ಟಿನಿಂದ ಸಾಯುವವರೆಗೂ ಅದೇ ಜಾತಿ, ಕಸುಬಿನಲ್ಲಿ ಮುಂದುವರಿದು ಮಣ್ಣಾಗಬೇಕಾದ ಅಮಾನವೀಯ ವ್ಯವಸ್ಥೆಯಲ್ಲಿ ಮೊದಲಿಗೆ ಬಲಿಪಶುಗಳಾದವರು ದಲಿತರೇ ಆಗಿದ್ದಾರೆ. ಇಂದಿಗೂ ಶೋಷಣೆ, ದಬ್ಬಾಳಿಕೆ ಮುಂದುವರಿಯುತ್ತಿದೆ. ಇಂಥ ದನಿಯಿಲ್ಲದ ಅಸ್ಪೃಶ್ಯ ದಲಿತ ಸಮುದಾಯದ ಪಾಲಿಗೆ ದನಿಯಾದವರು ಅಂಬೇಡ್ಕರ್.

ವೈವಿಧ್ಯಮಯ ಸಂಸ್ಕೃತಿ, ಧರ್ಮ, ಜಾತಿ, ಭಾಷೆಗಳ ಜತೆಯಲ್ಲಿ ರಾಜರು, ಪಾಳೆಗಾರರಿಗೆ ಹಂಚಿಹೋಗಿದ್ದ ಭಾರತೀಯ ಸಮಾಜವನ್ನು ಒಂದುಗೂಡಿಸಿದ್ದು ನಮ್ಮ ಸಂವಿಧಾನ. ಜಗತ್ತಿಗೆ ಇಂಥ ಮಾದರಿಯಾದ ಸಂವಿಧಾನವನ್ನು ಕೊಟ್ಟಿದ್ದು ಅಂಬೇಡ್ಕರ್. ವಿಶ್ವದ ಅನೇಕ ದೇಶಗಳ ಸಂವಿಧಾನಗಳ ಅಧ್ಯಯನ ನಡೆಸಿ, ಭಾರತೀಯ ಸಮಾಜಕ್ಕೊಪ್ಪುವ ದೇಸಿ ಸಂವಿಧಾನವನ್ನು ಕೊಡಲು ಅಂಬೇಡ್ಕರ್ ವಹಿಸಿದ ಪಾತ್ರ, ಅವರ ಪರಿಶ್ರಮ ಪ್ರಶ್ನಾತೀತ. ಸಂವಿಧಾನ ಕರಡು ರಚನಾ ಸಮಿತಿಯಲ್ಲಿದ್ದ ಬಹುತೇಕರು ನಾಮ ಮಾತ್ರಕ್ಕೆ ಎಂಬಂತಿದ್ದರು. ಹೀಗಿದ್ದಾಗ್ಯೂ ಅಂಬೇಡ್ಕರ್ ಒಬ್ಬರೇ ಆ ಮಹಾ ಜವಾಬ್ದಾರಿಯನ್ನು ತಮ್ಮ ಹೆಗಲ ಮೇಲೆ ಹೊತ್ತುಕೊಂಡು ನಿಭಾಯಿಸಿದ್ದರು.

ನಮ್ಮ ಸಂವಿಧಾನವು ಪ್ರಜಾಪ್ರಭುತ್ವ ಸ್ಥಾಪನೆಯ ಉದ್ದೇಶ ಹೊಂದಿದೆ. ಚುನಾವಣೆಯಲ್ಲಿ ಮತ ಹಾಕುವುದಷ್ಟೇ ಪ್ರಜಾಪ್ರಭುತ್ವ ಅಲ್ಲ. ಪ್ರಜಾಪ್ರಭುತ್ವ ಎನ್ನುವುದು ವಿಶಾಲವಾದ ವಿವಿಧ ಆಯಾಮಗಳನ್ನು ಒಳಗೊಂಡಿದೆ. ಆದರೆ ಇಂದು ಇದಕ್ಕಿರುವ ವ್ಯಾಖ್ಯೆಯನ್ನು ಸೀಮಿತಗೊಳಿಸಲಾಗಿದೆ. ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪ್ರಜಾಪ್ರಭುತ್ವ ದಕ್ಕಿದೆ ನಿಜ, ಆದರೆ ಆರ್ಥಿಕ ಪ್ರಜಾಪ್ರಭುತ್ವ ಎನ್ನುವುದು ಇನ್ನೂ ಮರೀಚಿಕೆಯಾಗಿದೆ, ಸಾಮಾಜಿಕ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬರಲೇ ಇಲ್ಲ. ಅದರ ಜಾಗದಲ್ಲಿ ಇಂದು ಸಾಮಾಜಿಕ ಸರ್ವಾಧಿಕಾರ ಅಸ್ತಿತ್ವದಲ್ಲಿದೆ, ಇದು ಭಾರತದ ಜನತೆಗೆ ಸಂವಿಧಾನ ಕೊಡಮಾಡಿದ ಮೂಲಭೂತ ಹಕ್ಕುಗಳನ್ನು ಕಸಿದು ಅದರ ಆಶಯಗಳನ್ನು ಬುಡಮೇಲು ಮಾಡುತ್ತಿದೆ. ಜನರ ಆಚಾರ, ವಿಚಾರ, ನಡೆ–ನುಡಿ, ಆಹಾರ, ಉಡುಪು ಹೀಗೆ ಎಲ್ಲವನ್ನು ನಿಯಂತ್ರಣದಲ್ಲಿಡುವ ಪ್ರಯತ್ನ ನಡೆಯುತ್ತಿದೆ. ಇಂಥ ಅಪಾಯದ ಸ್ಥಿತಿಯಲ್ಲಿರುವ ಸಾಮಾಜಿಕ ಪ್ರಜಾಪ್ರಭುತ್ವವನ್ನು ಕಾಪಾಡುವ ಜವಾಬ್ದಾರಿ ಕಾರ್ಮಿಕ ವರ್ಗದ ಮೇಲೂ ಇದೆ. ಹೀಗಾಗಿ ನಾವು ರಾಜಕೀಯ ಪ್ರಜಾಪ್ರಭುತ್ವ ಜತೆಯಲ್ಲಿ ಆರ್ಥಿಕ ಮತ್ತು ಸಾಮಾಜಿಕ ಪ್ರಜಾಪ್ರಭುತ್ವನ್ನು ಬೆಸೆದು ನೋಡಲು ಪ್ರಯತ್ನಿಸಬೇಕು. ಆಗ ಮಾತ್ರವೇ ಪ್ರಜಾಪ್ರಭುತ್ವವನ್ನು ಇಡಿಯಾಗಿ ಅರ್ಥೈಸಿಕೊಳ್ಳಲು ಸಾಧ್ಯ.

ಜಾತ್ಯಾತೀತತೆ ಎಂದರೆ ಕೇವಲ ಎಲ್ಲಾ ಧರ್ಮಗಳನ್ನು ಸಮಾನವಾಗಿ ಕಾಣುವುದಲ್ಲ, ಬದಲಾಗಿ ರಾಜಕಾರಣದಲ್ಲಿ ಧರ್ಮ ಬೆರೆಸದಿರುವುದೇ ನಿಜವಾದ ಅರ್ಥದಲ್ಲಿ ಜಾತ್ಯಾತೀತತೆ. ಧರ್ಮ ಮತ್ತು ರಾಜಕಾರಣ ಬೆರೆತರೆ ಅದು ಕೋಮುವಾದವಾಗುತ್ತದೆ. ಇದು ಜನರ ಐಕ್ಯತೆಯನ್ನು ಒಡೆಯುತ್ತದೆ. ಹಾಗೆಯೇ ಯಾವುದೇ ಸರ್ಕಾರಕ್ಕೆ ಯಾವುದೇ ಧರ್ಮ ಇರಬಾರದು. ಜಗತ್ತಿನ ಎಲ್ಲ ಧರ್ಮಗಳು ಹುಟ್ಟಿದ್ದು ಸಾಮಾಜಿಕ ಸುಧಾರಣೆಯ ಸಲುವಾಗಿ. ತನ್ನದು ಮಾತ್ರವೇ ಶ್ರೇಷ್ಠ, ಆ ಶ್ರೇಷ್ಠತೆಗಾಗಿ ಕಟ್ಟುಪಾಡುಗಳನ್ನು ಬಲವಂತವಾಗಿ ಹೇರಿದ್ದಲ್ಲಿ ಅದು ಮೂಲಭೂತವಾದವಾಗುತ್ತದೆ. ಇದು ಧರ್ಮವನ್ನೂ ಅಪ್ರಜಾಪ್ರಭುತ್ವಗೊಳಿಸುತ್ತದೆ.

ದೇಶದ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರನ್ನು ಇಂದಿಗೂ ಎರಡನೇ ದರ್ಜೆ ಪ್ರಜೆಗಳನ್ನಾಗಿ ನೋಡಲಾಗುತ್ತಿದೆ. ಅಂದು ಇದನ್ನರಿತಿದ್ದ ಅಂಬೇಡ್ಕರ್ ಮಹಿಳೆಯರಿಗೆ ಸ್ವಾತಂತ್ರ್ಯ ನೀಡುವ, ಆಸ್ತಿಯ ಹಕ್ಕನ್ನು ಪ್ರತಿಪಾದಿಸುವ ಹಿಂದು ಕೋಡ್ ಬಿಲ್‌ನ್ನು ಮಂಡಿಸಿದರಾದರೂ, ಅಗತ್ಯವಿದ್ದ ಬಹುಮತ ಸಿಗದೇ ಅದು ಬಿದ್ದುಹೋಗಿತ್ತು. ಇದ–ರಿಂದ ತೀವ್ರವಾಗಿ ನೊಂದಿದ್ದ ಅಂಬೇಡ್ಕರ್ ಅಂ–ದೇ ತಮ್ಮ ಕಾನೂನು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಅಂಬೇಡ್ಕರ್ ಹೊರತುಪಡಿಸಿ ಒಂದು ಸೈದ್ಧಾಂತಿಕ ನೆಲೆಗಟ್ಟಿನ ವಿಚಾರದಲ್ಲಿನ ಭಿನ್ನತೆ ಕಾರಣದಿಂದ ರಾಜೀನಾಮೆ ನೀಡಿದ ಮತ್ತೊಬ್ಬರನ್ನು ಭಾರತದ ರಾಜಕಾರಣದಲ್ಲಿ ಕಾಣಲು ಸಾಧ್ಯವಿಲ್ಲ.

ಹದಿನೈದರಿಂದ ಅರವತ್ತೈದು ವಯಸ್ಸಿನ, ದುಡಿಯಲು ಸಾಮರ್ಥ್ಯ ಇರುವ ಜನ 60 ಶೇಕಡ ಇದ್ದಾರೆ. ಇಂಥ ಕಾರ್ಮಿಕ ವರ್ಗಕ್ಕೆ ಅಂಬೇಡ್ಕರ್ ಕೊಡುಗೆ ಅನನ್ಯವಾದುದು. ಸಾಮಾಜಿಕ ನ್ಯಾಯ ಎನ್ನುವುದು ಮೀಸಲಾತಿ ಮಾತ್ರವಲ್ಲ, ಬದಲಾಗಿ ದುಡಿಮೆಗೆ ತಕ್ಕ ಪ್ರತಿಫಲ ಒದಗಿಸುವುದು ಸಾಮಾಜಿಕ ನ್ಯಾಯ ಎಂದು ಅಂಬೇಡ್ಕರ್ ವಿಶ್ಲೇಷಿಸುತ್ತಾರೆ. ಹೀಗಾಗಿ ಮೀಸಲಾತಿಯು ಸಾಮಾಜಿಕ ನ್ಯಾಯದ ಒಂದು ಸಣ್ಣ ಭಾಗವಷ್ಟೆ. ಶೇ.90ರಷ್ಟಿರುವ ಅಸಂಘಟಿತ ಕಾರ್ಮಿಕರು ಯಾವುದೇ ಸೌಲಭ್ಯಗಳಿಲ್ಲದೇ ಕಡಿಮೆ ಕೂಲಿಗೆ ಹೆಚ್ಚು ದುಡಿಯುತ್ತಿದ್ದಾರೆ, ಇಂಥವರ ದುಡಿಮೆಗೆ ತಕ್ಕ ಪ್ರತಿಫಲ ದೊರಕುವಂತಾದಾಗ ಮಾತ್ರವೇ ಸಾಮಾಜಿಕ ನ್ಯಾಯ ದಕ್ಕಿದೆ ಎಂದು ಭಾವಿಸಬಹುದು.

ಕಾರ್ಮಿಕರ ಬರ್ಬರ ಶೋಷಣೆಯನ್ನು ಕಣ್ಣಾರೆ ಕಂಡಿದ್ದ ಬಾಬಾ ಸಾಹೇಬರು, ಅಂದು ವೈಸರಾಯ್ ಆಡಳಿತದಲ್ಲಿ ಕಾನೂನು ಮಂತ್ರಿ ಆಗಿದ್ದ ಸಂದರ್ಭದಲ್ಲಿ ಹದಿನಾಲ್ಕು ಗಂಟೆ ಇದ್ದ ಕೆಲಸದ ಅವಧಿಯನ್ನು ಎಂಟು ಗಂಟೆಗೆ ಇಳಿಸಿ, ಕಾನೂನು ರೂಪಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಕಾರ್ಮಿಕ ವರ್ಗ ವಿಮೋಚನೆಯಾಗದೇ ಭಾರತ ವಿಮೋಚನೆ ಆಗದು. ಆದರೆ ಅದಕ್ಕಿಂತಲೂ ಮುಖ್ಯವಾಗಿ ದಲಿತ ಕಾರ್ಮಿಕ ವರ್ಗದ ವಿಮೋಚನೆ ಆಗದೆ ಕಾರ್ಮಿಕ ವರ್ಗದ ವಿಮೋಚನೆ ಪರಿಪೂರ್ಣಗೊಳ್ಳದು ಎಂದು ಅಂಬೇಡ್ಕರ್ ಹೇಳುತ್ತಾರೆ. ಅವರ ಈ ಮಾತು ಕಟು ವಾಸ್ತವ, ಹೀಗಾಗಿ ಇಂದಿನ ಕಾರ್ಮಿಕ ವರ್ಗದ ನಾಯಕತ್ವ ಇದನ್ನು ಅರ್ಥ ಮಾಡಿಕೊಳ್ಳಬೇಕಿದೆ.

ಕಾರ್ಮಿಕ ವರ್ಗವು ಕೇವಲ ತಮ್ಮ ಬೇಡಿಕೆಗಳ ಹೋರಾಟಗಳಿಗೆ ಸೀಮಿತವಾಗದೇ, ಅದಕ್ಕೂ ಮಿಗಿಲಾದ ಚಾರಿತ್ರಿಕ ಕರ್ತವ್ಯವನ್ನು ನಿರ್ವಹಿಸಬೇಕಾದ ಹೊಣೆಗಾರಿಕೆ ಇದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಹಾಗೆಯೇ ಭಾರತದ ಕಾರ್ಮಿಕ ವರ್ಗಕ್ಕೆ ಅಂಬೇಡ್ಕರ್ ನೀಡಿದ ಕೊಡುಗೆಗಳನ್ನು ಅಧ್ಯಯನ ನಡೆಸುವ ಜರೂರಿದೆ ಎಂದು ನ್ಯಾಯಮೂರ್ತಿ ಹೇಳಿದರು.

ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಕೆ.ಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಕೆ.ಎನ್. ಉಮೇಶ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಬಿ.ರಾಜಶೇಖರಮೂರ್ತಿ ವಂದಿಸಿದರು. ಖಜಾಂಚಿ ಬಿ.ಎನ್.ಮಂಜುನಾಥ್ ವೇದಿಕೆಯಲ್ಲಿದ್ದರು.

ಇದೇ ಸಂದರ್ಭದಲ್ಲಿ ಸಿಐಟಿಯುನ ಬೆಂಗಳೂರು ದಕ್ಷಿಣ ಜಿಲ್ಲಾ 11ನೇ ಸಮ್ಮೇಳನದ ಲಾಂಛನವನ್ನು ಹಿರಿಯ ಕಾರ್ಮಿಕ ಮುಖಂಡ ಕೋದಂಡರಾಮ್ ಬಿಡುಗಡೆ ಮಾಡಿದರು. ಸಮ್ಮೇಳನವು ಜುಲೈ 24 ಮತ್ತು 25 ರಂದು ಬಿಡದಿ ಕೈಗಾರಿಕಾ ಪ್ರದೇಶದಲ್ಲಿ ನಡೆಯಲಿದೆ.

–ಲಿಂಗರಾಜು

ಭೀಕರ ಬರದಲ್ಲೂ ಸಿಗದ ಉದ್ಯೋಗ ಖಾತ್ರಿ ಕೆಲಸ

ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತಿ ಕಛೇರಿಗಳಿಗೆ – ಕೃಷಿ ಕೂಲಿಕಾರರ ಮುತ್ತಿಗೆ



ರಾಜ್ಯದಲ್ಲಿ ಮಳೆ ಇಲ್ಲದೆ ಭೀಕರ ಬರಗಾಲವಿದ್ದು ರಾಜ್ಯ ಸರ್ಕಾರವೂ ರಾಜ್ಯದ 173 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದ್ದು, ಭೂ ಮಾಲಕರು ಕೂಡ ಕೂಲಿ ಕೆಲಸಕ್ಕೆ ಕೃಷಿ ಕೂಲಿಕಾರರನ್ನು ಕರೆಯುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರವೂ 173 ತಾಲೂಕುಗಳ ಗ್ರಾಮೀಣ ಕೃಷಿ ಕೂಲಿಕಾರರಿಗೆ ತಕ್ಷಣ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸ ನೀಡಬೇಕು ಎಂದು ಆದೇಶ ನೀಡಿದರು ಕೂಡ, ರಾಜ್ಯದ ಯಾವ ಜಿಲ್ಲೆಯಲ್ಲೂ, ತಾಲೂಕಿನಲ್ಲೂ ಮತ್ತು ಗ್ರಾಮ ಪಂಚಾಯತಿಯಲ್ಲೂ ಕೃಷಿ ಕೂಲಿಕಾರರಿಗೆ ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸವನ್ನು ನೀಡಿರುವುದಿಲ್ಲ.

ಇದರ ಬಗ್ಗೆ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯ ಸಮಿತಿಯೂ ಚರ್ಚಿಸಿ 1 ಜೂನ್ 2016 ರಂದು ಜಿಲ್ಲಾ ಪಂಚಾಯತಿ ಕಛೇರಿ, ತಾಲೂಕು ಪಂಚಾಯತಿ ಕಛೇರಿಗಳಿಗೆ ಮುತ್ತಿಗೆ ಹಾಕುವುದರ ಮೂಲಕ ಕೃಷಿ ಕೂಲಿಕಾರರಿಗೆ ಕೆಲಸ ನೀಡುವಂತೆ ಒತ್ತಾಯಿಸಲು ತೀರ್ಮಾನಿಸಿತು. ಇದರ ಭಾಗವಾಗಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಮಂಡ್ಯ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಕೃಷಿ ಕೂಲಿಕಾರರು ಸಿಲ್ವರ ಜ್ಯೂಬಿಲಿ ಪಾರ್ಕಿನಿಂದ ಬೆಂಗಳೂರು–ಮೈಸೂರು ಹೆದ್ದಾರಿಯ ಮೂಲಕ ಹಾದು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಜಿಲ್ಲಾ ಪಂಚಾಯತಿ ಕಛೇರಿಗೆ ಮುತ್ತಿಗೆ ಹಾಕಿ ಸಿ.ಇ.ಓ ರವರಿಗೆ ಮನವಿ ಸಲ್ಲಿಸಲಾಯಿತು. ಮನವಿ ಸ್ವೀಕರಿಸಿ ಮಾತನಾಡಿದ ಸಿಇಓ ಶರತ ಐಎಎಸ್ ರವರು ತಕ್ಷಣ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಆದೇಶ ಹೊರಡಿಸಿ ಕೃಷಿ ಕೂಲಿಕಾರರಿಗೆ ಕೆಲಸ ನೀಡುವಂತೆ ಆದೇಶಿಸುತ್ತೇವೆ ಎಂದು ಹೇಳಿದರು. 15 ದಿನಗಳ ನಂತರ ಸಂಘದ ಮುಖಂಡರು ಮತ್ತು ತಾಲೂಕು ಅಧಿಕಾರಿಗಳ ಜೊತೆ ಸಭೆ ನಡೆಸುವುದಾಗಿ ತಿಳಿಸಿದರು.



ಪ್ರತಿಭಟನೆಯ ನೇತೃತ್ವವನ್ನು ಜಿಲ್ಲಾ ಅಧ್ಯಕ್ಷರಾದ ಎಂ. ಪುಟ್ಟಮಾದು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಬಸವರಾಜು, ಜಿಲ್ಲಾ ಉಪಾಧ್ಯಕ್ಷರಾದ ಕೆ. ಹನುಮೇಗೌಡ, ಸು–ರೇಂದ್ರ, ಅಬ್ದುಲ್, ಸರೋಜಮ್ಮ,

ಪುಟ 14 ಕ್ಕೆ

ದಲಿತ ಹುಡುಗನ ಮೇಲೆ ಹಲ್ಲೆ: ಮಾಜಿ ಸಚಿವ ಕಳಕಪ್ಪ ಬಂಡಿ ಸಹೋದರರನ್ನು ಬಂಧಿಸಿ

ಗದಗ ಜಿಲ್ಲೆಯ ಗಜೇಂದ್ರಗಡದ ಲಂಬಾಣಿ ಸಮುದಾಯದ ಶಿವು ಮಾಳೋತ್ತರ ಎಂಬುವರು ಮೇ ತಿಂಗಳ 24ರಂದು ಕಳಕಪ್ಪ ಬಂಡಿ ಮತ್ತು ಸಹೋದರ ಒಡೆತನದಲ್ಲಿರುವ ಪೆಟ್ರೋಲ್ ಬಂಕ್‌ಗೆ ಹೋಗಿ ರೂ.30ಕ್ಕೆ ಪೆಟ್ರೋಲ್ ಹಾಕಿ ಅಂದಿದ್ದಾರೆ. ಪೆಟ್ರೋಲ್ ಹಾಕುವವನು ಮೂವತ್ತು ರೂಪಾಯಿಗೆ ಬರಲ್ಲ ಅಂದಾಗ ಬೇರೆ ಎಲ್ಲಾ ಪೆಟ್ರೋಲ್ ಬಂಕ್‌ನಲ್ಲಿ ಹಾಕ್ತಾರೆ ನೀವ್ಯಾಕೆ ಹಾಕಲ್ಲ ಅಂದಿದ್ದಾರೆ.

ಅದನ್ನು ಬಂಕ್ ಕಛೇರಿ ಒಳಗಿದ್ದ ಸಿದ್ದಪ್ಪ ಬಂಡಿ ಕೇಳಿಸಿಕೊಂಡು ವ್ಯಗ್ರಗೊಂಡು, ಪೆಟ್ರೋಲ್ ಕೇಳಿದ ಶಿವುನನ್ನು ಎಳೆದು ತರಿಸಿ, ಈ ಲಮಾಣಿಗಳದು ಬಾಳ ಅಗ್ರೈತಿ ಅನ್ನುತ್ತಾ ಅವಾಚ್ಯವಾಗಿ ಬೈದು ಬಾಯಿಗೆ ಪೆಟ್ರೋಲ್ ಒರೆಸುವ ಬಟ್ಟೆ ತುರುಕಿ, ಕೈ ಕಾಲು ಕಟ್ಟಿ, ಕೈಗೆ ಸಿಕ್ಕ ಕೋಲು, ಕಬ್ಬಿಣದ ರಾಡಿನಿಂದ ಅಮಾನುಷವಾಗಿ ಹೊಡೆದು ಅಟ್ಟಹಾಸ ಮೆರೆದಿದ್ದಾರೆ.

ಈ ದುಷ್ಕೃರ ಮೇಲೆ ಮೊಕದ್ದಮೆ ದಾಖಲಾದ್ರೂ ಪೊಲೀಸರು ಇನ್ನೂ ಬಂಧಿಸದಿರುವುದು ಖಂಡನೀಯ. ದಲಿತ ಹುಡುಗನ ಮೇಲೆ ಮಾರಣಾಂತಿಕ ಹಲ್ಲೆ ಮಾಡಿರುವ ಈ ಗೂಂಡಾಗಳನ್ನು ಪೊಲೀಸ್ ಇಲಾಖೆ ತಕ್ಷಣ ಬಂಧಿಸಿ ಕಠಿಣ ಶಿಕ್ಷೆ ವಿಧಿಸಬೇಕು ಮತ್ತು ಹಲ್ಲೆಗೊಳಗಾದ ಶಿವು ಮಾಳೋತ್ತರನಿಗೆ ನ್ಯಾಯ ಕೊಡಬೇಕು.

ವರದಿ: ಪೀರು ರಾಥೋಡ್



ಪಶ್ಚಿಮ ಬಂಗಾಳ : ಹೆಚ್ಚುತ್ತಿರುವ ಚುನಾವಣೋತ್ತರ ಹಿಂಸೆ-ದಾಳಿ





ಋತುಪರ್ಣ ರಾಯ್ ಕೋಲ್ಕತ್ತದ ಅಶುತೋಷ್ ಕಾಲೇಜು ವಿದ್ಯಾರ್ಥಿನಿ. ಇತ್ತೀಚೆಗೆ ತೃಣಮೂಲ ಕಾಂಗ್ರೆಸ್‌ನ ಗೂಂಡಾಗಳು ಅಶುತೋಷ್ ಮೇಲೆ ಮುಗಿಬಿದ್ದು ಮನಸ್ಸೋ ಇಚ್ಛೆ ಥಳಿಸಿದ್ದಾರೆ. ಆಕೆ ಮಾಡಿದ ಅಪರಾಧ ಎಂದರೆ ವಿದ್ಯಾರ್ಥಿ ಸಂಘಟನೆಯಾದ ಎಸ್‌ಎಫ್‌ಐನ ಸದಸ್ಯಳಾಗಿದ್ದು. ಕಾಲೇಜ್ ಪುನರಾರಂಭಕ್ಕೆ ಮುನ್ನ ತನ್ನ ಗುರುತಿನ ಪತ್ರ ಪಡೆಯಲು ಋತುಪರ್ಣಾ ಕಾಲೇಜ್‌ಗೆ ಬಂದಿದ್ದಾಗ ಈ ಘಟನೆ ನಡೆದಿದೆ. ಒಬ್ಬಳು ತರುಣಿಯೂ ಸೇರಿದಂತೆ ಟಿಎಂಸಿಪಿ ಕಾರ್ಯಕರ್ತರಾದ, ಕಾಲೇಜಿನವರೇ ಆದ ಕೆಲವು ಗೂಂಡಾಗಳು ಋತುಪರ್ಣಾಗೆ ತಮ್ಮ ಕಾಲಿಗೆ ಬೀಳುವಂತೆ ತಾಕೀತು ಮಾಡಿದ್ದಾರೆ. ಅನಂತರ ತಾನು ಗುರುತಿಸಿಕೊಂಡಿರುವ ವಿದ್ಯಾರ್ಥಿ ಸಂಘಟನೆಗೆ ರಾಜೀನಾಮೆ ನೀಡುವಂತೆ ಒತ್ತಾಯಿಸಿದ್ದಾರೆ. ಅಷ್ಟೇ ಅಲ್ಲದೆ, ಅದಕ್ಕೆ ಒಪ್ಪದ ಋತುಪರ್ಣಾಳನ್ನು ಮನಬಂದಂತೆ ಥಳಿಸಿದ್ದಾರೆ. ಅವರಲ್ಲಿ ಒಬ್ಬಳಾದ ಸಯಾತನಿ ಕಾರ್ ಎಂಬಾಕೆ ಋತುಪರ್ಣಾಳನ್ನು ಕೆಳಗೆ ಬೀಳಿಸಿ ಹೊಟ್ಟೆಗೆ ಒದ್ದು ಹಿಂಸೆ ನೀಡಿದ್ದಾಳೆ. ಇದರಿಂದ ತೀವ್ರವಾಗಿ ಗಾಯಗೊಂಡ ಋತುಪರ್ಣ ಚೇತರಿಸಿಕೊಳ್ಳಲು ನಾಲ್ಕೈದು ದಿನಗಳೇ ಬೇಕಾದವು.

ಇಲ್ಲಿನ ದುರ್ಗಾಪುರದಲ್ಲಿ ಇನ್ನೊಂದು ಪ್ರಕರಣವಿದೆ. ಇಲ್ಲಿನ ಕುಟುಂಬವೊಂದರ ಮೇಲೆ ಟಿಎಂಸಿ ಗೂಂಡಾಗಳು ಎರಗಿ ಬಿದ್ದಿದ್ದಾರೆ. 'ನೀವು ಸಿಪಿಐ(ಎಂ)ಗೆ ಮತ ಹಾಕಿದ್ದೀರಿ, ಆದ್ದರಿಂದ ನಿಮ್ಮ ಮನೆಗೆ ನೀರು ಪೂರೈಕೆ ಬಂದ್ ಶಿಕ್ಷೆ ಅನುಭವಿಸಿ' ಎಂದು ಮನೆಗೆ ನೀರು ಸಂಪರ್ಕ ಕಡಿದು ಹಾಕಲಾಗಿದೆ.

ಚುನಾವಣೆಗಳು ಮುಗಿದ ನಂತರ ಸಿಪಿಐ(ಎಂ)ಗೆ ಮತ ನೀಡಿದ ಜನರನ್ನು, ಪ್ರಚಾರ ಮಾಡಿದ ಕಾರ್ಯಕರ್ತರನ್ನು, ಮತಗಟ್ಟೆಯಲ್ಲಿ ಏಜೆಂಟ-ರಾಗಿ ಕೆಲಸ ಮಾಡಿದವರನ್ನು ಹುಡುಕಿ ಹುಡುಕಿ ಹೊಡೆಯುವುದು, ಬಡಿಯುವುದು ನಡೆಯುತ್ತಿದೆ. ಸಿಪಿಐ(ಎಂ) ಮತ್ತು ಎಡಪಕ್ಷಗಳ ಕಛೇರಿಗಳಿಗೆ ನುಗ್ಗಿ ಮೇಜು, ಕುರ್ಚಿ, ಫೋಟೋ ಫಲಕ ಇತ್ಯಾದಿಗಳನ್ನು ಕೆಡವಿ, ಪುಡಿಗುಟ್ಟಿ ಹಾಳುಮಾಡುವುದು, ಕಛೇರಿಯನ್ನೇ ವಶಪಡಿಸಿಕೊಳ್ಳುವುದು ರಾಜ್ಯದಾದ್ಯಂತ ನಡೆಯುತ್ತಿದೆ.



ಮನೆಗಳಿಗೆ ಬೆಂಕಿ

ಅದು ಸಿಪಿಐ(ಎಂ) ಶಾಸಕರು ಗೆದ್ದಿರುವ ಕ್ಷೇತ್ರ. ಜೂನ್ 1 ರಂದು ನಡೆದ ಭೀಕರ ಅನಿಸುವ ಈ ದಾಳಿ ನೋಡಿ. ಅಲ್ಲಿನ ಶಾಸಕರು ರಫೀಕುಲ್ಲಾ ಇಸ್ಲಾಂ. ಪಾಣಿಗೋಬ್ರ ಎನ್ನುವ ಗ್ರಾಮದಲ್ಲಿ ಗ್ರಾಮಸಭೆ ಸೇರಿಸಲು ಸೂಚಿಸಿದ್ದಾರೆ ಶಾಸಕರು. ಚುನಾವಣೆಯಲ್ಲಿ ಸೋತಿರುವ ಟಿಎಂಸಿ ಪಕ್ಷದ ಶಾಸಕ ಸ್ಥಾನದ ಅಭ್ಯರ್ಥಿ ಕಡೆಯಿಂದ ಜನರು ಗ್ರಾಮಸಭೆಗೆ ಹೋಗಬಾರದು ಎಂದು ಆದೇಶ ಬರುತ್ತದೆ. ಜನರು ಬೆದರಿಕೆಗೆ ಜಗ್ಗಲಿಲ್ಲ. ಗ್ರಾಮ ಸಭೆ ನಡೆಯಿತು. ಗ್ರಾಮಸಭೆಗೆ ಹೋದದ್ದೇ ಅಪರಾಧವಾಗಿ ತೃಣಮೂಲ ಗೂಂಡಾಪಡೆ ಬಡ ಗ್ರಾಮಸ್ಥರ ಮನೆಗಳಿಗೆ ಬೆಂಕಿ ಹಚ್ಚಿದ್ದಾರೆ. ನೆರೆ-ಯ ಸ್ವರೂಪ್‌ನಗರ ಮಾರುಕಟ್ಟೆ ಮುಂತಾದ ಪ್ರದೇಶಗಳಲ್ಲೂ ಅಂಗಡಿ ಮನೆಗಳಿಗೆ ಬೆಂಕಿ ಹಚ್ಚುವ ಇಂತಹ ದಾಳಿಗಳು ನಡೆಯುತ್ತಿವೆ.

ಇಂತಹ ಹೀನ ದಾಳಿಗಳನ್ನು ಜನ ಸಮೂಹಗಳ ಬೆಂಬಲದಿಂದ ಎದುರಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಮನೆಗೆ ನೀರು ಸಂಪರ್ಕ ಕಡಿದು ಹಾಕಿದ ಪ್ರಕರಣದಲ್ಲಿ ಸಂತ್ರಸ್ತರು ಮತ್ತು ಇತರರು ಕೂಡಿ ಪ್ರತಿಭಟನಾ ಮೆರಣಿವಣಿಗೆ ನಡೆಸಿದ್ದಾರೆ.

ಇಂತಹ ವ್ಯಾಪಕ ದಾಳಿಯನ್ನು ಪ್ರತಿಭಟಿಸಿ ಎಡರಂಗ ರಾಜ್ಯಾದ್ಯಂತ ಸಾಮೂಹಿಕ ಪ್ರತಿಭಟನಾ ಧರಣ ನಡೆಸುತ್ತಿದೆ.

ಬರಾಸಾತ್ ಜಿಲ್ಲಾಧಿಕಾರಿ ಕಛೇರಿ ಎದುರು ನಡೆದ ಸಾಮೂಹಿಕ ಪ್ರತಿಭಟನೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಡಾ. ಸೂರ್ಯಕಾಂತ್ ಮಿಶ್ರ ಸೇರಿದಂತೆ ಹಲವು ಪ್ರಮುಖ ಮುಖಂಡರು ಮತ್ತು ದೊಡ್ಡಸಂಖ್ಯೆಯ ಕಾರ್ಯಕರ್ತರು ಪಾಲ್ಗೊಂಡಿದ್ದಾರೆ.

ಕೇರಳ ಎಲ್‌ಡಿಎಫ್ ಸರಕಾರದ ಮೊದಲ ಕ್ರಮ ಜಿಶಾ ಕುಟುಂಬಕ್ಕೆ ಪುನರ್ವಸತಿ

ನೆರೆಯ ಕೇರಳದಲ್ಲಿ ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್ ಸರಕಾರ ಅಧಿಕಾರಕ್ಕೆ ಬಂದಿದೆ. ಪಿಣರಾಯಿ ವಿಜಯನ್ ನೇತೃತ್ವ ಮಂತ್ರಿಮಂಡಲ ರಚನೆಯಾಗಿದೆ.

ನೂತನ ಮಂತ್ರಿಮಂಡಲವು ಜನತೆಗೆ ಚುನಾವಣಾ ಪ್ರಚಾರದ ಸಮಯದಲ್ಲಿ ಎಲ್‌ಡಿಎಫ್ ಕೊಟ್ಟಿದ್ದ ಭರವಸೆಗಳನ್ನು ಈಡೇರಿಸುವ ಕ್ರಮಕ್ಕೆ ಮುಂದಾಗಿದೆ. ಇತ್ತೀಚೆಗೆ ದುಷ್ಕರ್ಮಿಗಳಿಂದ ಅತ್ಯಾಚಾರ ಮತ್ತು ಕೊಲೆಗೆ ತುತ್ತಾಗಿದ್ದ ಕಾನೂನು ವಿದ್ಯಾರ್ಥಿನಿ ಜಿಶಾ ಕುಟುಂಬಕ್ಕೆ ಪರಿಹಾರ ನೀಡುವ ಕ್ರಮ ಎಲ್‌ಡಿಎಫ್ ಸರಕಾರದ ಮೊತ್ತಮೊದಲ ತೀರ್ಮಾನವಾಗಿ ಜಾರಿಗೆ ಬಂದಿದೆ.



ಜಿಶಾ ಸೋದರಿ ದೀಪಾಗೆ ಸರಕಾರಿ ನೌಕರಿ ನೀಡುವ ಸಂಬಂಧ ಮಂತ್ರಿಮಂಡಲ ತೀರ್ಮಾನ ಕೈಗೊಂಡಿದೆ. ಎರ್ನಾಕುಲಂ ಜಿಲ್ಲೆಯ ಕುನ್ನತುಂಡ್ ತಾಲ್ಲೂಕು ಕಛೇರಿಯಲ್ಲಿ ಸಹಾಯಕಿಯಾಗಿ ಸರಕಾರಿ ಕೆಲಸವನ್ನು ನೀಡಲಾಗಿದೆ.

ಹರ್‍ಯಾಣದಲ್ಲಿ ಜಾತಿ ಧ್ರುವೀಕರಣದ ಯತ್ನಕ್ಕೆ ಖಂಡನೆ

ಹರ್‍ಯಾಣ ರಾಜ್ಯದಲ್ಲಿನ ಬೆಳವಣಿಗೆಗಳು ಬಹಳ ಆತಂಕಕಾರಿಯಾಗಿದೆ. ಕಳೆದ ಫೆಬ್ರವರಿ ತಿಂಗಳಿನಲ್ಲಿ ಮೀಸಲಾತಿ ವಿಷಯದಲ್ಲಿ ಜಾತಿ ಜಾತಿಗಳ ನಡುವೆ ಎತ್ತಿಕಟ್ಟುವಂತಹ ಬಹಳ ಅಹಿತಕರವಾದ ಬೆಳವಣಿಗೆಗಳಾಗಿದ್ದವು. ಇದು ಈಗಾಗಲೇ ಹರ್‍ಯಾಣದ ಸಾಮಾಜಿಕ ಜೀವನದಲ್ಲಿ ಗಂಭೀರವಾದ ಹಾನಿಯನ್ನು ಉಂಟು ಮಾಡಿದೆ.

ಆದರೆ ಬಹಳ ಆತಂಕ ವಿಷಯವೆಂದರೆ ಆಡಳಿತ ಪಕ್ಷವಾದ ಬಿಜೆಪಿ ಮತ್ತು ಇತರ ಪಕ್ಷಗಳ ಶಾಸಕರು ತಮ ತಮಗೆ ಬೇಕಾದ ಜಾತಿಗಳ ಪರವಹಿಸಿ ಬಹಿರಂಗ ಹೇಳಿಕೆಗಳನ್ನು ನೀಡುತ್ತಿದ್ದಾ-ರೆ. ಸಾಮಾಜಿಕವಾಗಿ ಅಭದ್ರತೆಯ ಭಾವನೆಯನ್ನು ಮತ್ತು ತಿಕ್ಕಾಟವನ್ನು ಪ್ರಚೋದಿಸುವಂತಹ ಮತ್ತು ಜಾತಿ ಧ್ರುವೀಕರಣಕ್ಕೆ ಕಾರಣವಾಗುವಂತಹ ಈ ಹೇಳಿಕೆಗಳನ್ನು ಸಿಪಿಐ(ಎಂ) ಹರ್‍ಯಾಣ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸಿದೆ. ಕೆಲವು ಜಾತಿಗಳಿಗೆ ಶಿಕ್ಷಣ ಮತ್ತು ಉದ್ಯೋಗ ನೇಮಕಾತಿಗಳಲ್ಲಿ ಮೀಸಲಾತಿ ನೀಡಬೇಕೆಂಬ ಮೀಸಲಾತಿ ನೀತಿಯ ವಿಷಯ ಈಗ ನ್ಯಾಯಾಲಯದ ಮುಂದಿದೆ. ಎಲ್ಲರೂ ನ್ಯಾಯಾಲಯದ ತೀರ್ಪು ಬರುವುದನ್ನು ಕಾಯಬೇಕು ಮತ್ತು ನ್ಯಾಯಾಲಯದ ತೀರ್ಪನ್ನು ಒಪ್ಪಿಕೊಳ್ಳಬೇಕು ಎಂದು ಸಿಪಿಐ(ಎಂ) ಕರೆ ನೀಡಿದೆ.

ಕಳೆದ ಫೆಬ್ರವರಿ ತಿಂಗಳಲ್ಲಿ ಆಗಿರುವ ಪ್ರಾಣ ಹಾನಿ, ಆಸ್ತಿಪಾಸ್ತಿ ನಷ್ಟದಿಂದ ರಾಜ್ಯ ಇನ್ನೂ ಚೇತರಿಸಿಕೊಳ್ಳಬೇಕಾಗಿದೆ. ಇಂತಹ ಸಮಯದಲ್ಲಿ ಸಾಮಾಜಿಕ ಸಂಘರ್ಷವನ್ನುಂಟು ಮಾಡುವ ಹೇಳಿಕೆಗಳನ್ನು ನೀಡುವುದು ಅತ್ಯಂತ ಅಪಾಯಕಾರಿ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಖಂಡಿಸಿದೆ. ಜಾಗತೀಕರಣ, ಉದಾರೀಕರಣ ನೀತಿಗಳನ್ನು ಜಾರಿಗೆ ತರುತ್ತಿರುವ ಈ ರಾಜಕೀಯ ಪಕ್ಷಗಳು ಕೇಂದ್ರದಲ್ಲೂ ಮತ್ತು ರಾಜ್ಯದಲ್ಲೂ ಜಾರಿಗೆ ತರುತ್ತಿರುವ ನೀತಿಗಳಿಂದ ಈಗಾಗಲೇ ಶಿಕ್ಷಣ ಮತ್ತು ಉದ್ಯೋಗಗಳಲ್ಲಿನ ಮೀಸಲಾತಿ ಹೊಡೆತ ಬಿದ್ದಿದೆ. ಈ ರಾಜಕೀಯ ಪಕ್ಷಗಳು ತಮ್ಮ ಸಂಕುಚಿತ ಹಿತಾಸಕ್ತಿಗಳಿಗಾಗಿ ಜನರನ್ನು ಪ್ರಚೋದಿಸುತ್ತಿದ್ದು ಇಂತಹ ಪ್ರಚೋದನೆಗಳಿಗೆ ಒಳಗಾಗಬಾರದು ಎಂದು ಹರ್‍ಯಾಣದ ಜನತೆಯಲ್ಲಿ ಸಿಪಿಐ(ಎಂ) ಮನವಿ ಮಾಡಿದೆ.

ಬಿಜೆಪಿ ಸರಕಾರವು ಕೇಂದ್ರದಲ್ಲಿ ಮತ್ತು ಹರ್‍ಯಾಣ ರಾಜ್ಯದಲ್ಲಿ ನೇಮಕಾತಿಗಳ ಮೇಲೆ ನಿಷೇಧ ಹೇರಿರುವುದನ್ನು ಮರೆಯಬಾರದು ಎಂದು ಸಿಪಿಐ(ಎಂ) ಮನವಿ ಮಾಡಿದೆ. ಗಂಭೀರಗೊಂಡಿರುವ ಕೃಷಿ ಬಿಕ್ಕಟ್ಟಿನ ವಿರುದ್ಧ ಜನರ ಬದುಕನ್ನು ಕಾಡುವ ಸಮಸ್ಯೆಗಳ ವಿರುದ್ಧ ಜನಗಳ ವಿಶಾಲ ಐಕ್ಯತೆ ಮೂಡಿಬರಬೇಕಾದ ಸಂದರ್ಭದಲ್ಲಿ ಜನರನ್ನು ಜಾತಿ ಆಧಾರದ ಮೇಲೆ ವಿಭಜಿಸುವ ಕುತಂತ್ರಗಳ ವಿರುದ್ಧ ಜನತೆ ಎಚ್ಚರದಿಂದ ಇರಬೇಕು ಎಂದು ಸಿಪಿಐ(ಎಂ) ಜನತೆಗೆ ಕರೆ ನೀಡಿದೆ.

ಭೀಕರ ಬರದಲ್ಲೂ ಸಿಗದ ಉದ್ಯೋಗ ಖಾತ್ರಿ ಕೆಲಸ.... ಪುಟ 13 ರಿಂದ

ಸಹಕಾರ್ಯದರ್ಶಿಗಳಾದ ಬಿ. ಹನುಮೇಶ, ವೈ. ಕೆ. ಪ್ರದೀಪಕುಮಾರ, ಶಂಕರಪ್ಪ, ಡಿ.ಸಿ.ಚೌಡೇಗೌಡ, ಶಿವಬೋರಯ್ಯ, ಯಶೋದಮ್ಮ, ಶುಭಾವತಿ, ಬಸವಣ್ಣ, ರಾಜಮ್ಮ, ಮಂಚೇಗೌಡ, ನೂರ್‌ಜಾನ್, ನಗೀನಾ ವಹಿಸಿದ್ದರು.

ಉಳಿದಂತೆ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದಿಂದ ಯಾದಗಿರಿ, ಕಲ್ಬುರ್ಗಿ ಜಿಲ್ಲೆಯ ಆಳಂದ, ಸೇಡಂ, ರಾಯಚೂರು ಜಿಲ್ಲೆಯ ಸಿಂಧನೂರು, ದಾವಣಗೆರೆ ಜಿಲ್ಲೆಯ ಹರಪ್ಪನಹಳ್ಳಿ, ಉಡುಪಿ ಜಿಲ್ಲೆ ಕುಂದಾಪುರ, ಕೊಪ್ಪಳ ಜಿಲ್ಲೆ ಗಂಗಾವತಿ, ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ, ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕುಗಳಲ್ಲಿ ಕೃಷಿ ಕೂಲಿಕಾರರು ಪ್ರತಿಭಟನೆ ನಡೆಸಿ ಸಿಇಓ ಗಳಿಗೆ ಮನವಿ ಸಲ್ಲಿಸಲಾಗಿದೆ. ವರ್ಷದಲ್ಲಿ 100 ದಿನಗಳ ಬದಲಾಗಿ ಕನಿಷ್ಠ 250 ದಿನ ಕೆಲಸ ಕೊಡಬೇಕು, ದಿನಗೂಲಿಯನ್ನು ರೂ.300ಕ್ಕೆ ಹೆಚ್ಚಿಸಬೇಕು, ಕೆಲಸದ ಸ್ಥಳದಲ್ಲಿ ಕುಡಿಯುವ ನೀರು, ವಿಶ್ರಾಂತಿಗೆ ನೆರಳು ಇತ್ಯಾದಿ ಸೌಕರ್ಯ ಕಲ್ಪಿಸಬೇಕು, ಕೆರೆ ಹೂಳೆತ್ತುವ ಕೆಲಸಕ್ಕೆ ಯಂತ್ರಗಳನ್ನು ಬಳಕೆ ಮಾಡದೆ ಕೂಲಿಕಾರರಿಂದಲೇ ಕೆಲಸ ಮಾಡಿಸಬೇಕು, ಬಾಕಿ ವೇತನ ಕೂಡಲೇ ಸಂದಾಯ ಮಾಡಬೇಕು, ವಾರಕ್ಕೊಮ್ಮೆ ಕೂಲಿ ಹಣ ಪಾವತಿ ಮಾಡಬೇಕು, ಕೂಲಿಕಾರರಿಗೆ ಉಚಿತವಾಗಿ 3 ಕೆ.ಜಿ. ಅಕ್ಕಿ, 2 ಕೆ.ಜಿ. ಗೋದಿಯನ್ನು ರೇಷನ್‌ನಲ್ಲಿ ಕೊಡುವುದನ್ನು ನಿಲ್ಲಿಸಿ ಮೊದಲಿನಂತೆ 2 ರೂ. ದರದಲ್ಲಿ ತಿಂಗಳಿಗೆ 30 ಕೆ.ಜಿ. ಅಕ್ಕಿ ನೀಡಬೇಕು, ಎಲ್ಲಾ ಕೂಲಿಕಾರ ಕುಟುಂಬಗಳಿಗೂ ಉಚಿತವಾಗಿ ಅಡುಗೆ ಅನಿಲ ಸಂಪರ್ಕವನ್ನು ಒದಗಿಸಬೇಕು ಮೊದಲಾದ ಬೇಡಿಕೆಗಳನ್ನು ಈಡೇರಿಸುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಒತ್ತಾಯಿಸಲಾಯಿತು.

ವರದಿ – ಕೆ. ಹನುಮೇಗೌಡ

ನಾಳಿನ ಕಾರ್ಯಕ್ರಮಗಳು

ಜೂನ್ 06 – ಎಡಪಕ್ಷಗಳ ರಾಜ್ಯ ಮಟ್ಟದ ಪ್ರತಿಭಟನಾ ಸಭೆ, ಬೆಂಗಳೂರು.

ಜೂನ್ 09 – ಜೆ.ಎಂ.ಎಸ್. ಬೆಂಗಳೂರು ಜಿಲ್ಲಾ ಸಮ್ಮೇಳನ, ಎಸ್.ಸಿ.ಎಂ. ಹೌಸ್, ಬೆಂಗಳೂರು.

ಸಿಐಟಿಯು ಜಿಲ್ಲಾ ಸಮ್ಮೇಳನಗಳು

ಜೂನ್ 5, 6, 7 : ದಕ್ಷಿಣ ಕನ್ನಡ ಜಿಲ್ಲೆ
ಜೂನ್ 11–12 : ಬೆಂಗಳೂರು ಉತ್ತರ ಜಿಲ್ಲೆ
ಜೂನ್ 19 : ಧಾರವಾಡ ಜಿಲ್ಲೆ
ಜೂನ್ 24–25 : ಬೆಂಗಳೂರು ದಕ್ಷಿಣ ಜಿಲ್ಲೆ
ಜೂನ್ 26–27 : ಬಳ್ಳಾರಿ ಜಿಲ್ಲೆ
ಜುಲೈ 8–9 : ಚಿಕ್ಕಬಳ್ಳಾಪುರ ಜಿಲ್ಲೆ
ಜುಲೈ 16–17 : ಮೈಸೂರು ಜಿಲ್ಲೆ
ಜುಲೈ 21–22 : ದಾವಣಗೆರೆ ಜಿಲ್ಲೆ
ಜುಲೈ 29–30 : ಕಲಬುರಗಿ ಜಿಲ್ಲೆ
ಜುಲೈ 30 : ಯಾದಗಿರಿ ಜಿಲ್ಲೆ
ಜುಲೈ 31– ಆಗಸ್ಟ್ 01 : ಕೋಲಾರ ಜಿಲ್ಲೆ
ಆಗಸ್ಟ್ 6–7 : ತುಮಕೂರು ಜಿಲ್ಲೆ
ಆಗಸ್ಟ್ 6–7 : ಹಾಸನ ಜಿಲ್ಲೆ

ದಲಿತ ಅಭಿವೃದ್ಧಿ 'ಕಳಪೆ' ಮಟ್ಟದಲ್ಲಿದೆ : ಚಂದ್ರ ಪೂಜಾರಿ


ವರದಿ: ವಸಂತರಾಜ ಎನ್. ಕೆ.

2014ರಲ್ಲಿ ಕರ್ನಾಟಕದ 30 ಜಿಲ್ಲೆಗಳಿಗೂ ತಯಾರಿಸಲಾದ ಜಿಲ್ಲಾ ಮಟ್ಟದ ಮಾನವ ಅಭಿವೃದ್ಧಿ ವರದಿಯಲ್ಲಿ, ದೇಶದಲ್ಲೇ ಮೊದಲ ಬಾರಿಗೆ ದಲಿತ ಅಭಿವೃದ್ಧಿ ಸೂಚ್ಯಂಕವನ್ನು ರೂಪಿಸಿ ಅಳೆಯಲಾಗಿದೆ. ರಾಜ್ಯದ ಸರಾಸರಿ ದಲಿತ ಅಭಿವೃದ್ಧಿ ಸೂಚ್ಯಂಕ 0.3 ಆಗಿದೆ. ಈ ಸೂಚ್ಯಂಕದ ಗರಿಷ್ಠ ಮಟ್ಟ 1 ಆಗಿದ್ದು, 0.3 'ಕಳಪೆ' ಮಟ್ಟ ಎಂದು ಪರಿಗಣಿಸಲಾಗುತ್ತದೆ. ಇದು ರಾಜ್ಯದಲ್ಲಿ ದಲಿತರ ಅಭಿವೃದ್ಧಿಯ ಮಟ್ಟವನ್ನು ಬಿಚ್ಚಿಟ್ಟಿದೆ. ಆದ್ದರಿಂದಲೇ ಏನೋ, ಎಲ್ಲಾ ಜಿಲ್ಲಾ ಮಟ್ಟದ ಮಾನವ ಅಭಿವೃದ್ಧಿ ವರದಿಗಳ ಸಾರಾಂಶ ಕೊಡುವ ರಾಜ್ಯ ಮಟ್ಟದ ವರದಿಯಲ್ಲಿ ಅದನ್ನು ಮರೆಮಾಚಲಾಗಿದೆ ಎಂದು ಹಂಪಿ ವಿ.ವಿ.ದ ಅಭಿವೃದ್ಧಿ ಅಧ್ಯಯನ ವಿಭಾಗದ ಪ್ರೊ. ಚಂದ್ರ ಪೂಜಾರಿ ಹೇಳಿದರು. ಅವರು ಕರ್ನಾಟಕ ದಲಿತ ಹಕ್ಕುಗಳ ಸಮಿತಿ ಬೆಂಗಳೂರಿನ ಸೆನೆಟ್ ಹಾಲ್‌ನಲ್ಲಿ ಸಂಘಟಿಸಿದ್ದ "ದಲಿತ ಮಾನವ ಅಭಿವೃದ್ಧಿ : ಸಮಸ್ಯೆ, ಸವಾಲುಗಳು ಮತ್ತು ಪರಿಹಾರಗಳು" ಎಂಬ ವಿಚಾರ ಸಂಕಿರಣದಲ್ಲಿ 'ದಲಿತ ಮಾನವ ಅಭಿವೃದ್ಧಿ' ಬಗ್ಗೆ ಮಾತನಾಡುತ್ತಿದ್ದರು.

ಈಗ ಬಳಸಲಾಗುತ್ತಿರುವ ಅಭಿವೃದ್ಧಿ ಸೂಚ್ಯಂಕ ಜಾತಿ–ಲಿಂಗ ತಾರತಮ್ಯಗಳು, ಅಸ್ಪೃಶ್ಯತೆ, ಹಾಗೂ ಇವುಗಳಿಂದ ಜಾತಿ ಏಣಿಯಲ್ಲಿ ಕೆಳಗಿರುವವರ ಅಭಿವೃದ್ಧಿಯ ಮೇಲೆ ಆಗುವ ಪರಿಣಾಮಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಇದಕ್ಕಾಗಿ ದಲಿತ ಅಭಿವೃದ್ಧಿಯ ಮಟ್ಟ ಅಳೆಯುವ ಸೂಚ್ಯಂಕವನ್ನು ಅಭಿವೃದ್ಧಿ ಪಡಿಸಲಾಗಿದೆ ಆದರೆ ಈ ಬಗ್ಗೆ ಜನಗಣತಿಯಲ್ಲಾಗಲಿ ಇತರ ಸಮೀಕ್ಷೆಗಳಲ್ಲಾಗಲಿ ಅಂಕೆ ಸಂಖ್ಯೆ ದೊರೆಯುವುದಿಲ್ಲ. ಇದಕ್ಕಾಗಿ ಪ್ರತಿ ಜಿಲ್ಲೆಯ ಒಂದು ಗ್ರಾಮ ಪಂಚಾಯತ್ ಪ್ರದೇಶದಲ್ಲಿ 50 ದಲಿತ ಕುಟುಂಬಗಳಲ್ಲಿ ಈ ಬಗ್ಗೆ ಕ್ಷೇತ್ರ ಸಮೀಕ್ಷೆ ನಡೆಸಲಾಯಿತು. ಈ ಮಾಹಿತಿಯನ್ನು ದಲಿತ ಅಭಿವೃದ್ಧಿಯ ಸೂಚ್ಯಂಕ ಅಳೆಯಲು ಬಳಸಲಾಗಿದೆ ಎಂದು ಪ್ರೊ. ಪೂಜಾರಿ ಅವರು ಹೇಳಿದರು. (ಈ ಸೂಚ್ಯಂಕವನ್ನು ಪ್ರೊ. ಪೂಜಾರಿ ಅವರೇ ಅಭಿವೃದ್ಧಿ ಪಡಿಸಿದ್ದಾರೆ.) ಈ ಸೂಚ್ಯಂಕಗಳನ್ನು ಮಾಡಿದರೆ ಸಾಲದು. ಈ ಸೂಚ್ಯಂಕಗಳನ್ನು ಬಳಸಿ ಅಭಿವೃದ್ಧಿ ನೀತಿಯಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಬೇಕು. ಇದಕ್ಕೆ ದಲಿತರಿಗೆ ಶಿಕ್ಷಣ, ಉದ್ಯೋಗ, ಭೂಮಿ, ಸಾಲಗಳು ಆದ್ಯತೆಯಲ್ಲಿ ದೊರಕಬೇಕು. ಆದರೆ ಯಾವ ಪಕ್ಷದ ಸರಕಾರ ಬಂದರೂ ಜಾಗತೀಕರಣದ ನೀತಿಗಳನ್ನು ಅನುಸರಿಸುತ್ತಿರುವಾಗ, ಈ ನಿಟ್ಟಿನಲ್ಲಿ ಪ್ರಗತಿ ಆಗುವ ಬದಲು ಹಿನ್ನಡೆ ಆಗುತ್ತಿದೆ ಎಂದು ಪ್ರೊ. ಪೂಜಾರಿ ಅವರು ಅಂಕೆಸಂಖ್ಯೆಗಳ ಸಮೇತ ವಿವರಿಸಿದರು. ಇದು ಬದಲಾಗಬೇಕಾದರೆ ದಲಿತರು ರಾಜಕೀಯ ಪ್ರಜ್ಞೆ ಬೆಳೆಸಿಕೊಂಡು ಬದಲಿ ನೀತಿಗೆ ಹೋರಾಡಬೇಕು. ಅವನ್ನು ಜಾರಿ ಮಾಡಬಲ್ಲ ರಾಜಕೀಯ ಶಕ್ತಿಗಳಿಗೆ ಬೆಂಬಲ ಕೊಡಬೇಕು ಎಂದು ಕರೆ ಕೊಟ್ಟರು.

'ಗೋಳೀಕರಣದ ದಲಿತ ವಿಮರ್ಶೆ ಬೇಕು': ಚೆನ್ನಿ

ಜಾಗತೀಕರಣವನ್ನು ಲೇಖಕ ಚಿಂತಕ ಎಚ್. ಎಸ್.ಶಿವಪ್ರಕಾಶ್ 'ಗೋಳೀಕರಣ' ('ಗೋಳ'ಎಂದರೆ ಜಗತ್ತು, ಎಲ್ಲರ ಗೋಳಿಗೆ ಕಾರಣವಾಗುತ್ತದೆ ಎಂಬ ಎರಡೂ ಅರ್ಥದಲ್ಲಿ) ಎಂದು ಕರೆದಿದ್ದರು. ಜಾಗತೀಕರಣ 'ಸರ್ವರಿಗೂ ಸಮಗೋಳು' ಹಂಚುತ್ತಿದೆ ಎಂಬುದರ ಬಗ್ಗೆ ಈಗ ಯಾರಿಗೂ ಸಂಶಯ ಉಳಿದಿಲ್ಲ. ಜಾಗತೀಕರಣವನ್ನು ಕಾರ್ಮಿಕರ, ಪರಿಸರದ, ಮಹಿಳೆಯರ ದೃಷ್ಟಿಕೋಣದಿಂದ ಗಂಭೀರವಾಗಿ ವಿಮರ್ಶೆ ಮಾಡಲಾಗುತ್ತಿದೆ. ಅದೇ ರೀತಿ ದಲಿತರ ದೃಷ್ಟಿಕೋಣದಿಂದ ಗಂಭೀರವಾಗಿ ವಿಮರ್ಶೆ ಮಡುವ ತುರ್ತು ಇದೆ ಎಂದು ಶಿವಮೊಗ್ಗದ ಕುವೆಂಪು ವಿ.ವಿ.ದ ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಪ್ರೊ. ರಾಜೇಂದ್ರ ಚೆನ್ನಿ ಅವರು ಹೇಳಿದರು. ಅವರು ಇದೇ ವಿಚಾರ ಸಂಕಿರಣದಲ್ಲಿ 'ಜಾತಿಪದ್ಧತಿ–ಅಸ್ಪೃಶ್ಯತೆಯ ಬೆಳವಣಿಗೆ : ಜಾಗತೀಕರಣದ ಪರಿಣಾಮಗಳು' ಎಂಬ ವಿಷಯದ ಬಗ್ಗೆ ಮಾತನಾಡಿದರು. ಬಹುರಾಷ್ಟ್ರೀಯ ವಿದೇಶಿ ಕಂಪನಿಗಳು ದಲಿತರ ವಿರುದ್ಧ ತಾರತಮ್ಯ ತೋರಲಿಕ್ಕಿಲ್ಲ. ಆದ್ದರಿಂದ ಜಾಗತೀಕರಣ ದಲಿತರಿಗೆ ಸಮಾನ ಅವಕಾಶಗಳನ್ನು ಒದಗಿಸಬಹುದು ಎಂಬ



ನಿರೀಕ್ಷೆ ಕೆಲವರಲ್ಲಿ ಇತ್ತು. ಆದರೆ ಜಾಗತೀಕರಣ ಎಲ್ಲ ರೀತಿಯ ಅಸಮಾನತೆಗಳನ್ನು ಇನ್ನಷ್ಟು ತೀವ್ರಗೊಳಿಸುವ ಮತ್ತು ಹೊಸ ಅಸಮಾನತೆಗಳನ್ನು ಸೃಷ್ಟಿಸುವಂತಹುದು ಎಂಬುದು ಅನುಭವದಿಂದ ಸಿದ್ಧವಾಗಿದೆ. ಪ್ರೊ. ಥೋರಟ್ ಅವರು ನಡೆಸಿದ ಒಂದು ಪ್ರಯೋಗದಿಂದ ಇದು ಪ್ರಾಯೋಗಿಕವಾಗಿಯೂ ಸಿದ್ಧವಾಯಿತು. ಜಾಗತೀಕರಣ ನಾಲ್ಕು ರೀತಿಯಲ್ಲಿ ಜಾತಿಪದ್ಧತಿ–ಅಸ್ಪೃಶ್ಯತೆ ಮತ್ತು ದಲಿತರ ಅಭಿವೃದ್ಧಿಯ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರಿದೆ ಎಂದು ಪ್ರೊ. ಚೆನ್ನಿ ಅವರು ವಾದಿಸಿದರು.

ಅವುಗಳಲ್ಲಿ ಮೊದಲನೆಯದು ಜಾಗತೀಕರಣ ನೀತಿಗಳ ಪರಿಣಾಮವಾಗಿ ಅಭಿವೃದ್ಧಿಯಲ್ಲಿ ಪ್ರಭುತ್ವಕ್ಕೆ ಯಾವುದೇ ಪಾತ್ರ ಇರಬಾರದು. ಅದನ್ನು ಪೂರ್ಣವಾಗಿ ಮಾರುಕಟ್ಟೆಗೆ ಬಿಟ್ಟುಕೊಡಬೇಕು ಎಂಬ ನೀತಿಯನ್ನು ಸರಕಾರಗಳು ಅನುಸರಸಬೇಕಾಗಿರುವುದು. ಸಣ್ಣ ರೈತರು, ಕೃಷಿಕೂಲಿಕಾರರರು, ದಲಿತರು, ಆದಿವಾಸಿಗಳಂತಹ ದುರ್ಬಲ ಜನವಿಭಾಗಗಳ ಅಭಿವೃದ್ಧಿಗೆ ವಿಶೇಷ ಗಮನ ಕೊಡುವ ಸರಕಾರಗಳಿಗಿರುವ ಅವಕಾಶಗಳಿಗೆ ಜಾಗತೀಕರಣ ಕಡಿವಾಣ ಹಾಕಿದೆ. ಇದು ಅಂತರ್ರಾಷ್ಟ್ರೀಯ ಸಾಲ, ವಾಣಿಜ್ಯ ಒಪ್ಪಂದಗಳ ಭಾಗವಾಗಿದ್ದು ಯಾವುದೇ ಸರಕಾರ ಇದಕ್ಕೆ ಬದ್ಧವಾಗಿರಬೇಕಾದ ಅನಿವಾರ್ಯತೆ ಇರುತ್ತದೆ. ಎರಡನೇಯದಾಗಿ ಜಾಗತೀಕರಣ ನೀತಿಗಳ ಪರಿಣಾಮವಾಗಿ ಬಂದಿರುವ ಶಿಕ್ಷಣ, ಉದ್ಯಮಗಳ ವ್ಯಾಪಕ ಖಾಸಗೀಕರಣ ಮೀಸಲಾತಿಯನ್ನು ಅಪ್ರಸ್ತುತ ಮತ್ತು ಅರ್ಥಹೀನವಾಗಿಸಿದೆ. ಮೂರನೇಯದಾಗಿ ಶಿಕ್ಷಣದಲ್ಲಿ (ಅದರಲ್ಲೂ ಉನ್ನತ ಶಿಕ್ಷಣದಲ್ಲಿ) ಮೀಸಲಾತಿಯ ಅಭಾವ ಮತ್ತು ವಿಪರೀತ ವ್ಯಾಪಾರೀಕರಣ, ಜಾಗತೀಕರಣ ಸೃಷ್ಟಿಸುತ್ತಿರುವ ಐಟಿ–ಬಿಟಿ ಮುಂತಾದ ಹೊಸ ಉದ್ಯೋಗಗಳು ಬೇಡುವ ಶಿಕ್ಷಣ ಕೌಶಲ್ಯ ದಲಿತರಿಗೆ ದಕ್ಕದಂತೆ ಮಾಡಿದೆ. ನಾಲ್ಕನೇಯದಾಗಿ ಜಾಗತೀಕರಣದಿಂದಾಗಿ ದಲಿತರ ಒಂದು ವಿಭಾಗ ಹೊಂದಿರುವ ಸಣ್ಣ ಹಿಡುವಳಿಗಳಲ್ಲಿ ಕೃಷಿ ಜೀವನೋಪಾಯವಾಗಿ ಅಸಾಧ್ಯ ಎಂಬ ಸ್ಥಿತಿ ಉಂಟಾಗಿರುವುದು. ಆದ್ದರಿಂದ ದಲಿತರು ಇದ್ದ ಬದ್ದ ಕೃಷಿ ಭೂಮಿಯನ್ನು ಮಾರಿ ನಗರಗಳಿಗೆ ಗುಳೆ ಹೋಗುವ ಪರಿಸ್ಥಿತಿ ಬಂದಿರುವುದು. ನಗರಗಳಲ್ಲೂ ಯಾವುದೇ ಹಕ್ಕು ಸವಲತ್ತುಗಳಿರದ ಅಸಂಘಟಿತ ಕಾರ್ಮಿಕರ ಕೊನೆಯ ಶ್ರೇಣಿಯಲ್ಲಿ ದಯನೀಯ ಪರಿಸ್ಥಿತಿಯಲ್ಲಿ ಬದುಕುವಂತಾಗಿರುವುದು. ಇಂತಹ ಪರಿಸ್ಥಿತಿಯಲ್ಲಿ ದಲಿತರ ಬದುಕಿನ ಮೇಲೆ ಜಾಗತೀಕರಣದ ದುಷ್ಪರಿಣಾಮಗಳ ಅಧ್ಯಯನ, ವಿಮರ್ಶೆಗಳನ್ನು ದಲಿತ ದೃಷ್ಟಿಕೋಣದಿಂದ ಮಾಡುವುದು ಸಾವು–ಬದುಕಿನ ಪ್ರಶ್ನೆ ಎಂದು ಪ್ರೊ. ಚೆನ್ನಿ ಹೇಳಿದರು.

ದಲಿತ ಉಪಯೋಜನೆಯ ದೌರ್ಬಲ್ಯಗಳು : ಟಿ.ಆರ್.ಸಿ.

'ದಲಿತ ಉಪಯೋಜನೆ ಬಗ್ಗೆ ಸರಕಾರದ ಧೋರಣೆ ಮತ್ತು ಜಾರಿ' ಬಗ್ಗೆ ಮಾತನಾಡುತ್ತಾ ಹಂಪಿ ವಿ.ವಿ.ಯ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಟಿ.ಆರ್. ಚಂದ್ರಶೇಖರ್ ದಲಿತ ಉಪಯೋಜನೆಗಳ ಜಾರಿಯ ಪ್ರಮುಖ ದೌರ್ಬಲ್ಯಗಳ ಬಗ್ಗೆ ಮಾತನಾಡಿದರು. ಮೊದಲನೇಯದಾಗಿ ದಲಿತ ಉಪಯೋಜನೆಗೆ ಕೊಟ್ಟ ಹಣ ಹತ್ತಾರು ಇಲಾಖೆಗಳ ನೂರಾರು ಕಾರ್ಯಕ್ರಮಗಳಿಗೆ 30 ಜಿಲ್ಲೆಗಳಿಗೆ ಹರಿಹಂಚಿ ಹೋಗುತ್ತದೆ. ಈ ರೀತಿ ಹರಿಹಂಚಿ ಹೋದಾಗ ವಿನಿಯೋಗವಾಗುವ ಹಣ ತೀರಾ ಕಡಿಮೆಯಾಗಿದ್ದು ಪರಿಣಾಮಕಾರಿ ಆಗಿರುವುದಿಲ್ಲ. ಇದರ ಬದಲಾಗಿ ನಿರ್ದಿಷ್ಟ ಗುರಿ ಇರುವ ದಲಿತರನ್ನು ಮುಟ್ಟುವ ವ್ಯಾಪಕ ಪರಿಣಾಮಕಾರಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಎರಡನೇಯದಾಗಿ ರಾಜ್ಯ ಮಟ್ಟದ ಕಾರ್ಯಕ್ರಮಗಳಿಗೆ ಉಪಯೋಜನೆಯ ಶೇ. 82 ಹಣ ಹೋದರೆ, ಶೇ. 18 ಮಾತ್ರ ಜಿಲ್ಲಾ ಮಟ್ಟದ ಕಾರ್ಯಕ್ರಮಗಳಿಗೆ ಹೋಗುತ್ತದೆ. ಪ್ರಾದೇಶಿಕ ಅಗತ್ಯಗಳು ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಳ್ಳದೆ ಯಾಂತ್ರಿಕವಾಗಿ ಜಿಲ್ಲೆಗಳಿಗೆ ಹಣ ಹಂಚಿಕೆಯಿಂದಲೂ ಹೆಚ್ಚಿನ ಪ್ರಯೋಜನವಾಗುವುದಿಲ್ಲ. ಉದಾಹರಣೆಗೆ ಕಲಬುರ್ಗಿ ವಿಭಾಗದಲ್ಲಿ ದಲಿತರ ಪ್ರಮಾಣ ಶೇ. 26 (ರಾಜ್ಯ ಸರಾಸರಿ ಶೇ. 18) ಇದ್ದರೂ ಉಳಿದ ಜಿಲ್ಲೆಗಳಷ್ಟೇ ಹಣ ಪಡೆಯುತ್ತದೆ. ಕಲಬುರ್ಗಿ ವಿಭಾಗದ ಜಿಲ್ಲೆಗಳಿಗೆ ಅತ್ಯಂತ ಹಿಂದುಳಿದುರುವಿಕೆ



ಹಾಗೂ ದಲಿತರ ಪ್ರಮಾಣ ಹೆಚ್ಚಿರುವುದು – ಈ ಎರಡೂ ಕಾರಣಗಳಿಗೆ ಹೆಚ್ಚು ಹಣ ಕೊಡಬೇಕಾಗುತ್ತದೆ. ಮೂರನೇಯದಾಗಿ ಈಗ ಕಾರ್ಯಕ್ರಮಗಳಿಗೆ ಹಣಕಾಸಿನ (ಕೊಟ್ಟ ಹಣ ಖರ್ಚಾಗಬೇಕು ಎಂಬ) ಮತ್ತು ಭೌತಿಕ (ಇಷ್ಟು ರಸ್ತೆ ಅಥವಾ ಹಾಸ್ಟೆಲ್ ಕಟ್ಟರಬೇಕು, ಇಷ್ಟು ಜನಕ್ಕೆ ಸ್ಕಾಲರ್ ಶಿಪ್ ಹಂಚಿರಬೇಕು) ಗುರಿಗಳು ಮಾತ್ರ ಇವೆ. ಇವನ್ನು ಮುಟ್ಟಿದರೆ ಸಾಕು. ಆದರೆ ಕಾರ್ಯಕ್ರಮಗಳ ಮೂಲ ಉದ್ದೇಶದ ಫಲಶ್ರುತಿ ಎಷ್ಟರ ಮಟ್ಟಿಗೆ ಆಗಿದೆ? ಇದನ್ನು ಅಳೆಯುವ ಒರೆಗಲ್ಲು ಏನು? ಎಂಬುದರ ಬಗ್ಗೆ ಯಾರೂ ತಲೆಕೆಡಿಸಿಕೊಂಡಿಲ್ಲ. ಹಾಸ್ಟೆಲ್ ಕಟ್ಟಿಸಿ ಸ್ಕಾಲರ್ ಶಿಪ್ ಕೊಟ್ಟು ದಲಿತ ವಿದ್ಯಾರ್ಥಿಗಳ ಶಾಲಾ ಹಾಜರಾತಿ, ಶಿಕ್ಷಣದ ಗುಣಮಟ್ಟ ಮೇಲೆ ಎಷ್ಟು ಪರಿಣಾಮ ಬೀರಿದೆ? ಆರೋಗ್ಯ ಸಂಬಂಧಿ ಕಾರ್ಯಕ್ರಮವಾದರೆ ಶಿಶು ಪ್ರಮಾಣ, ಗರ್ಭಿಣಿ ಮಹಿಳೆಯರ ರಕ್ತಹೀನತೆ ಎಷ್ಟರ ಮಟ್ಟಿಗೆ ಇಳಿದಿದೆ? – ಇಂತಹ ಒರೆಗಲ್ಲುಗಳು ಬೇಕಾಗುತ್ತವೆ.

ಈ ಪ್ರಮುಖ ದೌರ್ಬಲ್ಯಗಳನ್ನು ಸರಿಪಡಿಸಿದರೆ ಉಪಯೋಜನೆಗಳು ಪರಿಣಾಮಕಾರಿಯಾಗಬಲ್ಲವು ಎಂದು ಪ್ರೊ. ಟಿ.ಆರ್.ಚಂದ್ರಶೇಖರ್ ವಾದಿಸಿದರು. ಅವರು ದಲಿತ ಅಭಿವೃದ್ಧಿ ಯೋಜನೆಯನ್ನು 'ಉಪಯೋಜನೆ' ಎಂದು ಕರೆಯುವ ಧೋರಣೆಯನ್ನು ಶಿಷ್ಟರ ಮತ್ತು ಪರಿಶಿಷ್ಟರ ನಡುವೆ ತಾರತಮ್ಯ ತೋರುವ ಮನೋಧರ್ಮದ ಬಗ್ಗೆ ಆಕ್ಷೇಪವೆತ್ತಿದರು.

'ಇನ್ನೆಂದು ಬೆಳಗು ನಿಮಗೆ'

ಕೃಷಿ ಕೂಲಿಕಾರರ ಸಂಘಟನೆಯ ಅಧ್ಯಕ್ಷ ಕಾ. ನಿತ್ಯಾನಂದಸ್ವಾಮಿ ಅವರು ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ವಿಶೇಷ ಅತಿಥಿಗಳಾಗಿ ಆಗಮಿಸಿದ್ದ ಮಾಜಿ ಸಮಾಜ ಕಲ್ಯಾಣ ಇಲಾಖೆಯ ಮುಖ್ಯಸ್ಥ ಹಾಗೂ ದಲಿತ ಯೋಜನೆ ಜಾರಿಗೆ ವಿಶೇಷ ಸಲಹೆಗಾರರಾದ ಇ. ವೆಂಕಯ್ಯ ಅವರು ಮಾತನಾಡುತ್ತಾ ದಲಿತ ಸಂಘಟನೆಗಳು ಯೋಜನೆಯನ್ನು ರೂಪಿಸುವಲ್ಲಿ ಮತ್ತು ಜಾರಿ ಮಾಡುವಲ್ಲಿ ಭಾಗವಹಿಸಬೇಕು ಎಂದು ಕರೆಯಿತ್ತರು. ಸಭಿಕರಾಗಿ ಭಾಗವಹಿಸಿದ್ದ ಖ್ಯಾತ ಹಾಡುಗಾರ ಅಪ್ಪಗೆರೆ ತಿಮ್ಮರಾಜು 'ನಾನು ಕಳೆದ 40 ವರ್ಷಗಳಲ್ಲಿ ಕಂಡ ದಲಿತ ಸಂಘಟನೆಗಳು ಆಯೋಜಿಸಿದ ವಿಚಾರ ಸಂಕಿರಣಗಳಲ್ಲಿ ಇದೊಂದು ಅತ್ಯುತ್ತಮ ಅರ್ಥಪೂರ್ಣ ಕಾರ್ಯಕ್ರಮ' ಎಂದು ಹೊಗಳಿ ಸಂಘಟಕರನ್ನು ಅಭಿನಂದಿಸಿದರು, 'ಇದನ್ನು ಹಗುರವಾಗಿ ತೆಗೆದುಕೊಳ್ಳಬೇಡಿ, ಇದನ್ನು ಪುಸ್ತಕವಾಗಿ ತನ್ನಿ' ಎಂದು ಒತ್ತಿ ಒತ್ತಿ ಹೇಳಿದರು. ಅವರು ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಅವರ 'ಇನ್ನೆಂದು ಬೆಳಗು ನಿಮಗೆ' ಹಾಡನ್ನು ಅತ್ಯಂತ ಭಾವಪೂರ್ಣವಾಗಿ ಹಾಡಿದರು. ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಮಾರುತಿ ಮಾನ್ಪಡೆಯವರು ಮಾತನಾಡಿದರು. ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಯು. ಬಸವರಾಜ್ ಉಪಸ್ಥಿತರಿದ್ದರು. ಬಿ. ರಾಜಶೇಖರ ಮೂರ್ತಿ ಅವರು ನಿರೂಪಣೆ ಮಾಡಿದರು. ದಲಿತ ಹಕ್ಕುಗಳ ಸಮಿತಿಯ ಸಂಚಾಲಕ ಗೋಪಾಲಕೃಷ್ಣ ಅರಳಹಳ್ಳಿ ಅವರು ವಂದನಾರ್ಪಣೆ ಮಾಡಿದರು.

ಕಾರ್ಯಾಗಾರದ ನಿರ್ಣಯಗಳು

ವಿಚಾರ ಸಂಕಿರಣದ ನಂತರ ನಡೆದ ಕಾರ್ಯಾಗಾರದಲ್ಲಿ ದಲಿತ ಉಪಯೋಜನೆಯ ಅನುಷ್ಠಾನ ಕುರಿತು ಒಂದು ದಸ್ತಾವೇಜನ್ನು ಮಂಡಿಸಲಾಯಿತು. ಅದರಲ್ಲಿ ಪ್ರಸ್ತುತ ದಲಿತ ಉಪಯೋಜನೆ ಮತ್ತು ಅದರ ಅನುಷ್ಠಾನದ ಕುರಿತು ಒಟ್ಟಾರೆ ಮತ್ತು ಇಲಾಖಾವಾರು ಕಾರ್ಯಕ್ರಮಗಳ ವಿಮರ್ಶೆ ಮಾಡಲಾಗಿದೆ. ಈ ಬಗ್ಗೆ ಕಾರ್ಯಾಗಾರದಲ್ಲಿ ಚರ್ಚಿಸಲಾಯಿತು. ಈ ಚರ್ಚೆಯ ಫಲವಾಗಿ ಈ ಕೆಳಗಿನ ನಿರ್ಣಯಗಳನ್ನು ಕೈಗೊಳ್ಳಲಾಯಿತು:

1. ಎಸ್.ಸಿ/ಎಸ್.ಟಿ. ಉಪಯೋಜನೆ ಕಾಯಿದೆಯಲ್ಲಿ ಉಪಯೋಜನೆಯ ಹಣವನ್ನು ಬೇರೆ ಕೆಲಸಗಳಿಗೆ ವರ್ಗಾಯಿಸಲು ಅವಕಾಶ ಮಾಡುವ ಕಲಮನ್ನು ತೆಗೆದುಹಾಕಬೇಕು ಎಂದು ಸರಕಾರವನ್ನು ಒತ್ತಾಯಿಸಬೇಕು.
2. ಎಸ್.ಸಿ/ಎಸ್.ಟಿ. ಉಪಯೋಜನೆ ಕಾಯಿದೆಯ ಜಾರಿಗೆ ಅನುವಾಗುವಂತೆ ಕೂಡಲೇ ನಿಯಮಾವಳಿಗಳನ್ನು ರೂಪಿಸಬೇಕು ಎಂದು ಸರಕಾರವನ್ನು ಒತ್ತಾಯಿಸಬೇಕು.
3. ದಲಿತ ಉಪಯೋಜನೆಯಲ್ಲಿ – ದಲಿತ ಕಾಲೋನಿಗಳಿಗೆ ಮೂಲ ಸೌಕರ್ಯ ಒದಗಿಸುವ ಮತ್ತು ಮನುಷ್ಯ ಕೇಂದ್ರಿತ ಎಂಬ – ಎರಡು ರೀತಿಯ ಕಾರ್ಯಕ್ರಮಗಳಿವೆ. ಮನುಷ್ಯ ಕೇಂದ್ರಿತ ಕಾರ್ಯಕ್ರಮಗಳಿಗೆ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಫಲಾನುಭವಿಗಳನ್ನು ಗುರುತಿಸಿ, ಸಾವಿರಾರು ಅರ್ಜಿಗಳನ್ನು ಹಾಕಿಸಿ 'ಏಕಗವಾಕ್ಷಿ' ಮೂಲಕ ಅರ್ಜಿಗಳನ್ನು ಇತ್ಯಾರ್ಥ ಪಡಿಸುವಂತೆ ಒತ್ತಾಯಿಸಬೇಕು. ಜೂನ್–ಜುಲೈ ತಿಂಗಳಲ್ಲಿ ಅರ್ಜಿ ಹಾಕುವ ಆಂದೋಲನ ನಡೆಸಬೇಕು.

JANASHAKTHI KANNADA VARA PATRIKE JUNE 12, 2016 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಪ್ಲಾಂಟೇಶನ್ ಕಾರ್ಮಿಕರ ಯೂನಿಯನಿಗೆ 60ರ ಸಂಭ್ರಮ

ಎಚ್.ಆರ್. ನವೀನ್‌ಕುಮಾರ್

ಸುತ್ತಲೂ ಅಚ್ಚ ಹಸಿರು ಮಧ್ಯದಲ್ಲಿ ಕೆಂಬಾವುಟಗಳ ಹಾರಾಟ, ಬಾವುಟ ಹಿಡಿದ ಕಾರ್ಮಿಕರಲ್ಲಿ ಸಂಭ್ರಮ ಮತ್ತು ಸಂತೋಷ ಕಾಣಿಸುತ್ತಿದ್ದರೂ ಇನ್ನೊಂದೆಡೆ ತಮ್ಮ ಶ್ರಮದ ಬಹುಪಾಲನ್ನು ಕಿತ್ತುಕೊಳ್ಳುತ್ತಿರುವ ತೋಟದ ಮಾಲೀಕರ ವಿರುದ್ಧದ ಆಕ್ರೋಶ ಮತ್ತು ಈ ಮಾಲೀಕರಿಗೆ ಬೆಂಬಲವಾಗಿ ನಿಂತಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ದ ಸಿಟ್ಟು ಮಡುಗಟ್ಟಿತ್ತು. ಮತ್ತೊಂದೆಡೆ ಒಂದು ರೀತಿಯ ಭಾವೋದ್ವೇಗದ ವಾತಾವರಣ. ಕಳೆದ 60 ವರ್ಷಗಳಲ್ಲಿ ನಮ್ಮಂತಹ ಕಾರ್ಮಿಕರಿಗಾಗಿ ಹಗಲಿರುಳು ತಮ್ಮ ಸ್ವ-ಂತ ಹಿತಾಸಕ್ತಿಗಳನ್ನು ಬದಿಗೊತ್ತಿ ಕಾರ್ಮಿಕರ ಹಿತ ರಕ್ಷಣೆಗಾಗಿ ದುಡಿದ ಹಿರಿಯ ಚೇತನಗಳೊಂದಿಗೆ ಬೆರೆಯುವ ಅವಕಾಶ. ಇದೆಲ್ಲ ಕಂಡುಬಂದಿದ್ದು ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ ಮೇ 30 ರಂದು ನಡೆದ ಕರ್ನಾಟಕ ಪ್ರೊವಿನ್ಷಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ (KPPWU)ನ 60ನೇ ವಾರ್ಷಿಕೋತ್ಸವ ಮತ್ತು ಸಿಐಟಿಯು ಸ್ಥಾಪನಾ ದಿನಾಚರಣೆಯಲ್ಲಿ. 1956ರಲ್ಲಿ ಸ್ಥಾಪನೆಯಾದ ಈ ಸಂಘದ ವಜ್ರಮಹೋತ್ಸವವನ್ನು ಸಂಭ್ರಮದಲ್ಲಿ ಆಚರಿಸಲಾಯಿತು.

ತೋಟ ಕಾರ್ಮಿಕರ ಬದುಕು ಹಸನಾಗದೆ ಮಲೆನಾಡಿನ ಅಭಿವೃದ್ಧಿ ಅಸಾಧ್ಯ

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಿಐಟಿಯು ರಾಜ್ಯಾಧ್ಯಕ್ಷರಾದ ವಿ.ಜೆ.ಕೆ.ನಾಯರ್‌ರವರು ತೋಟ ಕಾರ್ಮಿಕರ ಬದುಕು ಹಸನಾಗದ ಹೊರತು ದೇಶದ ಅಭಿವೃದ್ಧಿ ಅಸಾಧ್ಯ. ಕೇಂದ್ರ ಸರ್ಕಾರ ದೇಶದ ಅಭಿವೃದ್ಧಿಯ ಬಗ್ಗೆ ಜಪ ಮಾಡುತ್ತಿದ್ದು ಇದಕ್ಕೆ ಅಗತ್ಯವಿರುವ ಕೈಗಾರಿಕೆಗಳಿಗೆ ಸೌಲಭ್ಯಗಳನ್ನು ಪೂರೈಸುತ್ತಿದೆ ಆದರೆ ಇದರ ಬೆನ್ನೆಲುಬಾಗಿರುವ ಕಾರ್ಮಿಕರ ಶ್ರೇಯೋಭಿವೃದ್ಧಿಗೆ ಚಿಂತಿಸುತ್ತಿಲ್ಲ. ತೆ-ೂಟ ಕಾರ್ಮಿಕರಿಗೆ ಉತ್ತಮ ವೇತನ ಹಾಗು ಸೌಲಭ್ಯ ಕಲ್ಪಿಸಿದ್ದರೆ ಮಲೆನಾಡು ಸಂಪೂರ್ಣ ಅಭಿವೃದ್ಧಿ ಹೊಂದುತ್ತಿತ್ತು. ಆದರೆ ಇದನ್ನು ಸರ್ಕಾರ ನಿರ್ಲಕ್ಷವಹಿಸುತ್ತಿದೆ. ತೊ ೀಟ ಕಾರ್ಮಿಕರ ಹಿತ ರಕ್ಷಣೆಗಾಗಿ 60 ವರ್ಷಗಳಿಂದ ನಿರಂತರ ಹೋರಾಟ ನಡೆಸಿದ ಫಲವಾಗಿ ಇಂದು ಬಹುತೇಕ ಕಾರ್ಮಿಕರ ಬದುಕು ಅಲ್ಪ ಮಟ್ಟಿಗೆ ಸುಧಾರಿಸಿದೆ. ಆದರೆ ಇನ್ನೂ ಹಲವು ಬೇಡಿಕೆಗಳಿಗಾಗಿ ನಿರಂತರವಾಗಿ ಹೋರಾಟ ನಡೆಯುತ್ತಿದೆ. ನಮ್ಮ ದೇಶದಲ್ಲಿ ಚಿನ್ನ ಸಿಗುವ ಪ್ರದೇಶವಿದೆ. ಅದನ್ನು ಗಣಿಗಾರಿಕೆ ಮಾಡಿದರೆ ನಮ್ಮ ದೇಶಕ್ಕೆ ಅಗತ್ಯವಾದ ಚಿನ್ನ ಉತ್ಪಾದಿಸಬಹುದು. 'ಮೇಕ್ ಇನ್ ಇಂಡಿ-ಯಾ' ಎಂದು ಮಾತನಾಡುವ ಪ್ರಧಾನಿ ಅದನ್ನು ಮಾಡಲು ಬೇಕಾದ ವ್ಯವಸ್ಥೆ ಮಾಡದೆ ವಿದೇಶಗಳಿಂದ ಚಿನ್ನವನ್ನು ತರಿಸಿಕೊಳ್ಳಲಾಗುತ್ತಿದೆ. ತೋಟ ಕಾರ್ಮಿಕರಿಗೆ ಕೂಲಿ ನೀಡುವ ವಿಚಾರ ಬಂದಾಗಲೆಲ್ಲ ದೊಡ್ಡ ದೊಡ್ಡ ಪ್ಲಾಂಟರ್‌ಗಳು ಈಗ ಕಾಫಿಗೆ ಬೆಲೆ ಇಲ್ಲ. ಅದಕ್ಕೆ ಕೂಲಿಯನ್ನು ಹೆಚ್ಚಿಸಲು ಸಾದ್ಯವಿಲ್ಲ ಎಂದು ವಾದಿಸುತ್ತಾರೆ ಆದರೆ ಇದೇ ಪ್ಲಾಂಟರ್‌ಗಳು ಹಿಂದೆ ಕಾಫಿಗೆ ಹೆಚ್ಚಿನ ಬೆಲೆ ಸಿಕ್ಕಿದ್ದಾಗಲೂ ಕಾರ್ಮಿಕರಿಗೆ ಕೂಲಿಯನ್ನು ಹೆಚ್ಚಳ ಮಾಡಿರಲಿಲ್ಲ. ಎಲ್ಲಿಯವರೆಗೆ ಕಾರ್ಮಿಕರಿಗೆ ಕೂಲಿಯನ್ನು ಹೆಚ್ಚಳ ಮಾಡುವುದಿಲ್ಲವೋ ಅಲ್ಲಿಯವರೆಗೆ ರಾಜ್ಯ ಉದ್ದಾರವಾಗುವುದಿಲ್ಲ. ರಾಜ್ಯದಲ್ಲಿ ಕೈಗಾರೀಕರಣದ ಅಭಿವೃದ್ದಿಗೆ ತೋಟ ಕಾರ್ಮಿಕರ ಪಾಲು ಇದೆ ಎನ್ನುವುದನ್ನು ಯಾರೂ ಮರೆಯುವಂತಿಲ್ಲ. ರಾಜ್ಯದಲ್ಲಿ ಸಿಐಟಿಯು ಚಳುವಳಿಯನ್ನು ಮುನ್ನಡೆಸಲು ಪ್ಲಾಂಟೇಷನ್ ಕಾರ್ಮಿಕರ ನಾಯಕತ್ವ ಕೊಡುಗೆ ನೀಡಿದೆ. ಈ ವಜ್ರಮಹೋತ್ಸವದ ಸಂದರ್ಭದಲ್ಲಿ ರಾಜ್ಯದ ಪ್ಲಾಂಟೇಶನ್ ಕಾರ್ಮಿಕರನ್ನು ದೊಡ್ಡ ಸಂಖ್ಯೆಯಲ್ಲಿ ಸಂಘಟಿಸಿ ಕಾರ್ಮಿಕ ಚಳುವಳಿಯನ್ನು ಬಲಪಡಿಸಬೇಕಾಗಿದೆ ಎಂದರು.

ಮಹೋತ್ಸವದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದ ಅಖಿಲ ಭಾರತ ಪ್ಲಾಂಟೇಷನ್ ಕಾರ್ಮಿಕರ ಫೆಡರೇಷನ್‌ನ ಅಧ್ಯಕ್ಷರಾದ ಲಾಲಾಜಿ ಬಾಬುರವರು ಕಾರ್ಮಿಕರು ಸಂಘಟಿತರಾಗಿ ಹೋರಾಟಕ್ಕಿಳಿದರೆ ಮಾತ್ರ ಬೇಡಿಕೆಗಳು ಈಡೇರುತ್ತವೆ. ತೋಟ ಕಾರ್ಮಿಕರ ಸಂಘಟನೆ ಸ್ಥಾಪನೆಯಾಗಿ 60 ವರ್ಷ ಪೂರೈಸಿದ್ದು ಸಂಘದ ಸಾಧನೆಯ ಸಿಂಹಾವಲೋಕನ ತೃಪ್ತಿ ತಂದಿದ್ದು ತೋಟದ ಪ್ರತಿಯೊಬ್ಬ ಕಾರ್ಮಿಕರು ಒಗ್ಗೂಡಿ ಸಂಘಟನೆಗೆ ಶಕ್ತಿ ತುಂಬಬೇಕು. ಹಿರಿಯ ಹೋರಾಟಗಾರರ ಮಾರ್ಗದರ್ಶನದಲ್ಲಿ ಸಂಘಟನೆಯನ್ನು ಬಲ ಪಡಿಸಬೇಕು. ತೋಟ ಕಾರ್ಮಿಕರ ಕಾಯ್ದೆ ಜಾರಿಗೆ ಕೇಂದ್ರ ಸರ್ಕಾರ ನಿರ್ಲಕ್ಷ ಧೋರಣೆ ಅನುಸರಿಸಿದೆ. ಅಭಿವೃದ್ಧಿ ಕನಸು ಬಿತ್ತಿ ಅಧಿಕಾರಕ್ಕೆ ಬಂದ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಸಂಪೂರ್ಣ ಬಂಡವಾಳಶಾಹಿಗಳ ಬಿಗಿಹಿಡಿತದಲ್ಲಿದೆ. ಇವರಿಗೆ ಅನುಕೂಲವಾಗುವ ಯೋಜನೆಗಳನ್ನು ಜಾರಿಗೆ ತರುವ ಉತ್ಸಾಹವನ್ನು ಶ್ರಮಿಕ ವರ್ಗದ ವಿಚಾರದಲ್ಲಿ ತೋರಲಿಲ್ಲ. ತೋಟ ಕಾರ್ಮಿಕರ ವಿಚಾರದಲ್ಲಿ ಕೇಂದ್ರ ಸರ್ಕಾರದ ವರ್ತನೆ ಹೀಗೇ ಮುಂದುವರೆದರೆ ದೇಶದಾದ್ಯಂತ ಉಗ್ರ ಪ್ರತಿಭಟನೆ ನಡೆಯುವುದು ಅನಿವಾರ್ಯವಾಗಲಿದೆ ಎಂದರು.





ಗುತ್ತಿಗೆ ಕಾರ್ಮಿಕರ ಸಂಘಟನೆ ತುರ್ತು ಅಗತ್ಯ

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಮಾತನಾಡಿ ಸಂಕಷ್ಟ ಕಾಲದಲ್ಲಿ ತೋಟಗಳಲ್ಲಿ ಕೆಲಸ ಮಾಡುತ್ತಿದ್ದ ಶ್ರಮಿಕ ವರ್ಗದ ಪರವಾಗಿ ಧ್ವನಿ ಎತ್ತಲು ಜನ್ಮ ತಾಳಿದ ಕೆಂಬಾವುಟಕ್ಕೆ 60 ವರ್ಷಗಳಾಗಿವೆ. ಕಾರ್ಮಿಕರ ಪರ ಧ್ವನಿ ಎತ್ತಲು ಕಷ್ಟವಿದ್ದ ಕಾಲದಲ್ಲಿ ಹಲವು ಜೀವಗಳನ್ನು ಬಲಿನೀಡಿ ಸಂಘಟನೆಗಳನ್ನು ಕಟ್ಟಲಾಯಿತು. ಆ ಮೂಲಕ ಕಾರ್ಮಿಕ ವರ್ಗಕ್ಕೆ ಸಾಧ್ಯವಾದಷ್ಟು ನ್ಯಾಯ ಒದಗಿಸುವಲ್ಲಿ ಸಂಘಟನೆ ಯಶಸ್ವಿಯಾಗಿದೆ. ಇದನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಎಲ್ಲರ ಸಹಕಾರ ಅಗತ್ಯ. ಈಗ ನಮ್ಮ ಮುಂದಿರುವ ಸವಾಲೆಂದರೆ ಸಂಘಟನೆಯನ್ನು ಭದ್ರಪಡಿಸಿ ವಿಸ್ತರಿಸುವುದು. ಇದಕ್ಕಾಗಿ ಸಂಘದ ಸದಸ್ಯರು ಶ್ರಮಿಸಬೇಕಿದೆ. 60 ವರ್ಷಗಳ ಹಿಂದೆ ಇದ್ದ ಕಾರ್ಮಿಕರ ಸ್ಥಿತಿ ಈಗಲೂ ಸಂಪೂರ್ಣ ಸುಧಾರಿಸಿಲ್ಲ. ಪ್ರತಿ ದಿನ ಹೊಟ್ಟೆ ತುಂಬ ಊಟ ಮಾಡುವಷ್ಟು ಸಂಬಳ ದೊರೆಯುತ್ತಿಲ್ಲ. ಸಮಸ್ಯೆಗೆ ಪರಿಹಾರ ಸಿಗಬೇಕಾದರೆ ಕಾರ್ಮಿಕ ಸಮೂಹ ಎಚ್ಚೆತ್ತುಕೊಂಡು ನಿಷ್ಠಾವಂತರನ್ನು ಚುನಾವಣೆಗಳಲ್ಲಿ ಗೆಲ್ಲಿಸಿ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕು. 7 ನೇ ವೇತನ ಆಯೋಗ ಶಿಫಾರಸ್ಸು ಮಾಡಿರುವಂತೆ ಕಾರ್ಮಿಕರಿಗೆ ಮಾಸಿಕ ಕನಿಷ್ಟ ವೇತನ 18 ಸಾವಿರ ರೂ ಸಂಬಳ ನೀಡಬೇಕು ಈ ನೀತಿ ತೋಟ ಕಾರ್ಮಿಕರಿಗೂ ಅನ್ವಯವಾಗಬೇಕು. ಸೆಪ್ಟೆಂಬರ್ 2 ರಂದು ನಡೆಯುವ ಅಖಿಲ ಭಾರತ ಮುಷ್ಕರದಲ್ಲಿ ಮೋದಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಸವಾಲನ್ನು ಹಾಕಬೇಕಿದೆ ಎಂದರು.

ಮತ್ತೋರ್ವ ಮುಖ್ಯ ಅತಿಥಿಗಳಾಗಿದ್ದ ಸಿಐಟಿಯು ರಾಜ್ಯ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಮಾತನಾಡಿ ನಾವು ತೋಟಗಳಲ್ಲಿ ಕಾಫಿ ಹಣ್ಣನ್ನು ಗಿಡದಿಂದ ಕಿತ್ತುಕೊಂಡರೆ ಮಾತ್ರ ಅದ-ರಿಂದ ಸ್ವಾದಿಷ್ಟವಾದ ಕಾಫಿಯನ್ನು ಕುಡಿಯಲು ಸಾ ಧ್ಯ. ಅದೇ ರೀತಿ ಕಾರ್ಮಿಕರು ಮಾಲೀಕರಿಂದ ನಮ್ಮ ಹಕ್ಕುಗಳನ್ನು ಕಿತ್ತುಕೊಂಡರೆ ಮಾತ್ರ ನಮ್ಮ ಬದುಕು ಹಸನಾಗುವುದು. ತೋಟ ಕಾರ್ಮಿಕರ ಚಳುವಳಿಯ ಇತಿಹಾಸ ರೋಚಕವಾಗಿದ್ದು ಆ ಪರಂರೆಯನ್ನು ಮುಂದುವರೆಸಿ ಚಳುವಳಿಯನ್ನು ಬಲಿಷ್ಟವಾಗಿ ಕಟ್ಟಲು ಎಲ್ಲರೂ ಮುಂದಾಗಬೇಕು. ಇತ್ತೀಚಿನ ವರ್ಷಗಳಲ್ಲಿ ಖಾಯಂ ಕಾರ್ಮಿಕರ ಸಂಖ್ಯೆ ತುಂಬ ಕಡಿಮೆ ಯಾಗಿದ್ದು ಪ್ರಸ್ತುತ ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡುತ್ತಿರುವ ಚಂಗುಲಿ (ಗುತ್ತಿಗೆ) ಕಾರ್ಮಿಕರನ್ನು ಅವರ ಬೇಡಿಕೆಗಳ ಆಧಾರದಲ್ಲಿ ಸಂಘಟಿಸುವ ತುರ್ತು ಅಗತ್ಯ ಇದೆ ಎಂದರು.

ಹಿರಿಯ ಮುಖಂಡರಿಗೆ ಗೌರವ

ವಜ್ರಮಹೋತ್ಸವದ ಅಂಗವಾಗಿ ಕಳೆದ 60 ವರ್ಷಗಳಿಂದ ತೋಟ ಕಾರ್ಮಿಕರ ಕರ್ನಾಟಕ ಪ್ರೊವಿನ್ಷಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ (ಏಕಕಘಗ) ಚಳುವಳಿಯನ್ನು ಮುನ್ನಡೆಸಿದ ಹಲವು ಹಿರಿಯ ಮುಖಂಡರನ್ನು ಕರೆಸಿ ಗೌರವಿಸಲಾಯಿತು. ಅದರಲ್ಲಿ ಕಾಂ.ವಿ.ಸುಕುಮಾರ್ ರವರು ಕಳೆದ 50 ವರ್ಷಗಳಿಂದ ಪ್ಲಾಂಟೇಷನ್ ಕಾರ್ಮಿಕರ ಚಳುವಳಿಯಲ್ಲಿ ಸಕ್ರಿಯರಾಗಿ ದುಡಿದಿದ್ದು ಇವರು 1986 ರಲ್ಲಿ KPPWU ನ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿ ಹಾಲಿ ಈಗ ಈ ಸಂಘದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಾಂ.ಎ.ಕೆ.ವಿಶ್ವನಾಥ್ ರವರು ಈಗಿರುವ ಎಲ್ಲ ಸಂಗಾತಿಗಳಿಗಿಂತ ಅತ್ಯಂತ ಹಿರಿಯರಾಗಿದ್ದು ಇವರಿಗೆ ಈಗ 80 ವರ್ಷಗಳಾಗಿವೆ ಇವರು ಸಂಘದ ಆರಂಬದ ದಿನಗಳಿಂದಲೂ ಜೊತೆ-ಗಿದ್ದು ಕೆಲಸ ನಿರ್ವಹಿಸಿದ್ದಾರೆ. ಕಾಂ.ಕೆ.ಸುಕುಮಾರ್ ರವರು ಚಿಕ್ಕಮಗಳೂರು ಜಿಲ್ಲೆಯ ಕಳಸ ಪ್ರದೇಶದಲ್ಲಿ ತೋಟಕಾರ್ಮಿಕರನ್ನು ಸಂಘಟಿಸಿ ಪ್ಲಾಂಟರ್‌ಗಳು ಮತ್ತು ಪೋಲೀಸರಿಂದ ಅತ್ಯಂತ ದಬ್ಬಾಳಿಕೆ ಮತ್ತು ದೌರ್ಜನ್ಯಕ್ಕೊಳಗಾಗಿ ಪೋಲೀಸರ ಲಾಠಿಏಟುಗಳು ಇವರಿಗೆ ಈಗಲು ಶಾಶ್ವತ ಗುರುತುಗಳನ್ನು ಮೂಡಿಸಿವೆ. ಇತರ ಸನ್ಮಾನಿತರು ಸ್ವತಃ ತೋಟ ಕಾರ್ಮಿಕರಾಗಿದ್ದು ಚಳುವಳಿಗೆ ಆಕರ್ಷಿತರಾಗಿ ಯೂನಿಯನಿಗೆ ದುಡಿದವರು. ಇವರುಗಳಿಗೆ ಕೆಂಪು ಶಾಲು ಹೊದಿಸಿ ನೆನಪಿನ ಕಾಣಿಕೆಯನ್ನು ಕೊಟ್ಟು ಅವರ ಪರಿಶ್ರಮವನ್ನು ಗೌರವಿಸಿ ಅಭಿನಂದಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರೂ ಹಿರಿಯರೂ ಆದ ವಿ.ಸುಕುಮಾರ್ ವಹಿಸಿದ್ದರು, ಪ್ರಾಸ್ತಾವಿಕವಾಗಿ ಸಂಘದ ಪ್ರಧಾನ ಕಾರ್ಯದರ್ಶಿ ಧರ್ಮೇಶ್ ಮಾತನಾಡಿದರು, ಕಾರ್ಯಕ್ರಮದ ನಿರೂಪಣೆಯನ್ನು ಸಂಘದ ಪದಾಧಿಕಾರಿಯಾಗಿದ್ದ ಸೌಮ್ಯ ನಡೆಸಿದರೆ. ಸ್ವಾಗತವನ್ನು ಉಪಾಧ್ಯಕ್ಷರಾದ ಹರೀಶ್ ಮತ್ತು ವಂದನಾರ್ಪಣೆಯನ್ನು ಖಜಾಂಚಿ ರಮೇಶ್ ಮಾಡಿದರು.



ಸನ್ಮಾನಿತರು : ಚಿತ್ರದಲ್ಲಿ ಕುಳಿತವರು ಎಡದಿಂದ ಕಾಂ॥ ಪಾಲ್ ಡಿ'ಸೋಜ, ಕಾಂ॥ ರಾಘು ಎಂ ಶೆಟ್ಟಿ, ಕಾಂ॥ ಕೆ. ಸುಕುಮಾರ್, ಕಾಂ॥ ಎ.ಕೆ. ವಿಶ್ವನಾಥ್, ಕಾಂ॥ ವಿ. ಸುಕುಮಾರ್, ಕಾಂ॥ ಅಣ್ಣು ಪೂಜಾರಿ, ಕಾಂ॥ ಕೃಷ್ಣಮೂರ್ತಿ, ಕಾಂ॥ ಬೋಜ ಪೂಜಾರಿ, ಕಾಂ॥ ಲೂಸಿಬಾಯಿ ಕಾಂ॥ ಮುರುಗೇಶ್ ಕಾಂ॥ ಎಸ್.ಪಿ. ಪ್ರಕಾಶ್,

ಹೆಚ್.ಆರ್. ನವೀನ್‌ಕುಮಾರ್



JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**